ಕರ್ನಾಟಕ
ಲೋಚನ

ಸಂಪುಟ ೧೦ ಡಿಸೆಂಬರ್ ೧೯೯೭ ಸಂಚಿಕೆ ೨

೩೦

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಬೆಂಗಳೂರು-೫೬೦ ೦೧೯

‘ಕರ್ನಾಟಕ ಲೋಚನ’

ಸಂಪಾದಕ ಮಂಡಲಿ

ಎನ್. ಬಸವಾರಾಧ್ಯ (ಅಧ್ಯಕ್ಷರು). ವಿದ್ವಾನ್ ಟಿ. ಕೇಶವ ಭಟ್ಟ (ಸಂಪಾದಕರು) ಎನ್. ಎಸ್. ರಾಮಸ್ವಾಮಿ ಅಯ್ಯರ್ (ಸಹಾಯಕ ಸಂಪಾದಕರು).

ಸದಸ್ಯರು : ಪ್ರೊ|| ಜಿ. ವೆಂಕಟಸುಬ್ಬಯ್ಯ, ಡಾ|| ಪಿ. ವಿ. ನಾರಾಯಣ. ಡಾ|| ಎಂ. ಚಿದಾನಂದಮೂರ್ತಿ, ಪ್ರೊ|| ಗರ್ಗೇಶ್ವರಿ ವೆಂಕಟಸುಬ್ಬಯ್ಯ, ಡಾ|| ಶ್ರೀನಿವಾಸ ಹಾವನೂರ, ಎಸ್. ಪ್ರೊ|| ಎಲ್.ಎಸ್. ಶೇಷಗಿರಿರಾವ್, ಪ್ರೊ|| ಕೆ.ಆರ್. ಗಣೇಶ್, ಶ್ರೀ ಎಸ್. ಶಿವಣ್ಣ, ಬೆಂಗಳೂರು. ಡಾ|| ಆರ್. ಶೇಷಶಾಸ್ತ್ರಿ, ಅನಂತಪುರ. ಡಾ|| ಟಿ. ವಿ. ವೆಂಕಟಾಚಲಶಾಸ್ತ್ರೀ, ಮೈಸೂರು. ಎಸ್. ಪಿ. ಪಾಟೀಲ, ಧಾರವಾಡ, ಡಾ|| ಶ್ರೀಕೃಷ್ಣ ಭಟ್, ಅರ್ತಿಕಜೆ, ಮದರಾಸು. ಡಾ|| ಬಿ. ರಾಮಚಂದ್ರರಾವ್, ಹೈದರಾಬಾದು, ಪ್ರೊ|| ವಸಂತ ಕುಷ್ಟಗಿ, ಗುಲ್ಬರ್ಗ.

ಲೇಖನಗಳು-ಟಿಪ್ಪಣಿಗಳು

ಸಂಶೋಧನಾತ್ಮಕ, ಪಾಂಡಿತ್ಯ–ವಿದ್ವತ್ ಪೂರ್ಣ ಲೇಖನಗಳು ಹಾಗೂ ಹೊಸದಾಗಿ ಪ್ರಕಟನಾಗುವ ಉತ್ತಮ ಮಟ್ಟದ ಸಂಪಾದಿತ ಗ್ರಂಥಗಳು ಮತ್ತು ಶಾಸ್ತ್ರ ಸಾಹಿತ್ಯದ ಗ್ರಂಥಗಳು–ಇವುಗಳ ಮೇಲಣ ವಿಮರ್ಶೆಗಳು ವಿದ್ವದ್ವಿಚಾರ ಮತ್ತು ವಿದ್ವತ್ ಪ್ರಪಂಚದ ವಿದ್ಯಮಾನ, ಇವುಗಳಿಗೆ ಸಂಬಂಧಿಸಿದ ಟೀಕೆ–ಟಿಪ್ಪಣಿಗಳು–ಇವುಗಳಿಗೆ ‘ಕರ್ನಾಟಕ ಲೋಚನ’ ಮೀಸಲಾಗಿದೆ.

ಯಾವುದೇ ಲೇಖನದಲ್ಲಿ ಮತ್ತು ಟಿಪ್ಪಣಿಗಳಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಜವಾಬುದಾರರು ; ಅವು ಅವಶ್ಯವಾಗಿ ಪ್ರತಿಷ್ಠಾನದ ಪರವಾಗಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಎಂದು ತಿಳಿಯತಕ್ಕದ್ದಲ್ಲ.

ಲೇಖನಗಳಿಗೆ ಆಹ್ವಾನ

ಮೇಲ್ಕಂಡ ವಾಕ್ಯವೃಂದದಲ್ಲಿ ವ್ಯಕ್ತಪಟ್ಟಿರುವ ಆಶಯಕ್ಕೆ ಅನುಗುಣವಾಗಿ ಲೇಖನಗಳನ್ನು ವಿದ್ವಾಂಸರೂ ಭಾಷೆ ಸಾಹಿತ್ಯಗಳ ಪ್ರೌಢವಿದ್ಯಾರ್ಥಿಗಳೂ ಕಳಿಸಿಕೊಡಬೇಕೆಂದು ವಿನಂತಿ. ಲೋಚನದ ಗಾತ್ರ ಪರಿಮಿತವಾದ್ದರಿಂದ ಲೇಖನಗಳು ಅಚ್ಚಿನ 6–8 ಪುಟಗಳ ಪರಿಮಿತಿಯಲ್ಲಿ ಇದ್ದರೆ ಅನುಕೂಲ. ಲೇಖನಗಳು ಹಾಳೆಯ ಒಂದೇ ಪಕ್ಕದಲ್ಲಿ ಸ್ಫುಟವಾದ ಅಕ್ಷರಗಳಲ್ಲಿ ಬರೆದಿರಬೇಕು. ಅಡಿ ಟಿಪ್ಪಣಿಗಳನ್ನು ಪುಟದ ಅಡಿಯಲ್ಲಿಯೇ ಕಾಣಿಸುವುದು ಒಳಿತು. ಗ್ರಂಥ–ಲೇಖನಾಧಾರ ವಿವರಗಳನ್ನು (Bibiliography) ಲೇಖನದ ಕಡೆಯಲ್ಲಿ ಕೊಡಬಹುದು. ಲೇಖನವನ್ನು ಹಿಂದಿರುಗಿಸಲಾಗದ್ದರಿಂದ ಲೇಖಕರು ತಮ್ಮ ಲೇಖನದ ಒಂದು ಪ್ರತಿಯನ್ನು ಉಳಿಸಿಕೊಂಡಿರಬೇಕಾಗಿ ವಿನಂತಿ.

ಕರ್ನಾಟಕ ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಆವರಣ, ಬಸವನಗುಡಿ ರಸ್ತೆ, ಬೆಂಗಳೂರು–560 019.

ಸಂಪಾದಕರು : ವಿದ್ವಾನ್ ಟಿ. ಕೇಶವ ಭಟ್ಟ

ಸಹಾಯಕ ಸಂಪಾದಕರು : ಎನ್. ಎಸ್. ರಾಮಸ್ವಾಮಿ ಅಯ್ಯರ್

ಸಂಪುಟ ೧೦ ಡಿಸೆಂಬರ್ ೧೯೮೭ ಸಂಚಿಕೆ ೨

ಪ ರಿ ವಿ ಡಿ

1. ಸಮಸ್ಯಾ ಪೂರಣ iii

2. ಹಸ್ತಪ್ರತಿಗಳ ಸ್ವರೂಪ 1
— ಬಿ. ಎಸ್. ಸಣ್ಣಯ್ಯ

3. ಮಹಾರಾಷ್ಟ್ರದ ಕನ್ನಡ ಶಾಸನಗಳಲ್ಲಿ ಸಿದ್ಧರಾಮ 5
— ಜಿ. ಎಸ್. ಉಪಾಧ್ಯ

4. ಸಾಗರದ ಶ್ರೀ ನಂಜುಂಡೇಶ್ವರ ದೇವಾಲಯ ಕುರಿತು ಅಪ್ರಕಟಿತ ಕಾಗದ ಪ್ರತಿ — ಡಾ|| ಕೆಳದಿ ವೆಂಕಟೇಶ ಜೋಯಿಸ್ 11

5. ಸಾಹಿತ್ಯ ಚರಿತ್ರೆಯಲ್ಲಿ 'ಅನುಭಾವ ಸಾಹಿತ್ಯ' ಒಂದು ಟಿಪ್ಪಣಿ 22
— ನಾ. ಗೀತಾಚಾರ್ಯ

6. ವೀರಣಾರ್ಯನ ಕಾಲ ಹಾಗೂ 'ಪ್ರಸಾದ ಚಾರಿತ್ರ' ಒಂದು ಟಿಪ್ಪಣಿ 26
— ಎಸ್. ಶಿವಣ್ಣ

7. ಟೀಕೆ–ಟಿಪ್ಪಣಿಗಳು

೧. ಕ್ರಿಯಾ ಸಮಾಸ –ಒಂದು ಉತ್ತರ 33
— ಎಂ. ಜಿ. ವಾರಿ

೨. ಒಂದು ವಚನದ ಬಗ್ಗೆ 36
— ಡಾ. ಎಸ್. ವಿ. ಪ್ರಭಾವತಿ

8. ಗ್ರಂಥಾವಲೋಕನ 39

9. ವಸ್ತು ಸಂಗ್ರಹ 52

10. ಪ್ರತಿಷ್ಠಾನ ವಾರ್ತೆ 59

Karnataka Lochana

Half-Yearly Journal, Published by B. M. Sri Smaraka
Prathisthana, Gokhale Institute of
Public Affairs Premises, Basavanagudi Road.

Bangalore-560 019

Vol. X December 1997 No. 2

CONTENTS

1. Samasya Poorna iii

2. Manuscripts —B. S. Sannaiah1 1

3. Siddharama in Kannada inscriptions of Maharastra — G. N. Upadhya 5

4. An unpublished letter about Sri Nanjundeswara temple at Sagar — Keladi Venkatesh Jois 11

5. Mystic Literature in History of Literature- A note. — N. Geethacharya 22

6. Veeranarya's Date and Prasada Charitrya — A note — S. Shivanna 26

7. NOTES & COMMENTS :

a. Kriya Samasa – A reply — M. G. Vari 33

b. About a Vachana — Dr. S. V. Prabhavathi 36

8. Book Review 39

9. Miscellaneous Notes 52

10. News of Prathistana 59

ಸಮಸ್ಯಾಪೂರಣ

[ವಿದ್ವತ್ಪತ್ರಿಕೆಯಾಗಿರುವ ಈ 'ಕರ್ನಾಟಕ ಲೋಚನ' ಸಂಪುಟ ೬, ಸಂಚಿಕೆ ೧ [ಜೂನ್ ೧೯೯೩] ಮೊದಲ್ಗೊಂಡು 'ಸಮಸ್ಯಾಪೂರಣ' ಎಂಬ ಅಂಕಣವನ್ನು ಪ್ರಾರಂಭಿಸಲಾಗಿದೆ. ಇದು ಕನ್ನಡದ ಅತಿಶಯ ಲಕ್ಷಣವೆನಿಸುವ ಪ್ರಾಸ-ಪಾದ-ಛಂದೋಬದ್ಧ ಪದ್ಯ ಕವಿತಾ ರಚನೆಗೆ ಸಜೀವತೆಯನ್ನು ನೀಡುವ ಉದ್ದೇಶವುಳ್ಳುದು. ಪ್ರತಿಸಂಚಿಕೆಯಲ್ಲಿಯೂ ಅದರ ಮುಂದಿನ ಸಂಚಿಕೆಗಾಗಿ ಸಮಸ್ಯಾಪದ್ಯಪಾದವನ್ನು ಕೊಡಲಾಗುತ್ತದೆ. ಒಬ್ಬೊಬ್ಬರಿಂದ ಒಂದೊಂದು ಪದ್ಯವನ್ನು ಮಾತ್ರ ಸ್ವೀಕರಿಸಲಾಗುತ್ತಿದೆ. ಈ ಸಂಚಿಕೆಗಾಗಿ ಕೊಡಲಾದುದು ಭಾಮಿನಿ ಷಟ್ಪದಿಯ ಪ್ರಯೋಗ : ಅದು ಹೀಗಿದೆ-"ಭಾವಶುದ್ಧಿಯ ಬಕುತಿ ಬೇಹುದು"

ಪ್ರಕಟಣೆಗಾಗಿ ಬಂದ ಸಮಸ್ಯಾಪೂರಣ ಪದ್ಯಗಳು-

1 ನಾವು ಸತಿ ಸುತ ಧನ ಗೃಹಾದಿಯ
ಧೀವಿಷಯವಾಗಿಟ್ಟು ಸತತವು
ತೀವಿದುರು ಚಿಂತೆಯಲಿ ಬೆಂದೆವು ಸಕಲ ಲೋಕಗಳ
ಕಾವ ಭಗವಂತನನು ಮೆಚ್ಚಿಸೆ
ಭಾವ ಶುದ್ಧಿಯ ಬಕುತಿ ಬೇಹುದು
ಸಾವು ಬಂದೊತ್ತರಿಸೆ ಹರಿ ಹರಿ ಎಂದೊಡೇನಹುದು ?

ವಿದ್ವಾನ್ ಎನ್. ರಂಗನಾಥ್ ಶರ್ಮಾ

2 ಆವ ಕಾರ್ಯದಲಿದ್ದರೂ ಸರಿ
ಭಾವಶುದ್ಧಿಯ ಬಕುತಿ ಬೇಹುದು
ಕಾವ ಕಣೆಗೊಂಡಡೆಯು ಬದುಕುವೆ ಬವಣೆಯಿಲ್ಲದಲೆ
ಆವ ರೀತಿಯಲಾದರೂ ಸರಿ
ಕಾವ ಕರುಣೆಯ ದಾರಿಯಲಿ ನಡೆ
ನಾವುತಂಗಿದಿರಹುದೆ ಮಾತಂಗಜವು ಲೋಕದಲಿ

ಬಿ. ಎಸ್. ಸಣ್ಣಯ್ಯ

3 ಸಕಲ ಲೋಕಂಗಳನು ಸೃಜಿಸುವ
ಸುಕರದಿಂ ಪಾಲಿಸುವ ಕಲ್ಪಾಂ
ತಕೆ ವಿಲಯವೆಸಗುತಿಹ ಲೀಲೆಯೊಳಿಸೆವ ದೇವರನು
ಪ್ರಕಟರೂಪದೆ ಕಾಂಬ ಪದಸೇ
ವಕನೆನಿಸುವೊಡೆ ಭಾವಶುದ್ಧಿಯ
ಬಕುತಿ ಬೇಹುದದಾಗದಿರಲು ನಿರರ್ಥವೀ ಬದುಕು

ಟಿ. ಕೇಶವ ಭಟ್ಟ

4 ದೇವನೇ ಬೇಗವತರಿಸು ಬಾ
ಯಾವ ಭಯವೂ ಭ್ರಷ್ಟಗಿಲ್ಲದೆ
ಮೇವು ಹಗರಣ ಜೈನ್ ಹವಾಲಾ ದ್ರೋಹ ಸಾಲುಗಳು!
ಸೇವೆ ಭಾವನೆ ಮನದಿ ಹೊಮ್ಮಲು
ಭಾವಶುದ್ಧಿಯ ಬಕುತಿ ಬೇಹುದು
ನೋವು ಶಿಷ್ಟಗೆ ನಲಿವು ಭ್ರಷ್ಟಗೆ ಲಂಚ ಸಂಚಯದಿ

ಮಾ. ವೆಂ. ಶ್ರೀನಾಥ

5 ಭಾವಶುದ್ಧಿಯ ಬಕುತಿ ಬೇಹುದ
ದಾವ ಜಾತಿಯೊಳಿದ್ದರೂ ಸರಿ
ಜಾವ ಜಾವದೊಳಿದ್ದು ಪೂಜೆಯ ಮಾಡಬೇಕಿಲ್ಲ
ಕಾವನನು ಜಯಿಸಿದ್ದು ಯಾರಿಗು
ನೋವಗೈಯದ ಭಕ್ತರನು ಹರಿ
ಕಾವನೆಂಬಾ ಮಾತೆ ಸತ್ಯವು ನಂಬಿ ನೀವೆಲ್ಲ

ಎಸ್. ಎನ್. ಸಿಂಹ

6 ನಾವು ಗೌರಿ ಗಣೇಶ ಹಬ್ಬವ
ಗೈವೆವೀ ಬೀದಿಯಲಿ ಭಕ್ತಿಯ
ಸೇವೆ ನಿಮ್ಮದು ಕೊಡಿರೆನುತ ಕೂಡಿಸಿದರಿಂ ತೆಗೆದು
ತಾವೆ ಕಾಫಿಗೆ ಸವೆಯಿಸುವ ಬಹು
ಭಾವುಕಾಡಂಬರಗಳೇತಕೆ ?
ಭಾವಶುದ್ಧಿಯ ಬಕುತಿ ಬೇಹುದು ಶುದ್ಧ ಭಕ್ತರಿಗೆ.

ಕೆ. ಪಿ. ರಾಜಗೋಪಾಲ್

ಹಸ್ತಪ್ರತಿಗಳ ಸ್ವರೂಪ

—ಬಿ. ಎಸ್. ಸಣ್ಣಯ್ಯ

ನಮ್ಮ ಪೂರ್ವಜರ ಸಾಹಿತ್ಯವೆಲ್ಲಾ ಓಲೆ ಕಾಗದ ಮತ್ತು ಇತರ ವಸ್ತುಗಳಲ್ಲಿ ಲಿಖಿತವಾಗಿರುವುದು ನಮಗೆಲ್ಲರಿಗೂ ತಿಳಿದ ವಿಷಯವಾಗಿದೆ. ಅದರಲ್ಲಿಯೂ ಕಾಗದ ಬಳಕೆಯಲ್ಲಿಲ್ಲದ ಕಾಲದಲ್ಲಿ ದಕ್ಷಿಣಭಾರತದಲ್ಲಿ ಓಲೆಗಳೇ ಪ್ರಧಾನವಾಗಿ ಬಳಕೆಯಾಗಿವೆ. ಪ್ರತಿ ಮಾಡುವಾಗ ಪ್ರತಿಕಾರರು ಮಾನವ ಸಹಜವಾದ ತಪ್ಪುಗಳನ್ನು ಮಾಡುತ್ತಾರೆ. ಅಲ್ಲದೆ ಆಯಾ ಕಾಲಕ್ಕೆ ತಕ್ಕಂತಹ ಎಂದರೆ ರೂಢಿಯಲ್ಲಿದ್ದಂತಹ ಲಿಪಿಗಳನ್ನು ಬಳಸಿರುವುದೂ ಉಂಟು. ಬರವಣಿಗೆಯಲ್ಲಿ ಕಂಡುಬರುವ ಅಕ್ಷರ ಸ್ಖಾಲಿತ್ಯಗಳು ಮತ್ತು ಇತರ ತಪ್ಪುಗಳನ್ನು ವಿವರವಾಗಿ ನಿರೂಪಿಸಿರುವುದನ್ನು ಬೇರೆಡೆ ಕಾಣಬಹುದು.[1]

ಅಕ್ಷರ ಸಾದೃಶ್ಯದಿಂದ ಅ–ಲ, ಒ–ಬ, ಕ–ತ, ಚ–ಬ,–ಈ ಮೊದಲಾದ ಅಕ್ಷರಗಳನ್ನು ಅದಲು ಬದಲಾಗಿ ಓದಿಕೊಂಡಿರುವುದೂ ಉಂಟು. ಅಲ್ಲದೆ ಹ್ರಸ್ವ ದೀರ್ಘಗಳು, ಅತ್ವ ಎತ್ವಗಳು, ಅಲ್ಪಪ್ರಾಣ ಮಹಾಪ್ರಾಣಗಳು, ಶಷಸಗಳಲ್ಲಿ ವ್ಯತ್ಯಯವಾಗುವುದುಂಟು. ಇಂತಹ ಇನ್ನೂ ಹಲವಾರು ತಪ್ಪುಗಳು ಪ್ರತಿಕಾರರಿಂದ ಆಗಿರುವುದನ್ನು ಗಮನಿಸಬಹುದು. 'ಭೇದಿಸು' ಎಂಬುದನ್ನು ಬರೆಯುವಾಗ ಲಿಪಿಕಾರರು 'ಭ' ಅಕ್ಷರವನ್ನು 'ದ' ರೂಪದಲ್ಲಿ ಸ್ವಲ್ಪ ಬದಲಾಗಿ ಬರೆದಿರುವುದನ್ನು ಕಾಣಬಹುದು. ಶಕ ೧೩೦೧ರಲ್ಲಿ ಪ್ರತಿಯಾಗಿರುವ ಆದಿಪುರಾಣದ ಒಂದು ಪ್ರತಿಯಲ್ಲಿ

ಶ್ರಿರಮಣಿನಿಳಯ ಜಿನಾ
ಗಾರಂಗಳು ತಂನ ಜಸದವೊಲು ವಸುದೆಗಳಂ
ಕಾರಂಗಳಾಗೆ ಪೂರ್ಣಮ
ನೊರಥನಾದಂ ಸರಸ್ವತಿಮಣಿಹಾರಂ

ಎಂಬಲ್ಲಿ ದೀರ್ಘಸ್ವರಗಳಿಲ್ಲದಿರುವುದನ್ನೂ 'ನ' ಒತ್ತಿಗೆ ಬದಲಾಗಿ ಅದರ ಹಿಂದೆ ಅನುಸ್ವಾರ, ಮಹಾಪ್ರಾಣಕ್ಕೆ ಅಲ್ಪಪ್ರಾಣ-ಇಂತಹ ಹಲವು ನ್ಯೂನತೆಗಳನ್ನು ಗಮನಿಸಿ

1. ಹಸ್ತಪ್ರತಿ ಶಾಸ್ತ್ರ ಪರಿಚಯ ; ಬಿ. ಎಸ್. ಸಣ್ಣಯ್ಯ, ಬಿ.ಎಂ.ಶ್ರೀ. ಪ್ರತಿಷ್ಠಾನ, ಬೆಂಗಳೂರು ೧೯೯೨.

ತಿದ್ದಿಕೊಳ್ಳಬೇಕಾಗುತ್ತದೆ. ಇದಕ್ಕೆ ಆಯಾ ಭಾಷೆಯ ಪೂರ್ಣಜ್ಞಾನ ಅತ್ಯವಶ್ಯವಾಗಿ ಇರಬೇಕಾಗುತ್ತದೆ. ಇಲ್ಲಿ 'ನ' ಒತ್ತಿಗೆ ಬದಲಾಗಿ ಅನುಸ್ವಾರ ಬಳಸಿರುವುದನ್ನು ಕಾಣುತ್ತೇವೆ. ಮತ್ತೆ ಕೆಲವೆಡೆ ತಂನ್ನ ಎಂಬಂತೆ ಅನುಸ್ವಾರ ಒತ್ತು ಎರಡನ್ನೂ ಉಪಯೋಗಿಸಲಾಗಿದೆ. ಆದರೆ ಇದೇ ರೀತಿಯಲ್ಲಿ ಉಳಿದ ಒತ್ತಕ್ಷರಗಳಿಗೂ ಅನುಸ್ವಾರ ಬಳಸಿರುವುದು ಕಂಡುಬರುವುದಿಲ್ಲ.

ಶ್ರವಣಬೆಳಗೊಳದ ಶ್ರೀಜೈನಮಠದ ಧವಳತೀರ್ಥದಲ್ಲಿ ರೂಪುಗೊಂಡಿರುವ 'ಆಗಮದರ್ಶನ' ಗ್ರಂಥಭಂಡಾರದಲ್ಲಿರುವ ಕೆಲವು ಪ್ರಾಕೃತ ಗ್ರಂಥಗಳ ಹಸ್ತಪ್ರತಿಗಳಲ್ಲಿ ಮತ್ತೊಂದು ರೀತಿಯ ಬರವಣಿಗೆಯನ್ನು ಕಾಣುತ್ತೇವೆ. ಕುಂದಕುಂದರ 'ಸಮಯಸಾರ' ಎಂಬ ಪ್ರಾಕೃತ ಗ್ರಂಥದ ಮೊದಲನೆಯ ಗಾಹೆಯನ್ನು ನೋಡಿ.

ವ೦ದಿಂತು ಸಂವಸಿಂದೆದುವಮುಚಳಮಣೊವಮು೦ಗದಿ೦ಪಂತೆ
ಬೊಂಛಾಮಿ ಸಮಯಪಾಹುತಮಿಣಮೊಸುದ ಕೆವಳಿ ಭಣಿಯ೦ ॥ ೧ ॥

ಇಲ್ಲಿ ದೀರ್ಘ ಮತ್ತು ಅಲ್ಪಪ್ರಾಣ ಮಹಾಪ್ರಾಣಗಳ ವ್ಯತ್ಯಾಸವಿಲ್ಲದಿರುವುದು ಸಾಮಾನ್ಯವಾಗಿ ಎಲ್ಲ ಓಲೆ ಗ್ರಂಥಗಳಲ್ಲಿ ಕಾಣಬರುವಂತಹದೇ ಆಗಿದೆ. ಆದರೆ ವಿಶೇಷವಾದ ಅಂಶವೆಂದರೆ ಎರಡು ರೀತಿಯ ಅನುಸ್ವಾರಗಳಿರುವುದು. ಇವುಗಳಲ್ಲಿ ದೇವನಾಗರಿಯಲ್ಲಿರುವಂತೆ ಅನುಸ್ವಾರವನ್ನು ಎರಡು ಅಕ್ಷರಗಳ ಮಧ್ಯೆ ಮೇಲ್ಭಾಗದಲ್ಲಿ ಸಣ್ಣ ಬಿಂದುವಿನ ರೂಪದಲ್ಲಿ ಬರೆಯಲಾಗಿದೆ. ಈ ರೀತಿಯ ಬರವಣಿಗೆಯನ್ನು ಕೆಲವು ಕನ್ನಡ ಶಾಸನಗಳಲ್ಲಿಯೂ ಕಾಣಬಹುದು. ಆದರೆ ಅಕ್ಷರಗಳ ಮಧ್ಯೆ ಇರುವ ಮತ್ತೊಂದು ಅನುಸ್ವಾರವು ಏನನ್ನು ಸೂಚಿಸುತ್ತದೆ ಎಂಬುದನ್ನು ಗಮನಿಸಬೇಕು. ಈ ಮೇಲಣ ಗಾಹೆಯನ್ನು ಈಗಿನ ರೂಪದಲ್ಲಿ

ವಂದಿತ್ತು ಸವ್ವ ಸಿದ್ಧೇ ಧುವಮುಚಳ ಮಣೋವಮಂ ಗದಿಂ ಪತ್ತೇ
ಬೊಚ್ಛಾಮಿ ಸಮಯಪಾಹುಡ ಮಿಣಮೋ ಸುದಕೇವಳೀ ಭಣಿಯಂ ॥೧॥

ಎಂದು ಬರೆಯಬೇಕಾಗುತ್ತದೆ.

ಪ್ರವಚನಸಾರ ಎಂಬ ಗ್ರಂಥದ ಮತ್ತೊಂದು ಹಸ್ತಪ್ರತಿಯನ್ನು ನೋಡಬಹುದು ಇದರಲ್ಲಿ ಬರುವ ಗಾಹೆಗಳಲ್ಲಿ

ಸಿಯ ಅಂಥಿಣಂಥಿ ಉಭಯ೦ ಅಂವತಂವ೦ ಪುಣೊ ಏತಂತಿ
ದಯ೦ ದಂವ೦ಖು ಸಂತ ಭ೦ಗ° ಆದೆಸವಸೆರಾಸ° ಭವದಿ ॥೧೪॥

ಇದನ್ನು

ಸಿಯ ಅತ್ಥಿ ಣತ್ಥಿ ಉಭಯಂ ಅವ್ವತವ್ವಂ ಪುಣೊ ಏತತ್ತಿ
ದಯಂ ದವ್ವಂಖು ಸತ್ತಭಂಗಂ ಆದೆಸವಸೇಣಸಂ ಭವದಿ ॥೧೪॥

ಎಂದು ಬರೆಯಬೇಕಾಗುತ್ತದೆ. ಆಗ್ಗೆ ಈ ಎರಡೂ ಬಿಂದುಗಳಿಗಿರುವ ವ್ಯತ್ಯಾಸವನ್ನು ಗಮನಿಸಬಹುದು. ಅಕ್ಷರ ಸಾಲುಗಳ ಮೇಲ್ಭಾಗದಲ್ಲಿರುವ ಸಣ್ಣ ಬಿಂದುವನ್ನು ಅನುಸ್ವಾರವೆಂತಲೂ, ಅಕ್ಷರಗಳ ಮಧ್ಯೆ ಸಾಲಿನಲ್ಲಿಯೇ ಬರುವ ದೊಡ್ಡ ರೂಪದ ಬಿಂದುವನ್ನು ಮುಂದಣಾಕ್ಷರದ ಒತ್ತಿಗೆ ಬದಲಾಗಿ ಉಪಯೋಗಿಸಿದೆಯೆಂತಲೂ ತಿಳಿಯ ಬಹುದು. ಹೀಗೆ ಉಪಯೋಗಿಸಿರುವ ಅನುಸ್ವಾರಗಳು ಕ್ರಮೇಣ ಒಂದೇ ಸಾಲಿನಲ್ಲಿ ಬಂದಿರುವುದನ್ನು ಇನ್ನು ಕೆಲವು ಹಸ್ತಪ್ರತಿಗಳಲ್ಲಿ ಕಾಣುತ್ತೇವೆ.

ಸಿಂದಂ ಸುಂದಂ ಪಣಮಿಯ ಜಿಣಿಂದವರ ಣೇಮಿಚಂದ ಮುಕಳಂಕಂ
ಗುಣರಯಣ ಭೂಸಣುದಯಂ ಜೀವಂಸ ಪರೂಪಣಂ ಬೊಂಭಂ॥

ಎಂಬ ರೂಪವು ಗೊಮ್ಮಟಸಾರದ ಹಸ್ತಪ್ರತಿಗಳಲ್ಲಿ (ಎಸ್ 2, ಎಸ್ 10) ದೊರೆಯು ತ್ತದೆ. ಇದನ್ನು ಸರಿಯಾದ, ಎಂದರೆ ಈಗಿನ ಬರವಣಿಗೆಯಲ್ಲಿ

ಸಿದ್ಧಂ ಸುದ್ಧಂ ಪಣಮಿಯ ಜಿಣಿಂದವರ ಣೇಮಿಚಂದಮುಕಳಂಕಂ
ಗುಣರಯಣ ಭೂಸಣುದಯಂ ಜೀವಸ್ಸ ಪರೂಪಣಂ ಬೊಚ್ಛಂ॥

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇದಕ್ಕೆ ಪೂರ್ವದ ಹಸ್ತಪ್ರತಿಗಳಲ್ಲಿ ಮೇಲ್ಭಾಗದಲ್ಲಿ ಸಣ್ಣ ರೂಪದಲ್ಲಿದ್ದ ಅನುಸ್ವಾರ ಅದೇ ಸಾಲಿನಲ್ಲಿ ಸೇರಿರುವುದು. ಒತ್ತಕ್ಷರದ ಅನುಸ್ವಾರಕ್ಕೂ ನಿಜವಾದ ಅನುಸ್ವಾರಕ್ಕೂ ದೊಡ್ಡ ಮತ್ತು ಸಣ್ಣರೂಪದ ಬಿಂದುಗಳನ್ನು ಬರೆದು ವ್ಯತ್ಯಾಸವನ್ನು ತೋರಿಸಲಾಗಿದೆ.

ಹೀಗೆ ಒತ್ತಕ್ಷರಕ್ಕೆ ಬದಲಾಗಿ ಅನುಸ್ವಾರವನ್ನು ಉಪಯೋಗಿಸಿ ಬರೆದಿರುವ ಹಸ್ತಪ್ರತಿಗಳು ಬಹಳ ಅಪರೂಪವೆಂದೇ ಹೇಳಬಹುದು. ಇದರ ಆಧಾರದ ಮೇಲೆ ಹಸ್ತಪ್ರತಿಗಳ ಕಾಲವನ್ನು ನಿರ್ಣಯಿಸಬಹುದಾಗಿದೆ. ಡಾ|| ಎ. ವಿ. ನರಸಿಂಹ ಮೂರ್ತಿಯವರು ಅನುಸ್ವಾರದ ಬಳಕೆಯ ಬಗೆಗೆ ತಮ್ಮ ಗ್ರಂಥದಲ್ಲಿ [1]"ಅಶೋಕನ ಕಾಲದ ಬ್ರಾಹ್ಮೀಲಿಪಿಯಲ್ಲಿ ಅನುಸ್ವಾರವನ್ನು ಸೂಚಿಸಲು ಅಕ್ಷರದ ಎಡಭಾಗದ ಮೇಲ್ಭಾಗದಲ್ಲಿ ಒಂದು ಬಿಂದುವನ್ನು ಬರೆಯುತ್ತಿದ್ದರು. ಇದೇ ಪದ್ಧತಿಯೇ ಕೆಲವು ಕಾಲ ಮುಂದುವರಿಯಿತು. ಕಾಲಕ್ರಮೇಣ ಈ ಬಿಂದುವು ಸ್ವಲ್ಪ ದಪ್ಪವಾಯಿತು. ಗಂಗರ ಶಾಸನಗಳಲ್ಲಿ ದಪ್ಪವಾದ ಬಿಂದುಗಳನ್ನು ಕಾಣಬಹುದು. ರಾಷ್ಟ್ರಕೂಟರ ಕಾಲದಲ್ಲಿ ಬಿಂದುವು ಅತಿಸಣ್ಣ ವೃತ್ತದಂತೆ ಪರಿವರ್ತಿತವಾಗಿರುವುದನ್ನು ನಾವು ನೋಡು

---

1. ಕನ್ನಡ ಲಿಪಿಯ ಉಗಮ ಮತ್ತು ವಿಕಾಸ : ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೫.

ತ್ತೇವೆ. ಕಲ್ಯಾಣಿ ಚಾಳುಕ್ಯರ ಕಾಲದಲ್ಲಿ ಈ ವೃತ್ತವು ಇನ್ನೂ ಸ್ವಲ್ಪ ದೊಡ್ಡದಾಗಿರುತ್ತದೆ. ಹೊಯ್ಸಳರ ಕಾಲದಲ್ಲಿ ವೃತ್ತವು ದೊಡ್ಡದಾಗಿ ಎಡಪಕ್ಕದಲ್ಲಿ ಅದೇ ಸಾಲಿನಲ್ಲಿ ಬರೆಯಲ್ಪಡುವುದನ್ನು ನಾವು ನೋಡುತ್ತೇವೆ. ಆದರೂ ಕೂಡ ಅಕ್ಷರದ ಮೇಲ್ಭಾಗದಲ್ಲಿ ಬರೆಯುವುದೂ ಕೂಡ ಬಳಕೆಯಲ್ಲಿದ್ದಿತು. ವಿಜಯನಗರ ಕಾಲದಲ್ಲಿ ಸೊನ್ನೆಯನ್ನು ಪಕ್ಕದಲ್ಲಿ ಬರೆಯುವ ಪ್ರವೃತ್ತಿ ಸ್ಥಿರಗೊಂಡಿತೆಂದು ಹೇಳಬಹುದು. ಅದೇ ಮುಂದೆಯೂ ಬಳಕೆಗೆ ಬಂದಿತು" ಎಂದು ಹೇಳಿದ್ದಾರೆ.

ಈ ಹೇಳಿಕೆಯಂತೆ ಅನುಸ್ವಾರವು ಅಶೋಕನ ಕಾಲ (ಕ್ರಿ. ಪೂ. 2ನೇ ಶ.)ದಲ್ಲಿ ಅಕ್ಷರಗಳ ಮೇಲ್ಭಾಗದಲ್ಲಿ ರುತ್ತಿದ್ದುದು ಕಲ್ಯಾಣಿ ಚಾಲುಕ್ಯರ ಕಾಲದ(ಕ್ರಿ.ಶ.೧೧ನೇಶ) ಹೊತ್ತಿಗೆ ಬಿಂದುವು ದೊಡ್ಡದಾಗಿದ್ದು, ೧೩ನೆಯ ಶ.ನದಲ್ಲಿದ್ದ ಹೊಯ್ಸಳರ ಕಾಲಕ್ಕೆ ಅದೇ ಸಾಲಿನಲ್ಲಿ ಬರೆಯುವಂತಾಯಿತು. ಆದರೆ ಇಲ್ಲೆಲ್ಲಿಯೂ ಒತ್ತಕ್ಷರಗಳಿಗೆ ಬದಲಾಗಿ ಅನುಸ್ವಾರವು ಬರುವುದನ್ನು ಸೂಚಿಸಿರುವುದಿಲ್ಲ. ಎಂದರೆ ಶಾಸನಗಳಲ್ಲಿ ಈ ರೂಪ ಇಲ್ಲ ಎಂದು ಪರಿಗಣಿಸಬಹುದು 'ತಂನ' ಎಂಬಂತಹ 'ನ' ಒತ್ತಿಗೆ ಬದಲಾಗಿ ಅನುಸ್ವಾರ ಬರುವುದನ್ನು ಕೆಲವು ಹಸ್ತಪ್ರತಿಗಳಲ್ಲಿ ಕಾಣುತ್ತೇವೆ. ಆದರೆ ಉಳಿದಂತೆ ಯಾವ ಒತ್ತಕ್ಷರಗಳಿಗೂ ಅನುಸ್ವಾರ ಬರುವುದಿಲ್ಲ. ಈಗ ಉದಾಹರಿಸಿರುವ ಗಾಹೆಗಳಲ್ಲಿ ಬರುವ ಅನುಸ್ವಾರಗಳು ಸಜಾತೀಯ ಒತ್ತಕ್ಷರಗಳಿಗೆ ಮಾತ್ರ ಮೀಸಲಾಗಿವೆ. ಇವೇ ಹಸ್ತಪ್ರತಿಗಳಲ್ಲಿ ಬರುವ 'ತಮ್ಹಿ' ಎಂಬಂತಹ ವಿಜಾತೀಯ ಒತ್ತಕ್ಷರಗಳಿಗೆ ಒತ್ತಕ್ಷರಗಳನ್ನೇ ಬಳಸಿರುವುದನ್ನು ಕಾಣುತ್ತೇವೆ.

ಈ ಆಧಾರದಿಂದ ಮತ್ತು ಲಿಪಿಸಾದೃಶ್ಯದಿಂದ ಸಮಯಸಾರ ಪ್ರವಚನಸಾರ ಗ್ರಂಥಗಳ ಹಸ್ತಪ್ರತಿಗಳ ಕಾಲವನ್ನು ಸು. ೧೦–೧೧ನೆಯ ಶತಮಾನವೆಂದು ಹೇಳಬಹುದಾಗಿದೆ. ಇದುವರೆಗೂ ಯಾವ ಹಸ್ತಪ್ರತಿಯಲ್ಲಿಯೂ ಕಾಣದಿದ್ದ ಅಪರೂಪದ ಪ್ರಯೋಗ ಇದೆಂಬುದು ಇಲ್ಲಿ ಮನನ ಮಾಡಬೇಕಾದ ಬಹುಮುಖ್ಯ ವಿಷಯವಾಗಿದೆ. ಈ ರೀತಿಯ ಬರವಣಿಗೆ ಬಹುಶಃ ಪ್ರಾಕೃತ ಭಾಷೆಗೇ ಮೀಸಲಾಗಿರುವಂತೆಯೂ ತೋರುತ್ತದೆ.

○

ಮಹಾರಾಷ್ಟ್ರದ ಕನ್ನಡ ಶಾಸನಗಳಲ್ಲಿ ಸಿದ್ಧರಾಮ

—ಜಿ. ಎನ್. ಉಪಾಧ್ಯ

ಹನ್ನೆರಡನೆಯ ಶತಮಾನ ಕರ್ನಾಟಕದ ಇತಿಹಾಸದಲ್ಲಿ ಒಂದು ಮಹತ್ವದ ಘಟ್ಟ. ಈ ಕಾಲಖಂಡದಲ್ಲಿ ಆಗಿಹೋದ ಪ್ರಮುಖ ಶರಣರಲ್ಲಿ ಸೊನ್ನಲಿಗೆಯ ಸಿದ್ಧರಾಮನೂ ಒಬ್ಬ. ಬಸವಣ್ಣ, ಪ್ರಭುದೇವ, ಚನ್ನಬಸವಣ್ಣ ಮೊದಲಾದ ಶಿವ ಶರಣರ ಸಮಕಾಲೀನನಾಗಿ ಈತ ಬಾಳಿದ. ಹರಿಹರ ರಾಘವಾಂಕರ ಕೃತಿಗಳಲ್ಲಿಯೂ ಸಿದ್ಧರಾಮನ ಪ್ರಸ್ತಾಪವಿದೆ. ಸಿದ್ಧರಾಮ ರಚಿಸಿದ ವಚನಗಳಲ್ಲಿಯೂ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಹಾವಿನಹಾಳ ಕಲ್ಲಯ್ಯ, ಚೆನ್ನಬಸವಣ್ಣ ಮೊದಲಾದ ಶರಣರ ಉಲ್ಲೇಖವಿದೆ. ಸಿದ್ಧರಾಮನಿಗೆ ಸಂಬಂಧಿಸಿದ ಅನೇಕ ಶಾಸನಗಳು ಇಂದಿನ ಕರ್ನಾಟಕ ಹಾಗೂ ಮಹಾರಾಷ್ಟ್ರದಲ್ಲಿ ಉಪಲಬ್ಧವಾಗಿವೆ. ಈ ಶಾಸನಗಳಲ್ಲಿ ಸಿದ್ಧರಾಮನ ವಚನಗಳೆಂದು ಎರಡು ಗದ್ಯಖಂಡಗಳು ಕಾಣಸಿಗುತ್ತವೆ.

"ಸಾಕಾರದೊಳು ನಿಷ್ಠೆ ಭೂತಂಗಳೊಳು ಅನುಕಂಪೆ ಅನುಗೊಂಬನಿತು ಕಾಯಕ" ಇದು ಸಿದ್ಧರಾಮನ ಜೀವನ ಸಿದ್ಧಾಂತ. ಸಿದ್ಧರಾಮ ಧಾರ್ಮಿಕ ಮಹಾಪುರುಷನೂ ಹೌದು, ಐತಿಹಾಸಿಕ ವ್ಯಕ್ತಿಯೂ ಹೌದು. ಸಿದ್ಧರಾಮ ಸೊನ್ನಲಿಗೆಯಲ್ಲಿ (ಇಂದಿನ ಸೊಲ್ಲಾಪುರದಲ್ಲಿ) ಬೃಹತ್ ಕೆರೆಯೊಂದನ್ನು ಕಟ್ಟಿಸಿದನು. ಕಾವ್ಯಗಳಲ್ಲಿ ಆತನನ್ನು ಪವಾಡ ಪುರುಷನೆಂದೇ ಚಿತ್ರಿಸಲಾಗಿದೆ. ಲೋಕಕಲ್ಯಾಣವೇ ಅವನ ಮುಖ್ಯ ಧ್ಯೇಯವಾಗಿತ್ತು. ಸಿದ್ಧರಾಮನ ಕಾಲದಲ್ಲಿ ಸೊನ್ನಲಿಗೆ ಚಿಕ್ಕ ಹಳ್ಳಿಯಾಗಿದ್ದಿರಬೇಕು. "ಸೊನ್ನಲಿಗೆಯೆ ಕೈಲಾಸವಾದಡೆ ಪದಸ್ಥರುಂಟೆ ಈ ಪಳ್ಳಿಯಲ್ಲಿ?" ಎಂದು ಆತ ಒಂದು ವಚನದಲ್ಲಿ ಪ್ರಶ್ನಿಸಿದ್ದಾನೆ. ಆತ ಕೆರೆ ಬಾವಿಗಳನ್ನು ತೋಡಿಸಿದ್ದನೆಂಬುದಕ್ಕೆ ಅವನ ವಚನಗಳಲ್ಲೇ ನಮಗೆ ಸಾಕಷ್ಟು ಪುರಾವೆಗಳು ದೊರೆಯುತ್ತವೆ.

"ನಾನು ಕೆರೆಯ ತೋಡಿ ಫಲವೇನಯ್ಯ
ಪುಣ್ಯ ತೀರ್ಥಗಳು ಬರದನ್ನಕ್ಕ"
"ಕೆರೆ ಬಾವಿ ಹೂದೋಟ ಚೌಕ ಛತ್ರಂಗಳ ಮಾಡಿ
ಜೀವಂಗಳ ಮೇಲೆ ಕೃಪೆಯುಂಟೆಂದು ಎನ್ನದಾನಿಯೆಂಬರು
ಆನುದಾಸಿಯಲ್ಲವಯ್ಯಾ ನೀ ಹೇಳಿದಂತೆ ನಾ ಮಾಡಿದೆನು"

ಅಂತೂ ಕೆರೆ ಕಾಲುವೆಗಳನ್ನು ಕಟ್ಟಿಸಿ ಲೋಕಹಿತ ಕಾರ್ಯದಲ್ಲಿ ಆತ ಸಕ್ರಿಯವಾಗಿ ಪಾಲ್ಗೊಂಡದ್ದು ಸ್ಪಷ್ಟವಾಗುತ್ತದೆ.

ಸಿದ್ಧರಾಮನ ಕಾಲದ ಬಗೆಗೆ ಸಾಕಷ್ಟು ಭಿನ್ನಾಭಿಪ್ರಾಯವಿದೆ. ಚರಿತ್ರೆಗಿಂತ ಪವಾಡಗಳೇ ಅವನನ್ನು ಕುರಿತಾಗಿ ಬಂದ ಕಾವ್ಯಗಳಲ್ಲಿ ಮೇಲುಗೈ ಪಡೆದಿವೆ. ಸಿದ್ಧರಾಮ ಬಸವಾದಿ ಶರಣರ ಸಮಕಾಲೀನನೆಂಬುದಕ್ಕೆ ವೀರಶೈವ ಸಾಹಿತ್ಯದಲ್ಲಿ ಸಾಕಷ್ಟು ಪುರಾವೆಗಳು ದೊರೆಯುತ್ತವೆ. ಇದನ್ನು ಗಮನಿಸಿ ಸಂಶೋಧಕ ಗೋವಿಂದ ಪೈ ಅವರು ಸಿದ್ಧರಾಮನು ಕ್ರಿ. ಶ. 1130ರಿಂದ 1135ರೊಳಗೆ ಹುಟ್ಟಿರಬೇಕು ಎಂದಿದ್ದಾರೆ. "ಸಿದ್ಧರಾಮ ಶಿವಯೋಗಿ ಕ್ರಿ. ಶ. 1130ರ ಸುಮಾರಿಗೆ ಜನಿಸಿ ಕ್ರಿ. ಶ. 1180ರ ಹೊತ್ತಿಗೆ ಲಿಂಗೈಕ್ಯನಾಗಿರಬೇಕು."[2] ಎಂದು ಎಂ. ಬಿ. ಕೊಟ್ರಶೆಟ್ಟಿ ಅವರು ಅಭಿಪ್ರಾಯ ಪಟ್ಟಿದ್ದಾರೆ.

ಸಿದ್ಧರಾಮ ಸೊನ್ನಲಿಗೆಯಲ್ಲಿ ಬೃಹತ್ ಕೆರೆಯ ಜೊತೆಗೆ ಕಪಿಲ ಸಿದ್ಧ ಮಲ್ಲಿಕಾರ್ಜುನ ದೇವಾಲಯವನ್ನು ಕಟ್ಟಿಸಿದ್ದಾನೆ. ಇತಿಹಾಸ ಪ್ರಸಿದ್ಧವಾದ ಈ ದೇವಾಲಯಕ್ಕೆ ಅನೇಕ ರಾಜ ಮಹಾರಾಜರು, ಸಾಮಂತ ಅರಸರು ಊರ ಪ್ರಮುಖರು ದತ್ತಿದಾನ ನೀಡಿದ್ದನ್ನು ಈ ಶಾಸನಗಳು ಹೇಳುತ್ತವೆ. "ಒಂದೆರಡು ಶಾಸನಗಳಲ್ಲಿ ಸಿದ್ಧರಾಮ ಶಿವಯೋಗಿಯ ಹೆಸರು ನೇರವಾಗಿ ಕಾಣಿಸಿಕೊಂಡಿದೆ. ಇನ್ನುಳಿದವುಗಳಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನ ಎಂಬ ಅಂಕಿತವುಳ್ಳ ಒಂದು ವಚನವೂ ಶಾಸನಾರಂಭದಲ್ಲಿ ಬರುತ್ತದೆ. ಈ ಎರಡೂ ವರ್ಗದ ಶಾಸನಗಳ ಸಂಖ್ಯೆ 23 (ಸೊಲ್ಲಾಪುರ ಜಿಲ್ಲೆಯ ಗುಂಜೆಯ ಗಾಹೆಯಲ್ಲಿ ಸಿದ್ಧರಾಮನ ವಚನವಿರುವ ಒಂದು ಶಾಸನವನ್ನು ಇತ್ತೀಚೆಗೆ ಡಾ|| ಶ್ರೀನಿವಾಸ ರಿತ್ತಿ ಹಾಗೂ ಆನಂದ ಕುಂಬಾರ ಅವರು ಶೋಧಿಸಿ ಕೊಟ್ಟಿದ್ದಾರೆ. ಆದ್ದರಿಂದ ಸಿದ್ಧರಾಮನ ವಚನವಿರುವ ಶಾಸನಗಳ ಸಂಖ್ಯೆ ಈಗ 24 ಆಗಿದೆ.) "ಸಿದ್ಧರಾಮ ಶಿವಯೋಗಿಯ ವಚನಾಂಕಿತವು ವಚನ ಸಾಹಿತ್ಯ ಲೋಕದಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನ ಎಂದಿರುವುದರಿಂದ ಆತನೇ ಈತನಾಗಿರಬೇಕೆಂದು ನಿರ್ಧರಿಸಲು ಯಾವ ಆತಂಕವೂ ತೋರದು"[3] ಎಂಬ ಅಭಿಪ್ರಾಯ ಸ್ವೀಕಾರಾರ್ಹವಾಗಿದೆ.

ಶಾಸನಗಳಲ್ಲಿ ಸಿದ್ಧರಾಮ : ಸಿದ್ಧರಾಮನ ವಚನವಿರುವ ಏಳು ಕನ್ನಡ ಶಾಸನಗಳು ಇಂದಿನ ಮಹಾರಾಷ್ಟ್ರದಲ್ಲಿ ಈವರೆಗೆ ಉಪಲಬ್ಧವಾಗಿವೆ. ಅವುಗಳಲ್ಲಿ ಮೂರು ಶಾಸನ ಉಸ್ಮಾನಾಬಾದ್ ಜಿಲ್ಲೆಯಲ್ಲಿಯೂ ಹಾಗೂ ನಾಲ್ಕು ಶಾಸನಗಳು ಸೊಲ್ಲಾಪುರ ಜಿಲ್ಲೆಯಲ್ಲಿಯೂ ಲಭ್ಯವಾಗಿವೆ "ಶ್ರೀ ಸಿದ್ಧರಾಮನ ಇಷ್ಟದೇವತೆ ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗಕ್ಕೆ ಕನ್ನಡನಾಡನ್ನು ಆಳಿದ ದೇವಗಿರಿಯ ಯಾದವವಂಶದ ಭಿಲ್ಲಮ, ಸಿಂಘಣ, ಕನ್ನರ ಮೊದಲಾದವರು ದತ್ತಿಯನ್ನು ಬಿಡುವಾಗ ತಮ್ಮ ಮಂತ್ರಿಗಳಿಗೆ ದಂಡನಾಯಕರಿಗೆ ಸಾಮಂತರಿಗೆ ಅಧಿಕಾರಿಗಳಿಗೆ ರಾಜ ಸನ್ಮಾನತಿಯನ್ನು ಕೊಟ್ಟ ವಿಷಯವು ಇವುಗಳಲ್ಲಿ ಉಕ್ತವಾಗಿದೆ"[4] ಐತಿಹಾಸಿಕವಾಗಿಯೂ ಈ ಶಾಸನಗಳಿಗೆ

ವಿಶೇಷ ಮಹತ್ವವಿದೆ. ಶಾಸನಗಳಿಗಾಗಿಯೇ ಸಿದ್ಧರಾಮ ಕೆಲವು ವಚನಗಳನ್ನು ಬರೆದಂತೆ ಕಾಣುತ್ತದೆ. ಸಿದ್ಧರಾಮ ಬರೀ ಧಾರ್ಮಿಕ ವ್ಯಕ್ತಿಯಲ್ಲ. ಆತನ ಸಾಧನೆ ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿದೆ. ಇಷ್ಟೆಲ್ಲಾ ರಾಜಮಹಾರಾಜರ ಗಮನ ಸೆಳೆದ ಸೊನ್ನಲಿಗೆ ಕ್ಷೇತ್ರವನ್ನು "ಶ್ರೀಮತು ಜಂಬೂದ್ವೀಪ ಶಿಖಾಮಣಿ ದಕ್ಷಿಣ ವಾರಣಾಸಿ, ಅಭಿನವ ಶ್ರೀಶೈಲವೆನಿಪ್ಪ ಶ್ರೀಸೊನ್ನಲಿಗೆಯ ಪುರವರಾಧೀಶ್ವರಮಪ್ಪ ಕಪಿಲಸಿದ್ಧ ಮಲ್ಲಿಕಾರ್ಜುನ"[5] ಎಂಬ ಹೊಗಳಿಕೆಯ ಮಾತಿನಲ್ಲಿ ಯಥಾರ್ಥವಿಲ್ಲದಿಲ್ಲ. ಸಿದ್ಧರಾಮ ಕಟ್ಟಿಸಿದ ಮಲ್ಲಿಕಾರ್ಜುನ ದೇವಸ್ಥಾನ ಹಾಗೂ ಕೆರೆ ಇವತ್ತಿಗೂ ಸೊಲ್ಲಾಪುರದಲ್ಲಿ ಆಕರ್ಷಣೀಯ ಕೇಂದ್ರವಾಗಿ ಚರಿತ್ರೆಗೆ ಮೂಕಸಾಕ್ಷಿಯಾಗಿದೆ. ಸಿದ್ಧರಾಮನ ವಚನವಿರುವ ಏಳು ಶಾಸನಗಳ ಸಂಕ್ಷಿಪ್ತ ವಿವರಣೆ ಇಂತಿದೆ.

1. ನೀಲೇಗಾಂವ್ ಶಿಲಾಶಾಸನ[6] ಕ್ರಿ. ಶ. 1180

ಈ ಶಾಸನವು ಉಸ್ಮಾನಾಬಾದ್ ಜಿಲ್ಲೆಯ ನೀಲೇಯಗಾಂವ್ ಗ್ರಾಮ ಪಂಚಾಯಿತಿಯ ಎದುರಿನ ನಂದಿಸ್ತಂಭದ ಮೇಲಿದೆ. ಈ ಶಾಸನದ ಕಾಲದ ಬಗೆಗೆ ವಿದ್ವಾಂಸರಲ್ಲಿ ಏಕಾಭಿಪ್ರಾಯವಿಲ್ಲ. ಎಂ. ಎಸ್. ನಾಗರಾಜರಾವ್ ಅವರು ಈ ಶಾಸನದ ಕಾಲ ಕ್ರಿ.ಶ. 1192 ಎಂಬುದಾಗಿ ಅಭಿಪ್ರಾಯ ಪಟ್ಟಿದ್ದಾರೆ. ಈ ಶಾಸನದಲ್ಲಿ ಸಿದ್ಧರಾಮನ ಒಂದು ವಚನವು ಪೂರ್ತಿಯಾಗಿ ಕಾಣಸಿಗುತ್ತದೆ. ಸೇವುಣರ ಪ್ರಸಿದ್ಧ ದೊರೆ ಭಿಲ್ಲಮನ ಉಲ್ಲೇಖವಿಲ್ಲಿದೆ. ಮಹಾಮಂಡಳೇಶ್ವರ ಶಿಲಾಹಾರ ಡಾಂಕರಸ ಮಲ್ಲದೇವರಸ ಅಂಕುಲಗೆ ಪ್ರದೇಶದ ನೀಲೆಯ ಗಾಂವೆಯನ್ನು ಸೊನ್ನಲಿಗೆಯ ಕಪಿಲಸಿದ್ಧ ಮಲ್ಲಿಕಾರ್ಜುನ ದೇವರಿಗೆ ದತ್ತಿ ಬಿಟ್ಟ ಅಂಶ ಇಲ್ಲಿ ದಾಖಲಾಗಿದೆ. ಸೊನ್ನಲಿಗೆಯನ್ನು ಈ ಶಾಸನದಲ್ಲಿ ಅಭಿನವ ಶ್ರೀಶೈಲ ದಕ್ಷಿಣ ವಾರಣಾಸಿ ಎಂದು ಬಣ್ಣಿಸಲಾಗಿದೆ.

2. ಜಾವಗಾಂವ ಶಿಲಾಶಾಸನ[7] ಕ್ರಿ.ಶ. 1195

ಈ ಶಾಸನದ ಕಾಲ ಶಕವರ್ಷ 1117. ಸೇವುಣದೊರೆ ಜೈತುಗಿಯ ಪ್ರಸ್ತಾಪವಿಲ್ಲಿದೆ. ಸಿದ್ಧರಾಮನ ಒಂದು ವಚನ ಈ ಶಾಸನದ ಆರಂಭದಲ್ಲಿ ಬಂದಿದೆ. ಅಂತ್ಯದಲ್ಲಿ "ಗುರುಸಿದ್ಧ ರಾಮನಾಥಾ" ಎಂದು ಮುಕ್ತಾಯವಾಗುತ್ತದೆ. ಜೈತುಗಿಯ ಮಹಾಪ್ರಧಾನ ಮತ್ತು ಅವನ ಮಗ ಹೊನ್ನೋಜ ದಂಡನಾಯಕರ ವರ್ಣನೆ ಇಲ್ಲಿದೆ. ಈ ಹೊನ್ನೋಜ ದಂಡನಾಯಕನು ಅಂಕುಲಗೆ ಪ್ರದೇಶದ ಜಂಬುಗಾವೆಯನ್ನು ಸೂರ್ಯಪರ್ವದ ನಿಮಿತ್ತವಾಗಿ ಸೊನ್ನಲಿಗೆಯ ಕಪಿಲಸಿದ್ಧ ಮಲ್ಲಿಕಾರ್ಜುನ ದೇವರ ಅಂಗಭೋಗ ರಂಗಭೋಗ ಅನ್ನಸತ್ರಕ್ಕೆ ದತ್ತಿ ಬಿಟ್ಟ ಅಂಶ ಉಲ್ಲೇಖಗೊಂಡಿದೆ.

3. ಕೇಸಗಾಂವ ಶಿಲಾಶಾಸನ[8] ಕ್ರಿ.ಶ. 1197

ಈ ಶಾಸನವೂ ಸಹ ಸಿದ್ಧರಾಮನ ವಚನದಿಂದ ಆರಂಭವಾಗುತ್ತದೆ. ಉಸ್ಮಾನಾಬಾದ್ ಜಿಲ್ಲೆಯ ಕೇಸಗಾಂವ್‌ನ ಮಾರುತಿ ಗುಡಿಯ ಮುಂದೆ ಈ ಶಿಲಾಶಾಸನವಿದೆ. ಸೇವುಣದೊರೆ ಜೈತುಗಿಯ ಕಾಲದಲ್ಲಿ ಖೇಯ ದೇವನಾಯಕ, ಸಂಗಮದೇವ ಹಾಗೂ ದಾಂಕರಸರು ಸೇರಿ ಅಂಕುಲಗೆ 80ರ ಬಳಿಯ ಕೇಸಗಾಂವೆಯನ್ನು ಸೊನ್ನಲಿಗೆಯ ಮಲ್ಲಿಕಾರ್ಜುನ ದೇವರ ಅಂಗಭೋಗ ರಂಗಭೋಗ ಅನ್ನಸತ್ರ ಹಾಗೂ ಜೀರ್ಣೋದ್ಧಾರಕ್ಕೆ ದತ್ತಿಬಿಟ್ಟ ಉಲ್ಲೇಖವಿಲ್ಲಿದೆ.

4. ಇಟ್ಕೆಲ್ ಶಿಲಾಶಾಸನ[9] ಕ್ರಿ. ಶ. 1218

ಈ ಶಾಸನವು ಸೇವುಣದೊರೆ ಸಿಂಘಣನ ಕಾಲಕ್ಕೆ ಸಂಬಂಧಿಸಿದೆ. ಅವನ ಮಹಾಪ್ರಧಾನ ಸಂಗಮದೇವನಾಯಕ ಹಾಗೂ ಅವನ ಪುತ್ರರಾದ ಜಯಸೀತಿದೇವ, ಲಿಂಗದೇವ, ಗಣೇಶ್ವರದೇವ, ಶಂಭುದೇವ ಮೊದಲಾದವರು ಅಂಕುಲಗೆ 80ರ ಬಳಿಯ ಇಟ್ಟಿಗೆ ಹಳ್ಳಿಯನ್ನು ಸೊನ್ನಲಿಗೆಯ ಕಪಿಲಸಿದ್ಧ ಮಲ್ಲಿಕಾರ್ಜುನ ದೇವರಿಗೆ ದತ್ತಿ ಬಿಟ್ಟ ವಿವರಣೆಯಿದೆ. ಆರಂಭದಲ್ಲಿ ಸಿದ್ಧರಾಮನ ವಚನವಿದ್ದು ಅದು ಗುರು ವಚನವು ಎಂದು ಮುಕ್ತಾಯವಾಗುತ್ತದೆ. ಸಿದ್ಧರಾಮನ ಕಾಲಾನಂತರ ಬಂದ ಶಾಸನವಿದು. ಆತ ಲಿಂಗೈಕ್ಯನಾದ ಅನಂತರವೂ ಮಹತ್ವದ ಗೌರವ ಅವನಿಗೆ ಸಂದಿದೆ ಎಂಬುದಕ್ಕೆ ಈ ಶಾಸನ ಸಾಕ್ಷಿಯಾಗಿದೆ.

5. ಅಕ್ಕಲಕೋಟೆ ಶಿಲಾಶಾಸನ[10]–ಕ್ರಿ. ಶ. 1255

ಈ ಶಾಸನ ಬಹಳಷ್ಟು ನಾಶವಾಗಿದೆ. ಆದರೂ ಶಾಸನದ ಆರಂಭದಲ್ಲಿ ಸಿದ್ಧರಾಮನ ವಚನದ ಬಳಕೆಯಾಗಿದೆ. ಕಪಿಲಸಿದ್ಧ ಮಲ್ಲೇಶ್ವರ ದೇವರ ಉಲ್ಲೇಖವಿರುವುದರಿಂದ ಇದೊಂದು ದತ್ತಿ ಶಾಸನ ಎಂದು ಊಹಿಸಬಹುದಾಗಿದೆ. ಸೇವುಣ ದೊರೆ ಕನ್ನರ ದೇವನ ಪ್ರಸ್ತಾಪವಿಲ್ಲಿದೆ. ಶಕವರ್ಷ 1177ರ ಉಲ್ಲೇಖವಿಲ್ಲಿ ಸ್ಪಷ್ಟವಾಗಿದೆ.

6. ತನವಳ ಶಾಸನ[11] ಕ್ರಿ. ಶ. 1257 ?

ಈ ಶಾಸನದ ಕಾಲ ಸಂದೇಹಾಸ್ಪದವಾಗಿದೆ. ಆರಂಭದಲ್ಲಿ ಸಿದ್ಧರಾಮನ ಒಂದು ವಚನವಿದೆ. ಸೇವುಣ ದೊರೆ ಕನ್ನರದೇವನ ಪಾದಕೋಪಜೀವಿಗಳಾದ ಚೇಟರಸ, ಕೂಚರಸ, ಹಾಗೂ ಸೋಯಿದೇವರು ಸೇರಿ ಸೊನ್ನಲಿಗೆ ಪುರದ ಮಲ್ಲಿಕಾರ್ಜುನ ದೇವರ ರಂಗಭೋಗ ಅಂಗಭೋಗಕ್ಕೆ ದತ್ತಿಬಿಟ್ಟ ವಿವರವಿದೆ. ಯಾವ ಯಾವ ಗ್ರಾಮಗಳನ್ನು ದತ್ತಿ ಬಿಡಲಾಗಿದೆ ಎಂಬ ಉಲ್ಲೇಖವಿದ್ದ ಭಾಗ ನಾಶವಾಗಿ ಹೋಗಿದೆ.

7. ಗುಂಜೆಯ ಗಾಂವ್ ಶಾಸನ[12] ಕ್ರಿ. ಶ. ಸು. 13ನೇ ಶತಮಾನ

ಈ ಶಾಸನದ ಕಾಲ ಸ್ಪಷ್ಟವಾಗಿಲ್ಲ. ಇದು ಸೇವುಣ ದೊರೆ ಸಿಂಘಣದೇವನ ಕಾಲಕ್ಕೆ ಸಂಬಂಧಿಸಿದ್ದಾಗಿದೆ. ಆರಂಭದಲ್ಲಿ ಸಿದ್ಧರಾಮನ ವಚನವಿದ್ದು ಅಂತ್ಯದಲ್ಲಿ "ಎಂಬುದು ಗುರುವಚನವು" ಎಂದಿದೆ. ಶಾಸನದ ಕೊನೆಯ ಭಾಗ ಸಾಕಷ್ಟು ನಾಶವಾಗಿದೆ. ಆದರೂ "ಕಪಿಲಸಿದ್ಧ ಮಲ್ಲಿಕಾರ್ಜುನ ದೇವರ ಅಂಗಭೋಗ ರಂಗಭೋಗ ಆ ವಾರಿ ಸತ್ರಕ್ಕೆ ಹಸಾದ"ಎಂದಿದೆ. ಆದ್ದರಿಂದ ಇದೊಂದು ದಾನ ಶಾಸನವೆಂಬುದು ಸ್ಪಷ್ಟವಾಗುತ್ತದೆ.

ಇವಲ್ಲದೆ 1232ರ ಗುಂಜೆಯ ಗಾಂವ್ ಶಾಸನ[13]ದಲ್ಲಿ "ಶ್ರೀಮತು ಜಂಬೂದ್ವೀಪ ಶಿಖಾಮಣಿ ದಕ್ಷಿಣ ವಾರಣಾಸಿ ಅಭಿನವ ಶ್ರೀಶೈಳವೆನಿಪ್ಪ ಶ್ರೀ ಸೊನ್ನಲಿಗೆಯ ಪುರವರಾಧೀಶ್ವರನುಮಪ್ಪ ಕಪಿಲಸಿದ್ಧ ಮಲ್ಲಿಕಾರ್ಜುನ ದೇವರ ಯೋಗ ರಮಣಿಯ ಕ್ಷೇತ್ರದೊಳಗಣ ಆದಿಲಿಂಗ ದಾ...... ....ಅನಂತ ಸಹಸಲಿಂಗ ಅಂಗಭೋಗ ರಂಗಭೋಗಕ್ಕೆ ದತ್ತಿಬಿಟ್ಟ ವಿಷಯವಿಲ್ಲಿದೆ. ಇದರಲ್ಲಿ ಸಿದ್ಧರಾಮನ ವಚನವಿಲ್ಲ. ಸೇವುಣ ದೊರೆ ಸಿಂಘಣದೇವ ತನ್ನ ಪುತ್ರರೊಂದಿಗೆ ಸೇರಿ ದತ್ತಿಬಿಟ್ಟ ಉಲ್ಲೇಖವಿಲ್ಲದೆ.

ಈ ಎಲ್ಲ ಶಾಸನಗಳನ್ನು ಗಮನಿಸಿದಾಗ ಎರಡು ಅಂಶ ಸ್ಪಷ್ಟವಾಗುತ್ತದೆ. ಒಂದು, ಹಳ್ಳಿಯಾಗಿದ್ದ ಸೊನ್ನಲಿಗೆ ಸಿದ್ಧರಾಮನ ಸಾಧನೆಯಿಂದ ಧಾರ್ಮಿಕ ಕೇಂದ್ರವಾಗಿ ಐತಿಹಾಸಿಕ ಮಹತ್ವವನ್ನು ಪಡೆದುಕೊಂಡದ್ದು. ಇನ್ನೊಂದು ಅಂದಿನ ಸಮಾಜದಲ್ಲಿ ಸಿದ್ಧರಾಮನಿಗೆ ಮಹತ್ವದ ಸ್ಥಾನಮಾನವಿತ್ತಲ್ಲದೆ, ಆತನನ್ನು ಗುರುವೆಂದು ಇಡೀ ಸಮಾಜ ಗೌರವಿಸುತ್ತಿತ್ತು. ಅಲ್ಲದೆ, ಆತ ಲಿಂಗೈಕ್ಯನಾದ ಅನಂತರವೂ ಈ ಕ್ಷೇತ್ರದ ಮಹತ್ವ ಕಡಿಮೆಯಾಗಲಿಲ್ಲ ಎಂಬುದು. ಅಂದು ಸಿದ್ಧರಾಮ ಲೋಕೋಪಕಾರಕವಾದ ಕೆಲಸ ಕಾರ್ಯಗಳಿಂದ ಜನಾದರಣೀಯನೂ ಆಗಿದ್ದಿರಬೇಕು. ಸೇವುಣ ವಂಶದ ದೊರೆಗಳಂತೂ ಕಪಿಲಸಿದ್ಧ ಮಲ್ಲಿಕಾರ್ಜುನನ ಪರಮಭಕ್ತರಾಗಿದ್ದರೆಂಬುದು ಈ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಒಟ್ಟಿನಲ್ಲಿ ಸೊನ್ನಲಿಗೆಯು ಸಿದ್ಧರಾಮನ ಕಾರ್ಯಕ್ಷೇತ್ರವಾಗಿತ್ತು. ತದನಂತರ ಆತ ಕಲ್ಯಾಣಕ್ಕೆ ತೆರಳಿರಬೇಕು. ಹಳ್ಳಿಯಾಗಿದ್ದ ಸೊನ್ನಲಿಗೆಯನ್ನು (ಹನ್ನೆರಡನೆಯ ಶತಮಾನದಲ್ಲಿ) ಸಾಂಸ್ಕೃತಿಕ ಧಾರ್ಮಿಕ ಕೇಂದ್ರವನ್ನಾಗಿ ಮಾಡಿ ಕನ್ನಡ ಸಂಸ್ಕೃತಿಯನ್ನು ಪ್ರಸಾರ ಮಾಡಿದ ಶ್ರೇಯಸ್ಸು ಸಿದ್ಧರಾಮನಿಗೆ ಸಲ್ಲುತ್ತದೆ.

ಸೊನ್ನಲಿಗೆಯ ಹೆಸರು ಇಂದು ಸೊಲ್ಲಾಪುರ ಎಂದಾಗಿದೆ. ಕನ್ನಡ ಶಾಸನಗಳಲ್ಲಿ ಕಾವ್ಯಗಳಲ್ಲಿ ಸೊನ್ನಲಿಗೆ, ಸೊನಲಿಗೆ, ಸೊನ್ನಲಿಕೆ, ಸೊನ್ನಲಾಪುರ ಎಂದೆಲ್ಲಾ ಕರೆಯಲ್ಪಟ್ಟಿದೆ. ಇಂದಿನ ಮಹಾರಾಷ್ಟ್ರದ ಅರ್ಧದಷ್ಟು ಗ್ರಾಮನಾಮಗಳಿಗೆ ಕನ್ನಡದಲ್ಲಿ ನಿಷ್ಪತ್ತಿ ಹೇಳಬೇಕಾಗುತ್ತದೆ. ಸೊಲ್ಲಾಪುರಕ್ಕೂ ಈ ಮಾತು ಅನ್ವಯಿಸುತ್ತದೆ. ಇಂದು

ಸೊಲ್ಲಾಪುರವನ್ನು "ಸೋಳಹಗ್ರಾಮಗಳಿಂದ ಕೂಡಿದ ನಾಡೆಂದು" ಅರ್ಥೈಸುವ ಪ್ರಯತ್ನ ನಡೆಯುತ್ತಿದೆ. ಇದಕ್ಕೆ ಯಾವ ಐತಿಹಾಸಿಕ ಪುರಾವೆಯೂ ಇಲ್ಲ. ಸೊನ್ನಲಾಪುರ, ಸೊನ್ನಲಿಗೆ ಎಂದು ಇಂದಿಗೆ ಎಂಟುನೂರು ವರ್ಷಗಳಷ್ಟು ಹಿಂದೆಯೇ ಪ್ರಸಿದ್ಧಿ ಪಡೆದಿತ್ತು. "ಸೊನ್ನಲಾಪುರ" ಶಬ್ದದಲ್ಲಿನ 'ನ್ನ' ಕಳೆದುಹೋಗಿ ಅಪಭ್ರಂಶಗೊಂಡು ಇಂದಿನ ಸೊಲ್ಲಾಪುರ ರೂಪುಗೊಂಡಿದೆ. ಸಿದ್ಧರಾಮನಿಂದಾಗಿಯೇ ಈ ಪ್ರದೇಶ ಧಾರ್ಮಿಕ ಸಾಂಸ್ಕೃತಿಕ ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿತೆಂಬುದರಲ್ಲಿ ಎರಡು ಮಾತಿಲ್ಲ. "ಕಲ್ಯಾಣದ ವೀರಶೈವ ಆಂದೋಲನೆಗೆ ಬಸವಣ್ಣನವರು ಕೇಂದ್ರ ಶಕ್ತಿ ಎನಿಸಿದಂತೆ ಅದೇ ಕಾಲದ ಸೊನ್ನಲಿಗೆಯ ಶೈವ ಆಂದೋಲನೆಗೆ ಕೇಂದ್ರ ಶಕ್ತಿ ಎನಿಸಿದವನು ಸಿದ್ಧರಾಮ ಶಿವಯೋಗಿ"[14] ಎಂಬ ಡಾ. ಎಂ. ಎಂ. ಕಲಬುರ್ಗಿ ಅವರ ಅಭಿಪ್ರಾಯದಲ್ಲಿ ತಥ್ಯವಿದೆ. ○

ಆಕರಗಳು

1. ಆರ್. ಸಿ ಹಿರೇಮಠ (ಸಂಪಾದಕರು) ಶ್ರೀ ಸಿದ್ಧರಾಮೇಶ್ವರ ವಚನಗಳು. ಕರ್ನಾಟಕ ವಿ.ವಿ. ಧಾರವಾಡ 1968.
2. ಎಂ. ಬಿ. ಕೊಟ್ರಶೆಟ್ಟಿ, ಸಿದ್ಧರಾಮ ಶಿವಯೋಗಿ–ಒಂದು ಅಧ್ಯಯನ, ಕರ್ನಾಟಕ ವಿ.ವಿ.ಧಾರವಾಡ 1975. ಪುಟ-68
3. ಅದೇ ಪುಟ–43.
4. ಆರ್. ಸಿ. ಹಿರೇಮಠ (ಸಂ) ಶ್ರೀ ಸಿದ್ಧರಾಮೇಶ್ವರ ವಚನಗಳು. ಕರ್ನಾಟಕ ವಿ.ವಿ. ಧಾರವಾಡ, 1968.
5. Inscriptions From Solapur District. Dr. Srinivasa Ritti & Ananda Kumbhar, Dharwad 1988. 55
6. ಎಂ. ಎಸ್. ನಾಗರಾಜರಾವ್. ಕರ್ನಾಟಕ ಭಾರತಿ, ಸಂಪುಟ 4 ಸಂಚಿಕೆ 3 ಕರ್ನಾಟಕ ವಿ.ವಿ. ಧಾರವಾಡ. 1972 ಪುಟ 102.
7. ಅದೇ ಪುಟ 106.
8. ಅದೇ ಪುಟ 109.
9. ಎಂ. ಎಸ್. ನಾಗರಾಜರಾವ್, ಕರ್ನಾಟಕ ಭಾರತಿ ಸಂಪುಟ 3 ಸಂಚಿಕೆ 4 ಪುಟ 3
10. Karnataka Inscriptions Vol II KRI. Dharwad 1952, ಪುಟ 137.
11. ಅದೇ ಪುಟ 141.
12. Inscriptions From Solapur District page No. 53
13. Inscriptions From Solapur District Page No. 55
14. ಎಂ. ಎಂ. ಕಲಬುರ್ಗಿ. ಶಾಸನಗಳಲ್ಲಿ ಶಿವಶರಣರು, ಕರ್ನಾಟಕ ವಿವಿ ಧಾರವಾಡ 1970. ಪುಟ 73.

ಸಾಗರದ ಶ್ರೀನಂಜುಂಡೇಶ್ವರ ದೇವಾಲಯ ಕುರಿತ ಅಪ್ರಕಟಿತ ಕಾಗದ ಪ್ರತಿ

— ಡಾ|| ಕೆಳದಿ ವೆಂಕಟೇಶ ಜೋಯಿಸ್

ದೇಶೀಯ ಸಂಸ್ಥಾನದ ಇತಿಹಾಸದಲ್ಲಿ ಪ್ರಧಾನರು, ಸೇನಾಧಿಪತಿಗಳು ಉಚ್ಚ ಅಧಿಕಾರಿಗಳು ಇತಿಹಾಸದ ಉದ್ದಗಲಕ್ಕೂ ಪ್ರಮುಖ ಪಾತ್ರವಹಿಸಿದ್ದಾರೆ. ಅಂತಹ ಅಧಿಕಾರಿಗಳ ಧಾರ್ಮಿಕ, ಸಾಮಾಜಿಕ ಚಟುವಟಿಕೆಗಳು ನಮಗೆ ಕಡತಗಳು, ಕಾಗದ ಪ್ರತಿಗಳು, ತಾಡೆಯೋಲೆ ಹಸ್ತಪ್ರತಿಗಳು, ನಿರೂಪಗಳು ಮೊದಲಾದವುಗಳಲ್ಲಿ ದಾಖಲಾಗಿರುವುದಿದೆ. ಅಂತಹವುಗಳ ಶಾಸ್ತ್ರೀಯ ಅಧ್ಯಯನ ಎಂದಿಗಿಂತಲೂ ಇಂದು ಕೈಗೊಳ್ಳಬೇಕಾದ ಅಗತ್ಯ ಬಹಳವಿದೆ. ಈ ನಿಟ್ಟಿನಲ್ಲಿ ಈಚೆಗೆ ಸಮೀಕ್ಷೆಯಲ್ಲಿ ದೊರೆತ ಸಾಗರದ ಶ್ರೀ ನಂಜುಂಡೇಶ್ವರ ದೇವಾಲಯದ ಕುರಿತ ದಾಖಲೆ ಗಮನ ಸೆಳೆಯುತ್ತದೆ.

ಸಾಗರದ ಪ್ರಾಚೀನತೆ

ಪೌರಾಣಿಕವಾಗಿ ಸಗರ ಚಕ್ರವರ್ತಿ ಯಾಗ ಮಾಡಿದ ಸ್ಥಳವೆಂದು ಐತಿಹ್ಯವಿರುವ ಸಾಗರ ಐತಿಹಾಸಿಕವಾಗಿ ತ್ಯಾಗರ್ತಿಯ ಕ್ರಿ. ಶ. 357 (?) ರ ಗಂಗಮಾಧವರ ಕಾಲದ ಶಾಸನವು ಈ ಸ್ಥಳದ ಕುರಿತು ತಿಳಿಸುವ ಮೊದಲ ಶಾಸನ [1]. ಕ್ರಿ. ಶ. ೮ನೇ ಶತಮಾನದಲ್ಲಿ ಜಿನದತ್ತ ಎಂದು ಕರೆಯಲ್ಪಡುತ್ತಿದ್ದ ಅಂಧಾಸುರನು ಸಾಗರವನ್ನು ಆಳುತ್ತಿದ್ದನು. ಚಾಳುಕ್ಯ, ರಾಷ್ಟ್ರಕೂಟ, ಹೊಯ್ಸಳ, ಸಂತರು, ಕದಂಬರು ಇವರುಗಳ ಆಳಿಕೆಗೂ ಈ ಪ್ರಾಂತ್ಯ ಒಳಪಟ್ಟಿತ್ತು.[2] ಸಾಗರ ಸಮೀಪದ ಹೊಸಗುಂದದಲ್ಲಿ ಸಂತರ ಕಾಲದ ಅವಶೇಷಗಳಿವೆ. ಹೊಯ್ಸಳ ಕಾಲದಲ್ಲಿ ಕುಂದನಾಡು ಪಟ್ಟಣಕ್ಕೆ ಸೇರಿದ ಚಂದ್ರಗುತ್ತಿಗೆ ಸಾಗರದ ಆಡಳಿತವೂ ಸಹ ಒಳಪಟ್ಟಿತ್ತು. ವಿಜಯ ನಗರದ ಕಾಲಕ್ಕೆ ಆರಗರಾಜ್ಯ ಪ್ರಾಂತ್ಯದಲ್ಲಿ ಸಾಗರ ವಿಲೀನಗೊಂಡಿತ್ತು. ಗೇರುಸೊಪ್ಪೆಯ ಭೈರವ ರಾಣಿಯು ಇಲ್ಲಿಯ ಹಲವು ಪ್ರದೇಶಗಳನ್ನು ಆಳಿದ ಬಗ್ಗೆ ತಿಳಿಯುತ್ತದೆ.[3]

---

1. ಎಪಿ ಗ್ರಾಫೀಯ ಕರ್ನಾಟಕ ಸಂಪುಟ ೮.
2. ಡಾ. ಅ. ಸುಂದರ– ಶಿವಮೊಗ್ಗ ಜಿಲ್ಲಾ ದರ್ಶನ ಐ.ಬಿ.ಎಚ್. ಪ್ರಕಾಶನ ಬೆಂಗಳೂರು.
3. ಡಾ. ಅಭಿಶಂಕರ್ (ಪ್ರ. ಸಂ.) ಶಿವಮೊಗ್ಗ ಜಿಲ್ಲಾ ಗೆಜೆಟಿಯರ್.

ಆನಂತರ ಕೆಳದಿ ಆಡಳಿತಕ್ಕೆ ಒಳಪಟ್ಟ ಈ ಪ್ರಾಂತ್ಯ ಕ್ರಿ.ಶ. 1583-1630 ರಲ್ಲಿ ವೆಂಕಟಪ್ಪ ನಾಯಕರಿಂದ ನಗರವಾಗಿ ರೂಪುಗೊಂಡು ವಿಶೇಷ ಪ್ರಾಧಾನ್ಯಕ್ಕೆ ಒಳಪಟ್ಟಿತು. ಕೆಳದಿ ನೃಪ ವಿಜಯದಲ್ಲಿ ಈ ಕುರಿತು ಹೀಗಿದೆ—

ಇಂತಾ ವೆಂಕಟಪ್ಪನಾಯಕಂ ಭದ್ರಾಪುರವೆಂಬ ಪೇಟೆಯಂ ಕಟ್ಟಿಸಿಯು ನಂತರಂ ಕೆಳದಿ ಯಿಕ್ಕೇರಿ ಪುರಗಳದ ಮಧ್ಯದೊಳ್ ತನ್ನ ಪಿತಾಮಹನ ಹೆಸರಲ್ಲಿ ಪೇಟೆ ಪಟ್ಟಣಂ ಕಟ್ಟಿಸಿಯೂ ಪೊಳಲ್ಗೆ ಸದಾಶಿವಸಾಗರವೆಂದು ನಾಮಾಂಕಿತಂಗೈದನಂತುಮಲ್ಲದೆಯುಂ

ಸಾಗರದ ಪೊಳಲೊಳೆಸೆವ ಮ
ಹಾಗಣಪತಿಯಂ ಪ್ರತಿಷ್ಠೆಯಂ ವಿರಚಿಸಿ ಚ।
ನ್ನಾಗಿರೆ ತಟಾಕವಂ ತಾ
ನಾಗಿಸಿ ಬಳಿಯೊಳ್ಪು ಸೌಧಮಂ ಕಟ್ಟಿಸಿದಂ ॥
ಚಂದಬನವೆಂಬ ಹೆಸರ
ನಂದನಮಂ ರಚನೆಗೊಳಿಸಿ ವೆಂಕಟನೃಪನಾ ।
ನಂದದೆ ಗಣಪತಿಯರ್ಚನೆ
ಗಂದುರುತರಮಾದ ಭೂಮಿಯಂ ಕಟ್ಟಿಸಿದಂ ॥

ಮತ್ತಮದಲ್ಲದಾ ವೆಂಕಟಪ್ಪನಾಯಕಂ ತನ್ಮಹಾಗಣಪತಿ ದೇವರ್ಗೆ ಶಿಲಾಮಯಮಾದ ದೇವಸ್ಥಾನಮಂ ನಿರ್ಮಾಣಂಗೈಸಿ ರಥೋತ್ಸವಾದಿ ಕಟ್ಟಳೆಗಳ್ನಡೆವಂತು ನಿಯಾಮಕಂಗೈಸಿ ಮತ್ತಮಾ ಸದಾಶಿವಸಾಗರದ ಬಳಿಯ ವರದಾನದೀ ತೀರದೊಳ್ ವಿಶ್ವೇಶ್ವರ ದೇವರಂ ಪ್ರತಿಷ್ಠೆಯಂ ರಚಿಸಿ ದೇವಾಲಯಂಕಟ್ಟಿಸಿ ಭೂಸ್ವಾಸ್ಥ್ಯೆಯಂ ಬಿಡಿಸಿ ಮತ್ತಮಾ ನದೀ ತೀರದೊಳ್ ವಿಶ್ವನಾಥಪುರವೆಂಬ ಅಗ್ರಹಾರಮಂ ರಚಿಸಿ ವೃತ್ತಿಕ್ಷೇತ್ರ ನಿವೇಶನಂಗಳಂ ನಿಯಾಮಿಸಿ ಶ್ರೋತ್ರಿಯ ಬ್ರಾಹ್ಮಣರ್ಗೆ ಧಾರೆಯನೆರೆದು ಸ್ಥಿರಶಾಸನಮಂ ಬರೆಸಿತ್ತು ಗಣೇಶ ದೀಕ್ಷಿತರ ಕಯ್ಯಿಂ ವಾಜಪೇಯ ಯಾಗಮಂ ರಚಿಯಿಸಿ ಮತ್ತಮಾ ಸದಾಶಿವಸಾಗರದ ಪೊಳಲೊಳ್ಮನೋಹರಮಾದ ರಾಜಾಲಯಮಂ ನಿರ್ಮಾಣಂ ಗೈಸಿ ಮತ್ತಮಾಸದಾಶಿವ ಸಾಗರ................[1]

ಎಂಬುದಾಗಿ ಸಾಗರ ಪಟ್ಟಣದ ನಿರ್ಮಾಣ, ಅಗ್ರಹಾರ, ಶ್ರೀ ಗಣಪತಿ ದೇವಾಲಯಗಳ ನಿರ್ಮಾಣದ ಕುರಿತು ಮಾಹಿತಿ ನೀಡುತ್ತದೆ. ಹಿರಿಯ ವೆಂಕಟಪ್ಪನಾಯಕನು ಈ ನಗರವನ್ನು ಸದಾಶಿವನಾಯಕನ ಹೆಸರಲ್ಲಿ ಕ್ರಿ. ಶ. 1583-1630 ರ ಮಧ್ಯಭಾಗದಲ್ಲಿ ನಿರ್ಮಾಣ ಮಾಡಿ, ಈ ನಗರಕ್ಕೆ ಸದಾಶಿವಸಾಗರ ಎಂಬುದಾಗಿ ಹೆಸರಿಟ್ಟನು. ಕ್ರಿ.ಶ. 1623ರಲ್ಲಿ ಇಕ್ಕೇರಿಗೆ ಭೇಟಿ ಇತ್ತಿದ್ದ ಇಟಲಿಯ ಪ್ರವಾಸಿ ಪಿಯತ್ರೊಡೆಲ್ಲಾವಲ್ಲೆಯು

The fine wide level road from Sagar to Ikkeri and the splendid avenue of trees on either side [2]

1. ಕೆಳದಿ ನೃಪ ವಿಜಯ ಪುಟ 86
2. ಪಿಯತ್ರೊಡೆಲ್ಲಾವಲ್ಲೆ ಪು. 1234 ಎ. ಬಿ.

ಎಂಬುದಾಗಿಯೂ

ಬುಕನನ್ ಎಂಬ ಫ್ರೆಂಚ್ ಪ್ರವಾಸಿಯು

.... Near Ikkeri is a well built town named Sagar which at present is the residence of the chief of the District[1]

ಎಂಬುದಾಗಿ ಅಂದಿನ ಸಾಗರದ ವೈಭವವನ್ನು ತುಂಬುಮನಸ್ಸಿನಿಂದ ಬರೆದಿದ್ದಾರೆ.

ಕರ್ನಲ್ ಮೆಕೆಂಝಿ ದಾಖಲಿಸಿದ ಕೈಫಿಯತ್ತಿನಲ್ಲಿ ಸಾಗರ

ಕ್ರಿ. ಶ. 1783-1821ರ ಮಧ್ಯಭಾಗದಲ್ಲಿ ಕರ್ನಾಟಕದಲ್ಲಿ ಓಡಾಡಿ ಮೆಕೆಂಝಿಯವರು ಸಂಗ್ರಹಿಸಿರುವ ದಾಖಲೆಯಲ್ಲಿ ಸಾಗರದ ಕುರಿತು ಹೆಚ್ಚಿನ ಮಾಹಿತಿ ದೊರೆಯುತ್ತದೆ. ಆ ಕೈಫಿಯತ್ತಿನಲ್ಲಿ

............ಯೀ ಮೇರೆಗೆ ಯಿರುತ್ತಾಯಿರಲಿಕ್ಕೆ ಕೆಲವು ದಿನ್ಸದ ಮೇಲೆಯಿರಲಿಕ್ಕೆ ಪೇಟೆ ಕಟ್ಟಿಸಬೇಕು ಯೆಂದು ಸಂಸ್ಥಾನಿಕರ ಸಂಗಡಾ ಯೋಚನೆ ಮಾಡಿ ಯಿಕ್ಕೇರಿ ಶಿರವಂತೆ, ಯಲಗಲ್ಲ, ಕೆಳದಿ ಯೀ ನಾಲ್ಕು ಗ್ರಾಮದ ಹೊಲವರಿ ಕೂಡಿದ ಗಡಿಯ ಮಧ್ಯದಲ್ಲಿ ಪೇಟೆ ಕಟ್ಟಿಸುವುದಕ್ಕೆ ಆರಂಭವನ್ನು ಮಾಡಿದ ಮೂರು ತಿಂಗಳಲ್ಲಿ ಪೇಟೆ ಕಟ್ಟಿ ಆಯಿತು "ಯೀ ಪೇಟೆಗೆ ವಕ್ಕಲು ಆಗಬೇಕು" ಯೆಂದು ಕೆಳದಿ ಪಟ್ಟಣದ ನೀಲಕಂಠರಾಯರುಯೆಂಬ ಕ್ಷತ್ರಿಯ ಅರಸುಗಳ ನಮೂಂದು ಆ ಪಟ್ಟಣ ಸ್ವಾಧೀನ ಮಾಡಿಕೊಂಡು ಅಲ್ಲಿಯಿದ್ದ ವಸಾರಿ ವರ್ತಕರು ಸಹಾ ತೆಗೆದುಕೊಂಡು ಬಂದು ಹಸಬೆ ಶಾಂತಯ್ಯ, ಘೂಳಪ್ಪ, ನಾಗಪ್ಪ, ಬಡದಾಳದ ಸಿಂಜಣ್ಣ, ತುಪ್ಪದ ರೇವಪ್ಪ ಯೀ ಮೊದಲಾದ ಮುಖ್ಯಸ್ಥರಿಗೆ ನೇಮಕಾ ಮಾಡಿ ಯಿಟ್ಟು ಮೂವತ್ತು ವರುಷ ಪರಿಯಂತ್ರ ತಾಯಿ ಕೊಂದು ತಂದೆ ಯಿರ್‍ರದರು ತಂದೆ ಕೊಂದು ತಾಯಿ ಯಿರ್‍ರದರ್‍ರು ನೆಟ್ಟ ಕಲ್ಲು ಕಿತ್ತರು. ಬಿಟ್ಟ ಬಳವಿ ಅತ್ತಳು ಬಸವ[2] ವೃಷಭನ ಕೊಂದು ಹಿರ್‍ರದರ್‍ರು [> ಇರಿದರು] ಸಕಲ ದ್ರೋಹ ಮಾಡಿದರು ಬಿಟ್ಟು ಬಿರಾಡ ವಟ್ಟ ವರಾಡ ಅಪರಾಧ ಮುಂತಾದ್ದು ಯೀ ಪೇಟೆ ಬವರನ ಕೇಳಲಿಕ್ಕೆ ಅರಮನೆಯವರಿಗೆ ಕೆಲಸವಿಲ್ಲಾ ಯೆಂದು ನಿರುಪದ್ರವದಿಂದ ಯಿರಬೇಕುಯೆಂದು ಕವುಲು ಕೊಟ್ಟು ಕಡ ಮೊದಲು ಮುಂತಾದ್ದು ಕೊಟ್ಟ [> ಟ್ಟು] ಪೇಟೆ ತುಂಬಿಸಿದರು. ಯಿದಕ್ಕೆ ಸದಾಶಿವಸಾಗರ ಯೆಂಬೊ ಹೆಸರಿಟ್ಟರು. ಯೀ ಪೇಟೆಗೆ ಬಲಗಡೆ ಮೂಡಲ ದಿಕ್ಕಿಗೆ ವರದಾನದಿ ತೀರದಲ್ಲು ವಿಶ್ವನಾಥಪುರ ಎಂಬುದಾಗಿ ಗ್ರಾಮವನ್ನು ಕಟ್ಟಿಸಿ ಯರಡು ಬೀಡಿ [> ದಿ] ಮಾಡಿ ಯಿಲ್ಲಿ ನದಿ ತೀರದಲ್ಲು

1. ಬುಕನನ್‌ನ ಪ್ರವಾಸಿ ವರದಿ

2. ಕರ್ನಾಟಕದ ಕೈಫಿಯತ್ತುಗಳು ಪು. 147 ಕನ್ನಡ ವಿವಿ ಹಂಪಿ 1994

ರಾಮೇಶ್ವರ ದೇವರು, ಅಮೃತ ಲಿಂಗೇಶ್ವರದೇವರು, ಮಲ್ಲಿಕಾರ್ಜುನ ದೇವರು ಯೀ ಮೂರ್ರು ದೇವಸ್ಥಾನವನ್ನು ಕಟ್ಟಿಸಿ ೬೦ ಮೆಳೆ ಕಟ್ಟಣಿ ೬೦ ವೃತ್ತಿಯನ್ನು ಮಾಡಿ ಬ್ರಾಹ್ಮರಿಗೆ ಅಗ್ರಹಾರ ಮಾಡಿದರು.

ಅನಂತರ ಪೇಟೆ ಕಟ್ಟಿದ ವಿವರ : ಬೀದಿಗಳು ಮಾಡಿ ಪೂರ್ವದಿಕ್ಕಿನಲ್ಲಿ ಅರಮನೆ ಕಟ್ಟಿಶಿ ಶಕ್ತಿ ಗಣಪತಿಯನ್ನು ಪ್ರತಿಷ್ಠೆ ಮಾಡಿ ಕೆರ್ರೆಯನ್ನು ಕಟ್ಟಿಸಿ ಮೇಲು ಉಪ್ಪರಿಗೆಯನ್ನುಕಟ್ಟಿಸಿದರು. ಯೀ ವಿನಾಯಕಗೆ ತೆಂಗಿನಕಾಯಿ ೩೬೦ಕೆ ೧ಕೆ ಮರಾ ೬೨ಕೆ ಸಿಸ್ತುವರ ೯೪೨೪ ಉತ್ತಾರವನ್ನು ಬಿಟ್ಟರು. ಯಿದರಲ್ಲಿ ಬೀದಿಗಳು ಬಸವಣ್ಣ ದೇವರ ಪ್ರತಿಷ್ಠೆಯನ್ನು ಮಾಡಿ ಬಸವಣ್ಣ ದೇವರ ಬೀದಿ ಪೂರ್ವ ಪಶ್ಚಿಮ ದಿಕ್ಕಿನಲ್ಲೂ ೧ ಉತ್ತರ ದಕ್ಷಿಣ ಬೀದಿ ೧ ಬಣಜಿಗರಕೆರೆ ೧ ಯಿದರ ಮಧ್ಯದಲ್ಲಿ ತಳವಾರ ಕಟ್ಟೆ ೧ ಯೀತಳವಾರ ಕಟ್ಟೆ ಚಾವಡಿಗೆ ಕಲಸಿ ನೀಲಕಂಠರಾಯರು, [>ರ]ಅರಮನೆ ಮುಂಡಿಗೆ ಮುಂತಾದ್ದು ತಂದು ಕಟ್ಟಿದರ್ರು. ಯಿದರ ವಳಿಗೆ ಬೀದಿಗಳು ಯಿರ್ರುವದು : ಬ್ರಾಹ್ಮರ ಕೇರಿ ೧ ಕುಂಬಾರ ಕೇರಿ ೨ ಕಂಚಗಾರ ಕೇರಿ ೩ ಕೇಣಿಮಾಡುವ ಕೇರಿ ೪ ಉಪ್ಪಾರಕೇರಿ೫ ಕಬಾಡಿ ಕೇರಿ೬ ತುರುಕರಕೇರಿ ೭ ಪಟಣ ಸಾಲು ಕೇರಿ ೮ ಕುರುಬರಕೇರಿ ೯ ಆಗಸರ ಕೇರಿ ೧೦ ಜಾಡದ [>ರ] ಕೇರಿ ೧೧ ಸಮಗಾರ ಕೇರಿ ೧೨ ಕಾಯಿಪಲ್ಲೆ ಮಾಡುವ ಕೇರಿ ೧೩ ಯಿದರ ಬಾಗಲ ಹೊರಗಣ ಕೊಂಕಣ ಕೇರಿ ೧೪ ಗವುಜು ಕೇರಿ ೧೫ ಸೂಳೇರಕೇರಿ ೧೬ ಯೀ ನೇರೆಗೆ ಬೀದಿಗಳು ಕಟಿಶಿ ಯಿದರ ವಳಗೆ ಯಿರುವ ಮಠಗಳಲ್ಲು ಹೊಳೀನ ಹಂಪಯ್ಯನವರು ಕಟಿಶಿದ ಮಠ. ಯೀ ಹಂಪಯ್ಯನು ಜಂಗಮರ ಗುರುಉ ಸರಿ. ಮುಖ್ಯ ವರ್ತಕನು ಸರ್ರಿ ಯಿವರು ಕಾಲಕಾಲಕ್ಕೆ ಬಣ್ಣ ಸಾವಿರ ಯತ್ತು ಹರಾಜು ಮಾಡುವರು. ಯೀ ಪೇಟೆ ಆಚಾರ ವಿಚಾರವನ್ನು ಜಂಗಮ ಜಾತಿಗೆ ಯೀ ಮಠಕ್ಕೆ ಮಾಡಿದ್ದುಯಿದೆ. ಮಹಂತಿನ ಮಠ ಯಿದಕ್ಕೆ ಅರಸುಗಳು ಬಿಟ್ಟ ಸ್ವಾಸ್ತಿ ನಂದಿ ಹಳ್ಳಿಗ್ರಾಮ. ಕಂಬಳಿ ಕೊಪ್ಪದ ಗ್ರಾಮ ೧ ಸೊಗೆ ಮನೆ ಗ್ರಾಮ ೧ ಅಂತು 1 ಗ್ರಾಮ ೬ ಕೆ ವರಹಾ ೧೦೦೦ ಯಿನಾಮು ಒಬ್ಬರು ಯೀ ಮಠದಲ್ಲಿ ನಡೆಯುವ ಧರ್ಮತನಕೆ ಬರ ಮಾಡಿದ ಯಿದ್ದು ಚಿತ್ರಭಾನು ಸಂವತ್ಸರದ ಪರಿಯಂತ್ರವೂ ನಡಿಯುತ್ತ ಯಿತ್ತು ಯೀಚೆಗೆ ನವಾಬನು ಮೂವತ್ತುವರಹ ಸ್ವಾಸ್ತಿ ನೆಡಸಿದನು ಮುರಿಯುಪ್ಪ ಶೆಟ್ಟರು ಕಟ್ಟಿಸಿದ್ದು ವಿರಕ್ತ ಮಠ ೧ ಯಿನಾಮು ಅರಸುಗಳು ಕೊಟ್ಟರು. ಚನ್ನಮ್ಮಾಜಿ ಕಾಲಕ್ಕೆ ಕಟ್ಟಿದ್ದು ಯಿನಾಮು ೩೬ ವರಹಾ ಕೊಟ್ಟರು.

ಮಹಂತನ ಮಠದ ವಳಿಗೆ ಮಾಡುವ ಧರ್ಮವ ಶೇವೆಗೆ ಅನ್ನದ ಶೇವೆಗೆ ಬೆಣ್ಣೆ ಬಸವ ಗೋತ್ರಿ ಕೆಳದಿ ಪಾಟ್ಮಾಯಳ ಧರ್ಮ ಮುಖ್ಯವಾಗಿ ಹೊಗಳಿಕೊಂಡು ಯಿದ್ದರು............ಮುಂತಾಗಿ ಸಾಗರದ ಬಗ್ಗೆ ದಾಖಲಿಸಿದ್ದಾರೆ [1]

---

1. ಕರ್ನಾಟಕದ ಕೈಫಿಯತ್ತುಗಳು ಪುಟ 147

ಕೈಫಿಯತ್ತಿನಲ್ಲಿ ಕಂಡುಬರುವ ಅಗ್ರಹಾರ, ದೇವಾಲಯಗಳು, ಗಣಪತಿಕೆರೆ, ಕೆಲವು ರಸ್ತೆಗಳು ಇಂದೂ ಸಹ ಅದೇ ಹೆಸರನ್ನು ಉಳಿಸಿಕೊಂಡಿವೆ. ಉಳಿದ್ಯು ಬಂದಿವೆ. ಕೆಲವು ರಸ್ತೆಗಳು ಹೊಸ ಹೆಸರನ್ನು ಪಡೆದಿವೆ. ಒಂದೆರಡು ಕೆರೆಗಳು ನಿವೇಶನ ಮನೆಗಳಾಗಿ ರೂಪುಗೊಂಡಿವೆ. ಮುಂಡಿಗೆ ಅರಮನೆಯ ಅವಶೇಷವೂ ಇಂದು ಉಳಿದಿಲ್ಲ. ಹಂಪಯ್ಯನ ಮಠ ಇಂದು ಪಾಳು ಅವಶೇಷವಾಗಿದೆ. ಪಿಯತ್ರೋಡೆಲ್ಲಾವಲ್ಲೆ, ಬುಕನನ್‌ರವರ ವರದಿಗಳಂತೆ ಇಕ್ಕೇರಿ ಸಾಗರ ರಸ್ತೆಯಲ್ಲಿ ಇಂದೂ ಸಹ ಸಾಲುಮಠ ಇತ್ಯಾದಿಗಳನ್ನು ಗುರುತಿಸಬಹುದು[1] ಇಷ್ಟದ್ದು ಈಗ ದೊರೆತಿರುವ ದಾಖಲೆಯಲ್ಲಿ ಉಲ್ಲೇಖಿತವಾಗಿರುವ ಶ್ರಿ ನಂಜುಂಡೇಶ್ವರ ದೇವಾಲಯದ ಉಲ್ಲೇಖ ಯಾವುದೇ ದಾಖಲೆಯಲ್ಲಿ ಇದುವರೆಗೂ ಪ್ರಕಟವಾಗದಿರುವುದು ಗುರುತಿಸುವಂತಹುದು.

ಸಾಗರದ ಶ್ರೀ ನಂಜುಂಡೇಶ್ವರ ದೇವಾಲಯ

ಶ್ರೀ ನಂಜುಂಡೇಶ್ವರ ದೇವಾಲಯವು ಸಾಗರದ ಎಸ್. ಪಿ. ಎಂ ರಸ್ತೆಯಲ್ಲಿರುವ ಶ್ರೀ ವೇದಮೂರ್ತಿ ಅಪ್ಪ ಜೋಯಿಸರ ವಂಶಿಕರವರ ಮನೆಯಲ್ಲಿದೆ. ಈ ದೇವಸ್ಥಾನವನ್ನು ದಾಸಿವಾಸದ ನಾಡಿಗ ಸುಬ್ಬೆಯ್ಯನು ಕಟ್ಟಿಸಿ ಪ್ರತಿಷ್ಠೆಯ ಮಾಡಿಸಿದ್ದಾಗಿ ದಾಖಲೆಯಿಂದ ವ್ಯಕ್ತವಾಗುತ್ತದೆ. ಈ ದೇವರ ಪೂಜೆಯನ್ನು ವೇದಮೂರ್ತಿ ಅಪ್ಪಜೋಯಿಸರವರಿಗೆ ಸವಾರ ಕಛೇರಿ ಅಣ್ಣಪ್ಪನವರು ಕಡಶಿ ಶ್ರೀನಿವಾಸರಾಯರವರು ಅಜಿಮಾಟರರು ಷಿಸ್ತ್ಯಕಾರ್‍ರು ಶೇಷಗಿರಿರಾಯರ್‍ರು ಬರಿಸಿಕೊಟ್ಟ ಶ್ರೀದೇವರ ಧರ್ಮಸಾಧನವಾಗಿದೆ. ದೇವಾಲಯವು ಶಿಥಿಲವಾಗಿರುವುದರಿಂದ ಅದನ್ನು ಪುನಃ ಜೀರ್ಣೋದ್ಧಾರ ಮಾಡಿಕೊಡಬೇಕೆಂದು ಕೇಳಿಕೊಂಡ ಮೇರೆಗೆ ಮತ್ತೊಮ್ಮೆ ಜೀರ್ಣೋದ್ಧಾರ ಮಾಡಿಸಿಕೊಟ್ಟ ಬಗ್ಗೆ ದಾಖಲೆಪ್ರಸ್ತಾಪಿಸುತ್ತದೆ. ಇನ್ನೊಂದು ದಾಖಲೆಯು ಯಿಕ್ಕೇರಿ ಹೋಬಳಿ ಪ್ರಧಾನರು ಚಿನ್ನಬಂಡಾರದ ಅನಂತಯ್ಯನವರು ಬರೆಸಿದ ಶಾಸನವಾಗಿದೆ. ಅನಂತಯ್ಯನವರ ಧರ್ಮ, ದೇವಾದಾಯ, ಬ್ರಹ್ಮಾದಾಯ ಅಗ್ರಹಾರ ಭಟ್ಟಮಾನ್ಯ ಮೊದಲಾದವುಗಳು ಸರ್ಕಾರದಿಂದ ಉತ್ತರವು ಜಪ್ತಿ ಆಗಿರುವುದರಿಂದ. ಉತ್ತರದವರು ದೇವರ ಕಾಲದಲ್ಲು ಅಭಿವೃದ್ಧಿ ಆಗುವಂತೆ ಶ್ರೇಯಸ್ಸು ಹಾರೈಸಿಕೊಂಡು ಬಂದಿರುವುದಾಗಿಯೂ ಅದರಂತೆ ಉತ್ತಾರದವರಿಗೆ ದಾಖಲಾದ ಅರಮಾಸಿ ಹಾಂಕೆಗದೆ ಜಪ್ತಿ ಸಹಾ ಸರ್ವಮಾನ್ಯವಾಗಿ ಉತ್ತರದ ಭೂಮಿ ವಿಂಗಡಿಸಿಕೊಟ್ಟು ಬೆಲಿಬೆನಾರ್‍ರಿ ಸಹಾ ಸರ್ಕಾರದವರು ಕೇಳದ ಹಾಗೆ ಹಾಗೂ ಈ ಜನರಿಗೆ ಸಾಬೀತು ಬಾಕಿ ಸಹ ಮಾಫಿ ಮಾಡಿ ನಡಸುವ ಹಾಗೆ

---

1. ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು 1996

ಈ ಸಂವತ್ಸರದಲ್ಲಿ ಆಗುವಮಾಡಿದ ವಿವರವನ್ನು ಪ್ರಸ್ತಾಪಿಸಲಾಗಿದೆ. ದಾಖಲೆಯ ಕೊನೆಯಲ್ಲಿ ರುಜು ಸುಬಾ ಪಂಡಿತ್ತನ ದಪ್ತರ ದಾಖಲೆ ಎಂಬುದಾಗಿಯೂ, ದಾಖಲು ದಪ್ತರ ಶಿರಸ್ತರ ಚಿಂ. ಅನಂತ್ಯೆಯನ ಮಗ ಸುಬ್ಬೈಯನ ರುಜು ಎಂಬುದಾಗಿ ಪವಾತಿ ಯಲ್ಲಿದೆ. ಈ ದಾಖಲೆಯಲ್ಲಿ ಹದಿನೈದನೇ ಸಾಲಿನಲ್ಲಿ ಕಂಡುಬರುವ ಶ್ರೀ ನಂಜುಂಡೇಶ್ವರ ದೇವಾಲಯದ ಬಗ್ಗೆ ದೇವರಿಗೆ ಪ್ರಾಕಾರಾಭ್ಯಾಯೀಶೀಮೆಯಲು ನಡದುಬರುವ ಭೂವಿವರ ಎಂಬ ವಿವರ ಗಮನಿಸುವಂತಹುದು. ದಾಖಲೆಗಳ ಆಧಾರದ ಮೇಲೆ ದೇವಾಲಯದ ಜೀರ್ಣೋದ್ಧಾರವು ಸುಮಾರು ಶಾ. ಶ. 1735 (ಕ್ರಿ.ಶ. 1813) ರಲ್ಲಿ ಆಗಿರುವುದು ಸ್ಪಷ್ಟವಾಗುತ್ತದೆ.[1]

ಈಗ ದೇವಾಲಯ ಹಿಂದಿನ ಸ್ಥಿತಿಗಿಂತ ಭಿನ್ನವಾಗಿದೆ. ಶ್ರೀ ದೇವಾಲಯಕ್ಕೆ ಹೊಂದಿಕೊಂಡಂತೆ ಶ್ರೀ ವೇದಮೂರ್ತಿ ಅಪ್ಪಜೋಯಿಸರ ವಂಶಿಕರ ಮನೆ ಇದೆ. ಇವರೇ ಇಂದು ದೇವಾಲಯದ ಪೂಜಾ ಕೈಂಕರ್ಯಗಳನ್ನು ನೋಡಿಕೊಳ್ಳುತ್ತಿದ್ದಾರೆ.

ಎರಡೂ ಕಾಗದ ಪ್ರತಿಗಳು ಸುಮಾರು 30 × 20.6 ಸೆಂ.ಮಿ. ಇವೆ. ಪ್ರತಿ ಸಾಲಿನಲ್ಲಿ 25 ಅಕ್ಷರಗಳು, ಒಟ್ಟು 31 ಮತ್ತು 45 ಸಾಲುಗಳು ಇದರಲ್ಲಿದೆ. ಒಂದು ದಾಖಲೆಯಲ್ಲಿ ಕೊನೆಯಲ್ಲಿ ಮೊಹರಿದ್ದು ದಾಖಲೆಯು ಸಿದ್ಧಾರ್ಥಿ ಸಂ. ದ ಶ್ರಾವಣ ಶುದ್ಧ 3ರದ್ದಾಗಿದ್ದರೆ ಇನ್ನೊಂದರಲ್ಲಿ ದಾಖಲೆಯ ಮೊದಲಲ್ಲಿ ಮೊಹರಿದೆ. ದಾಖಲೆಯ ಕೊನೆಯಲ್ಲಿ ಏಳು ಸಾಲಿನಲ್ಲಿ ದೇವನಾಗರಿಲಿಪಿಯಲ್ಲಿ ಸಹಿ ಇದೆ. ಇವರಲ್ಲಿ ಶಾ. ಶ 1735 ಎಂದು ಕಾಲವನ್ನು ದಾಖಲಿಸಲಾಗಿದೆ. ದಾಖಲೆಯು ನನ್ನ ಸರ್ವೇಕ್ಷಣೆಯ ಸಂದರ್ಭದಲ್ಲಿ ಸಾಗರದ ಶ್ರೀ ಮಹಾಗಣಪತಿ ದೇವಾಲಯದ ಪ್ರಧಾನ ಅರ್ಚಕರೂ ಸಾಗರದ ಪ್ರಮುಖ ಅರ್ಚಕರೂ ಆಗಿರುವ ಶ್ರೀ ಸೂರ್ಯನಾರಾಯಣ ಜೋಯಿಸ್ ಅವರಲ್ಲಿ ದೊರೆತದ್ದಾಗಿದೆ.[2]

ನಗರಗಳು ಇಂದು ದಿನದಿಂದ ದಿನಕ್ಕೆ ಆಧುನಿಕತೆಗೆ ಒಳಗಾಗಿ ತನ್ನ ಹಿಂದಿನತನವನ್ನು ಕಳೆದುಕೊಳ್ಳುತ್ತಿರುವುದು ಸರ್ವವಿದಿತ. ಅವುಗಳ ಬೆಳವಣಿಗೆಗೆ ಕಡಿವಾಣವೂ ಅಗತ್ಯ. ಈ ಬೆಳವಣಿಗೆಗೆ ಸಾಗರವೂ ಹೊರತಾಗಿಲ್ಲ. ಹೊಸತನಕ್ಕೆ ಮೈ ಚಾಚಿದೆ, ಹೊಂದಿಕೊಂಡಿದೆ. ಹಿಂದಿನ ಸಾಗರವನ್ನು ತಿಳಿಯಲಿಚ್ಛಿಸುವವರಿಗೆ ಆ ಕಾಲದ ದಾಖಲೆಗಳು ಅವಕಾಶ ಮಾಡಿಕೊಡುತ್ತವೆ. ಅದರಂತೆ ಆ ಕಾಲದ ದೇಶೀಯ ಸಂಸ್ಥಾನಗಳ

1. ಕರ್ನಾಟಕ ಇತಿಹಾಸ ಅಕಾಡೆಮಿಯ ವಾರ್ಷಿಕ ಸಮ್ಮೇಳನ ಧಾರವಾಡ 1996
2. ಈ ದಾಖಲೆಯನ್ನು ಬಳಸಿಕೊಳ್ಳಲು ಅನುಮತಿ ಇತ್ತ ಶ್ರೀ ಸೂರ್ಯನಾರಾಯಣ ಜೋಯಿಸರವರಿಗೆ ಕೃತಜ್ಞತೆಗಳು.

ಆಡಳಿತ ನಗರ ವ್ಯವಸ್ಥೆ ಇವುಗಳನ್ನು ತಿಳಿಯುವಲ್ಲಿಯೂ ಈ ದಾಖಲೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಅಂತಹ ದಾಖಲೆಗಳು (ಬೊಕ್ಕಸದ ಅಧಿಕಾರಿಗಳು ರಾಯಸದವರು, ಶಾನುಭೋಗರು ಇತರೆ) ಈಗಲೂ ಅಲ್ಲಲ್ಲಿ ಹರಡಿವೆ. ಕೆಲವಷ್ಟು ನಶಿಸಿವೆ. ಅಂತಹವುಗಳ ಸಂಗ್ರಹ, ಸಂಶೋಧನೆ, ಪ್ರಕಟಣೆಗಳಿಂದ ಆ ಕಾಲದ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಜೀವನವನ್ನು ಅರಿತು ಅದರಂತೆ ಇಂದು ಅಳವಡಿಸಿಕೊಳ್ಳಲು ಅನುಕೂಲವಾಗುತ್ತದೆ. ಅಂತಹ ದಾಖಲೆಗಳ ಸಂಗ್ರಹದ ಪ್ರಯತ್ನಕ್ಕೆ ಈಗ ಆಗಬೇಕಾಗಿರುವುದನ್ನು ಒತ್ತಿ ಹೇಳಬೇಕಾಗುತ್ತದೆ. ಕೆಳದಿ ವಸ್ತುಸಂಗ್ರಹಾಲಯ ಈ ನಿಟ್ಟಿನಲ್ಲಿ ತನ್ನ ಪ್ರಾಮಾಣಿಕ ಪ್ರಯತ್ನವನ್ನು ಕೈಗೊಂಡಿರುವುದು ಸ್ತುತ್ಯರ್ಹವಾದುದು.

ಕಾಗದ ಪ್ರತಿ 01

ಮುಂಭಾಗ

ಶ್ರೀರಾಮ ।

1. ಸಿಧಾರ್ತಿ ಸಂವತ್ಸರದ ಶ್ರಾವಣ ಶು ೩ ಲು ಶ್ರೀಮತ್ತು ಯಿಕೇರ್ರಿ ಹೊಬಳಿ ಪ್ರಧಾ ।
2. ನರು ಜಿಂನಭಂಡಾರದ ಅನಂಯತ್ಯನ ಧರ್ಮ ಯಿಕ್ಕೇರ್ರಿ ಯಲಗಳಲಿ ಅತ್ತು
3. ವಾಡ್ಡಿ ಕಲುಸಿ ಮಂತಸಾಲೆ ಮಳಲಿ ಶಿರವಂತ್ತೆ ಆನಿನಹಳಿ ಮುಂತಾದ ಶಿಮೆಮಣಿ ।
4. ಹ್ಯಗಾಗ್ರು ಶ್ಯಾನುಬಾಗರ್ರಿಗೆ ಸಹಾ ನಮಸ್ಕಾರ ಅದಾಗಿ ದೆವಾಯ ಬ್ರಂಹಾದಾಯ
5. ಅಗ್ರಹಾರ ಬಟ್ಟಿಮಾಂನ್ಯ । ಸತ್ರ ಬೊವಿ ಜಂಗಮ । ಪಬಿರ ವಗ್ಯೆರ್ರೆ ಯಿನಾಮುವರ್ರು ।
6. ಶಾಸನ ಮುಂತ್ತಾಗಿ । ಸಾಬಕ್ಕು ಸರಕಾರದಲು ಉತ್ತಾರ ಜಪ್ತಿ ಆಗಿ ಅಥೆಯುಂಬದಾಗಿ ಉ ।
7. ತ್ತಾರದವರ್ರು ದೆವರ ಕಾಲದಲು ಸರ್ವಮಾಂನ್ಯ ಉತ್ತಾರಕ್ಕೆ ಪೂರ್ವ ಪ್ರಕಾರ । ಅಪ್ಪಣೆ ಕ್ಕೊ ।
8. ಡ್ಡಿಶಿದಲ್ಲಿ ಸರಕಾರದ ಬೆಳುಲತ್ತು ಅಬಿವೃಧಿ ಅಗುವಂತ್ತೆ ಶ್ರೆಯಸು ಹಾರೈಶಿ ಕೊಂ ।

9. ಡು ಯಿದೆಲು ಯಂತ್ರಾ ಹಜೂರ್‍ರಿಗೆ ಬಂದು ಅರ್‍ರಿಕೆ ಮಾಡ್ಡಿಕೊಂಡದರ್‍ರಿಂದ ಸರ |

10. ಹು| ಉತ್ತಾರದವರ್‍ರಿಗೆ ಸಾಬಿತು ದಾಖಲಾದ ಅರವಾಶಿ ಹಾರಿಕೆಗದೆ ಜಪ್ತಿ ಸ|

11. ಹಾ ಸರ್ವಮಾಂನ್ಯವಾಗಿ ಉತ್ತಾರದ ಭೂಮಿನಿಂಗಡ್ಡಿ ಶಿ ಕೊಟ್ಟು ಬೆಗಾರ್‍ರಿ ಸ |

12. ಹಾ ಸರಕಾರದವರು ಕೆಳದ ಹಾಗೂ ಯಿೂ ಜನರ್‍ರಿಂದ ಸಾಬಿತು ಬಾಕ್ಕಿ ಸಹ ಮಾಡು

13. ಮಾಡ್ತಿ ನಡಸುವ ಹಾಗೆ ಯಿೂ ಸಂವತ್ಸರದಲೂ ಆಷಾಡ ಶು ೯ ದಿವಸದ ಪರವಾನೆ ಸಾ |

14. ವರಾದರ್‍ರಿಂದ ಬರಶಿಕಳುಹಿಧಿತ್ತು. ಆ ಬಗ್ಗೆ | ಯಿೂ ಸಾಗರದ ಪ್ಯಾತೆಬಳಗೆ ಯಿರುÓ |

15. ಪ ನಂಜುಂಡೇಶ್ವರ ದೆವರ್‍ರಿಗೆ ಪ್ರಾ ಕಾರಬ್ಯಾ ಯಿೂ ಶಿಮೆಯಲು ನಡದು ಬರ್‍ರುವ ಭೂ |

16. ಸ್ವಾಸ್ತೆ ಗ೫೦೯೦ ಕೆ ವಿವರ | ಗದೆಯಿಂದ ಗ ೨೬ ತೊಟ್ಟದಿಂದ ಗ ೨೩. ಉಭಯಂ ಗ ೫೦೯೦ಕ್ಕೆ

17. ವಿವರ್ಣ ಯಿಕ್ಕೆರ್‍ರಿ ಶಿಮೆ ನಿರಕೊಡು ಗ್ರಾಮದಲು ಗದೆಗಳಿ ಯಲಗಳಲೆ ಶಿಮೆ ಶಿಡ |

18. ತ್ತಿ ಕೆರೆ ಗ್ರಾಮದಲು ತ್ತೊಟ್ಟ ಗ೬ ಅತ್ತುವಾಡಿ ಶಿಮೆಯಲು । ಹೆಗೊಡು ಗ್ರಾಮದಲು

19. ತೊಟ್ಟೆ ಗ ೧ ಕೊಡನಕಟಿ ಗ್ರಾಮದಲು ತ್ತೊಟ ಗ ೪ ಉಭಯಂ ಗ ೫ ಕಲುಸಿ ಗ್ರಾಮ |

20. ಕೆರವರ್‍ರಿ ಗದೆ ಗ೨ ಬಾಳಗೊಡು ಗ್ರಾಮ ಗದೆ ಗ ೪ ಉಭಯಂ ಗ ೬ ಮಂತಸಾಲೆ ಶಿಮೆ |

21. ಯಲು ಗದೆ ವಳ್ಸಗೊಡಲು ಗ ೩ ನಾಮ್ರುಗೊಡಲು (ಗ ೪) ಗ ೩ ಉಭಯಂ ಗ ಶಿರವಂ |

22. ತ್ತೆ ಶಿಮೆ ಗಿಜುಗಾರ್‍ರು ಗ್ರಾಮದಲು ತೊಟ ಗ ೨ ಆವಿನಹಳಿ ಶಿಮೆಯಲು ಮಲವ |

23. ಬೆಂಕಟವಳಿ ಗ್ರಾಮದಲು ಗ ೮ ಮಳಲಿ ಶಿಮೆ ಹಳೆತೊಟವ ಗ್ರಾಮದಲು ಗದೆ ಗ ೩ ಅಂತು

24. ಸ್ಥಳ ೧೧ ಲು ಗ ೫೦೯೦ಕೆ ವಿವರ ಕಟಲೆ ಬಗ್ಯೆ ಗ ೨೦ಕೆ ವಿವರ | ಅಮ್ರುತಪಡಿ ನೈವೆದ್ಯ ಹಂ |

25. ಣುಕಾಯಿ ವಗ್ಯೆರ್ರ್ಗ ನಂದಾದಿಪಯಂಣ ಬತ್ತಿ ಸಹ ೯ಗ್ಗ ಸೋಮವಾರ ಪ್ರ |
26. ದೋಷ ಮುಂತ್ತಾದ ವಿಶೆಷದಿನ್ಸ ಪಂಚಾಮುೃತ ಗ ೨ ಪಂಚಪರ್ವ ಶ್ರಾವಣ
ಕಾರ್ತಿಕ ದಿಪೋ |
27. ತ್ಸಹ ಮುಂತ್ತಾಗಿ ಗ ೨ ಮಾಘ ಶು ೨ ಲು ಪದಂ (೯) ತ್ತಿ ಸಂಮಂಧ
ಬ್ರಾಹ್ಮರ ಸಂತರ್ಪಣೆ ಸ।
28. ಹಗ ೪ ಅಂತೂ ಗ ೨೦ ಸ್ಥಾನಿಕ ಉಪಾದಿಪಂತ್ತರ ಮಹಾಜನ ೫ಕ್ಕೆ
ಜೋಯಿಸ ಶೆಷಭಟರ ಮ |
29. ಖಾಂತ್ರ ಗ ೩೦ಕೆ ವಿವರ್ರ ಪೂಜೆ ಮಾಡುವ ಶೆಷಭಟರ್ರಗೆ ಗ ೯
ಸಹಸ್ರನಾಮ ಪೂಜೆ ಉ |
30. ಪಾದಿ ಅಪೂಭಟರ್ರಿಗೆ ಗ೬ ೩ ರುದ್ರಾಭಿಶೆಕ ಜನ ೩ಕೆ ಗ ೧೮ಕೆ ವಿವರ್ರ
ಆಗ್ರಹಾರದ |
31. ಹರ್ರಿಭಟರ್ರಿಗೆ ಗ ನಗರದ ವೆಂಕುಭಟರ್ರಿಗಿ ಗ್ಕ ಸಾಗರದ ಕನಕ ಭಟ್ರು
ಫಣಿ ಭ |
32. ಟರ್ರಿಗೆ ಗ ೬ ಅಂತೂ ಗ ೧೮ ಉಭಯಂ ಬ್ರಾಹ್ಮರ್ರಿಗೆ ಸಲುವದು ಗ ೩೦
ಉಭಯಂ |
33 ಗ ೫೦೯೦ದ ಭೂಮಿವಕಲುಗಳ ಸಹ ಮಿಂಗಡ್ಡಿಶಿ ಕೊಟು ನಡ್ಸುಪಂತ್ತೆ ಕಟು
ಮಾಡ್ಡಿಶಿಥಿತ್ತು |
34. ಆ ಪ್ರಕಾರ | ಅ್ರೃವತ್ತು ವರಹಾದ ಭೂಮಿ । ವಳಗೆ ಬರದ ಪ್ರಕಾರ ಆ
ವಕಲುಗಳ ಸಹಾ
35. ಯಿೂ ಶೆಷಭಟರ ಹವಾಲೆ ಮಾಡಿಶಿ ಕೊಟ್ಟು | ಯಿೂ ಭೂಸ್ವಾಸ್ತೆಯಂನ್ನು
ಸರ್ವಮಾಂನ್ಯ |
36. ಉತ್ತ್ರಾರವಾಗಿ ಸಂತಾನ ಪಾರಂಪರ್ರಿಯಲು ಸುಖದಿಂದಲಿ ಅನುಬವಿಶಿ ಕೊಂಡ್ಡು
ದೆವ|
37. ತಾ ಕಟಲೆ ಕಾಲಕಾಲದ ಪೂಜೆ ಮಾಡ್ಡಿ ಅಮ್ರುತಪಡಿ ನಂದಾದಿಪ
ಪಂಚಾಮ್ರುತ ಪಂಚ |
38. ಪರ್ವ ದಿಪೋತ್ಸಹ ಮುಂತ್ತಾದ ಉತ್ಸಹಗಳನ್ನು ಸಾಂಗವಾಗಿ ನಡಶಿಕೊಳ್ಳುತ್ತ
ಸರಕಾರ
39. ದ ದಉಲತ್ತಿಗೆ ಶ್ರೆಯೋಬ್ರಿಧಿ ಆಗುವಂತ್ತೆ ಹಿತಚಿಂತೆಯಿಂದಾ ಜಪತಪ ಅ |
40. ನುಷ್ಟಾನ ಸಾಂಗವಾಗಿ ಮಾಡಿಕೊಂಡು ಸಂತೊಷದಲು ಯಿರ್ರುವಂತ್ತೆ ಹೆಳಿಶಿ
ವಕಲುಗಳ |

41. ಗೆ ಸರಕಾರದ ಬಿಟಿ ಬೆಗಾರ್ರಿ ಸಹಾ ಕೆಳದೆ ಸಾಬಕುಬಾಕ್ಕಿ ಸಾಕಯಿದಾಗ್ಯು ಮಾಫಿ ಮಾಡ್ದಿ |

42. ಶಿ ಸುಖದಲಿ ಯಿರುವಂತ್ತೆ ಸರಾಗದಲಿ ನಡ್ಸುವದಾಗಿ ಯಿಾ ಸನದು ಲೆಖಕ್ಕೆ ಬ |

43. ರಕೊಂಡು ಪುನಹಾ ಯಿಾ ದೆನಸ್ತಾನ ಶೆಷಭಟರ ಹವಾಲೆ ಕೊಡಿಸುವದಾಗಿ ೩೦

44. ತ್ತಿ ನಮಸ್ಕಾರಾ.

ರುಜು ಸುಬಾ ಪಂಡ್ದಿತನ ದಪ್ತರ ದಾಖಲು ದಾಖಲುದಪ್ತರ ಶಿರಸ್ತಾರ ಚಿಂ : ಅನಂತ್ತೈನ ಮಗ ಸುಬ್ಬಯನ ರುಜು.

ಪತ್ರ2 ಮುಂಭಾಗ :

1. ಶುಭಮಸ್ತು ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ | ತ್ರೈಲೊ
2. ಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೆ ಸ್ವಸ್ತಿ ಶ್ರೀ ವಿಜಯಾಭ್ಯುದಯ
3. ಶಾಲಿವಾಹನ ಶಕ ವರುಷ ೧೭೫೩ ನೆ ವರ್ರಿವರ್ತ ಮಾನಕೆ ಸಲುವ ಖರ ಸಂವತ್ಸ
4. ರದ ಅಶ್ವಿಜ ಶು ೧೦ ಲು ಶ್ರೀಮತ್ತು ಯಿಕೆರ್ರಿ ಸಾಗರದಲು ಯಿರ್ರುವ
5. ವೆದಮೂರ್ತಿ ಅಪ್ಪ ಜೋಯಿಸರವರ್ರಿಗೆ ಹಜೂರ್ರು ಸವಾರ ಕಚೆರ್ರಿ × × × ಕೆ ಅಂ
6. ಣಪ್ಪನವರ್ರು ಅಜಿಮಾಟರರು ಕಡಶಿ ಶ್ರೀನಿವಾಸರಾಯರವರ್ರು ಪಿಷಕಾರ್ರು ಶೆಷ
7. ಗಿರಿರಾಯರ್ರು ಸಹಾ ಬರಶಿಕೊಟ ಶ್ರೀ ನಂಜುಂಡೇಶ್ವರ ದೆವರ ಪೂಜಾ ಧರ್ಮ ಸಾಧನ
8. ಅದಾಗಿ | ಸಿಂಮ ಮನೆಗೆ ಪಶ್ಚಿಮ ದಿಕಿನಲ್ಲು ಯಿರ್ರುವ ನಂಜುಂಡೆಶ್ವರ ದೆವರ

9. ದೆವಸ್ತಾನವಂನ್ನು ಯಿಾ ಸ್ತಳದ ನಾಡಿಗ ದಾನಿವಾಸ್ತ ಸುಬ್ಬೈಯನ್ನು ಪ್ರಾಕು ಕಟಿಶಿ

10. ದೆವರ ಪ್ರತಿಷ್ಟೆ ಮುಂತಾಗಿ ಮಾಡಿ ಯಿಾದೆವರ ಪೂಜೆಯುಂನ್ನು ನಿವು ಮಾಡಿ ಕೊಂಡು

11. ಬರ್ರುವಂತೆ ಗೊತ್ತುಮಾಡಿಕೊಟುಯಿದರ್ರಿಂದಾಗಿಲು ಅದೆ ಮೆರ್ರಿಗೆ ದೆವರಪೂ

12. ಜೆ ಮಾಡಿಕೊಂಡು ಬರ್ರುತ್ತಯಿದಲ್ಲಿ ಯಿಾಚೆಗೆ ಸದರ್ರಿ ದೆವಸ್ತಾನವು ಶಿಥಿಲ ವಾಗಿ

13. ಬಿದ್ದುಹೊದರ್ರಿಂದಾಗಿಲು ನಿವು ಸಂನಲ್ಲಿಗೆ ಬಂದು ಯಿಾ ದೆವಸ್ತಾನವಂನ್ನು ಕಟಿಶಿಕೊಟು

14. ದೆವರ ಪ್ರತಿಷ್ಟೆ ಮುಂತ್ತಾಗಿ : ಮಾಡ್ಸಿಕೊಟರ್ರಿ : : : : ಪ್ರಭುಗಳವರ ಶ್ರ

15. ಯು : ಪ್ರಾರ್ಥನೆ ಮಾಡಿಕೊಂಡು ದೆವರ ಪೂಜೆಯುಂನ್ನು ಸಾಂಗೊಪರವಾಗಿ

16. ಮಾಡಿಕೊಂಡು ಬರುತ್ತೆವೆಂಬದಾಗಿ ಹೆಳಿಕೊಂಡದರ್ರಿಂದಾ : ಅದೆ ಮೆರ್ರಿಗೆ ಯಿಾಗ

17. ಸದರ್ರಿ ದೆವಸ್ತಾನವನ್ನು ಹೊಸ್ತಾಗಿ ಕಟಿಶಿ ದೆವರ ಪ್ರತಿಷ್ಟೆ : ಅಷ್ಟಬಂಧನ ಬ್ರಾಂ

18. ಹ್ಮರ ಸಂತರ್ಪಣೆ ಮುಂತಾಗಿ ಮಾಡ್ಸಿಯಿಾ ದೆವಾಲಯುವಂನ್ನು ನಿಂಮು ಸ್ವಾಧಿನ

ಹಿಂಭಾಗ :

19. ಮಾಡಿಕೊಟ್ಟುಯಿರ್ರುವದರ್ರಿಂದಾ | ಯಿಾ ಹೊತ್ತಿನಾರಭ್ಯ ಮುಂದೆ ನಿಂಮು ಸಂ

20. ತಾನ ಪಾರಂಪರ್ಯವಾಗಿಯೂ ಯಿಾ ದೆವರ ಪೂಜೆಯುಂನ್ನು ನಿವು ಮಾಡಿ ಕೊಂಡು

21. : :ನಂಮು ಪ್ರಭುಗಳವರ ಶ್ರೆಯ ಪ್ರಾರ್ಥನೆಯುಂನ್ನು ನಿತ್ಯಪ್ರತಿ

22. ಯುಲು ಮಾಡಿಕೊಂಡು ಬರುವದೆಂಬದಾಗಿ | ನಂಜುಂಡೇಶ್ವರ ಪೂಜಾ ಸಾಥ

23, ನ ಸ್ವದತ್ತಾದ್ವಿಗುಣಂ ಪುಣ್ಯಂ ಪರದತ್ತಾನು ಪಾಲನಂ| ಪರದತ್ತಾಪಹಾರೇಣ

24. ಸ್ವದತ್ತಂ ನಿಶ್ಪಲಂಬವೆತ್ತು| ದಾನ ಪಾಲನಯೊರ್ಮಧ್ಯೆ ಥಾನಾಂ ಶ್ರೆಯೊನ್ನು

25. ಪಾಲನಂ| ದಾನಾಂ ಸ್ವರ್ಗಮವಾಪ್ನೋತಿ ಪಾಲನಾದಚ್ಯುತಂ ಪದಂ : :

—o—

ಸಾಹಿತ್ಯ ಚರಿತ್ರೆಯಲ್ಲಿ 'ಅನುಭಾವ ಸಾಹಿತ್ಯ'-ಒಂದು ಟಿಪ್ಪಣಿ

ನಾ. ಗೀತಾಚಾರ್ಯ

೧

ಹರಿದಾಸ ಸಾಹಿತ್ಯಕ್ಕೆ ಕನ್ನಡ ಸಾಹಿತ್ಯಲೋಕದಲ್ಲಿ ವಿಶಿಷ್ಟವಾದ ಸ್ಥಾನವಿದೆ. ಸಾಮಾನ್ಯವಾಗಿ ಈ ಸಾಹಿತ್ಯ ಪರಂಪರೆಯನ್ನು ನಾಲ್ಕು ಘಟ್ಟಗಳಲ್ಲಿ ಗುರುತಿಸುತ್ತಾರೆ. ಕ್ರಿ.ಶ.ಸು 1375 ರಲ್ಲಿದ್ದ ನರಹರಿತೀರ್ಥ ಮತ್ತು ಶ್ರೀಪಾದರಾಜರಿಂದ ಆರಂಭವಾದ ಈ ಸಾಹಿತ್ಯ ವ್ಯಾಸರಾಯರು ಮತ್ತು ಅವರ ಶಿಷ್ಯಂದಿರಾದ ಕನಕ ಪುರಂದರ ಕಾಲದಲ್ಲಿ ವಿಜೃಂಭಣೆಯಿಂದ ಮೆಗೆದು ವಿಜಯನಗರ ಸಾಮ್ರಾಜ್ಯದ ಉನ್ನತಿಯೊಂದಿಗೆ ತಾನೂ ಉನ್ನತಿಯನ್ನು ಪಡೆಯುತ್ತದೆ. ಪುರಂದರದಾಸ ಕನಕದಾಸರು ಜನಮನದಲ್ಲಿ ಈ ಕೀರ್ತನ ಸಾಹಿತ್ಯವನ್ನು ಚಿರಸ್ಥಾಯಿಗೊಳಿಸಿದ್ದಾರೆ ಅನಂತರ ವಾದಿರಾಜರು ವಿಜಯದಾಸರು ಮೊದಲಾದವರು ಇದನ್ನು ಮೊದಲಿನಷ್ಟು ಉಚ್ಛ್ರಾಯ ಸ್ಥಿತಿಯಲ್ಲಲ್ಲದಿದ್ದರೂ ತಕ್ಕ ಮಟ್ಟಿಗೆ ಬೆಳೆಸಿಕೊಂಡು ಬಂದರು. ವಿದ್ವಾಂಸರು ಕ್ರಿ.ಶ.ಸುಮಾರು 1550ರಿಂದ 1775 ರವರೆಗೆ ಕಾಲ ಘಟ್ಟವನ್ನು ನಿಲ್ಲಿಸಿ, ಅಲ್ಲಿಂದ ಮುಂದಕ್ಕೆ1850 ರವರೆಗೆ ನಾಲ್ಕನೆ ಘಟ್ಟವಾಗಿ ಗುರುತಿಸಿದ್ದಾರೆ. ಪ್ರಾಣೇಶದಾಸರು ಗುರುಪ್ರಾಣೇಶರು ಮುಂತಾದವರನ್ನು ಈ ಅವಧಿಯಲ್ಲಿ ಸೇರಿಸುತ್ತಾರೆ. 1750ರವರೆಗೂ ಹೇಗೋ ಬೆಳೆದುಕೊಂಡು ಬಂದ ದಾಸ ಸಾಹಿತ್ಯ ಅಲ್ಲಿಂದ ಮುಂದಕ್ಕೆ ಸಾಕಷ್ಟು ಇಳಿಮುಖವಾಗುತ್ತದೆ.

ಈ ಬಗ್ಗೆ ವಿದ್ವಾಂಸರು ವಿವಿಧ ಅಭಿಪ್ರಾಯಗಳನ್ನು ಮುಂದಿಡುತ್ತಾರೆ. "ಬರುಬರುತ್ತಾ ಬ್ರಾಹ್ಮಣ್ಯಕ್ಕೆ ಪ್ರಾಪ್ತವಾದ ದುರವಸ್ಥೆಯಲ್ಲಿ ದಾಸ ಜೀವನದ ತೇಜಸ್ವಿತೆ ಕಡಮೆಯಾದಂತೆಲ್ಲ ದಾಸ ಸಾಹಿತ್ಯವೂ ಕಳೆಗುಂದಿತೆಂದು ಹೇಳಬಹುದು.[1] "ಸುಮಾರು 1760 ರಿಂದ 1800 ರವರೆಗೆ ಅತ್ತ ಹೈದರಾಬಾದಿನ ನಿಜಾಮ ಇತ್ತ ಹೈದರ್ ಮತ್ತು ಟಿಪ್ಪು ಇವರುಗಳ ಪ್ರಾಬಲ್ಯದಲ್ಲಿ ಬ್ರಾಹ್ಮಣರಿಗೆ ಕೆಲಮಟ್ಟಿಗೆ ದುರವಸ್ಥೆ ಒದಗಿದ್ದಿರಬಹುದು. ಆದರೆ ಬ್ರಾಹ್ಮಣ್ಯಕ್ಕೇ ದುರವಸ್ಥೆ ಒದಗಿತೆಂದು ಹೇಳುವುದು ಕಷ್ಟ. (ಬ್ರಾಹ್ಮಣ್ಯ ಎನ್ನುವ ಪದದ ವ್ಯಾಪಕಾರ್ಥದಲ್ಲಿ ಮಾಧ್ವ ಮತವಲ್ಲದೆ ಸ್ಮಾರ್ತ

1. ರಂ. ಶ್ರೀ. ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, 1953, ಪುಟ 287.

ಶ್ರೀವೈಷ್ಣವ ಮತಗಳೂ ಸೇರುತ್ತವೆ ಎನ್ನುವುದನ್ನು ಗಮನಿಸಬೇಕು.) ಯಾವುದೇ ಒಂದು ಸಾಹಿತ್ಯ ಪ್ರಕಾರ ಒಂದು ಉನ್ನತಿಯ ಮಟ್ಟವನ್ನು ಮುಟ್ಟಿದ ಮೇಲೆ ತನ್ನ ಶಕ್ಯತೆಗಳನ್ನೆಲ್ಲ ಉಪಯೋಗಿಸಿಕೊಂಡು ಸಾಧಿಸಬೇಕಾದದ್ದನ್ನೆಲ್ಲ ಸಾಧಿಸಿ ತನ್ನಿಂದ ತಾನೇ ಸತ್ವಗುಂದಿ ಕೇವಲ ಆಕಾರ ಮಾತ್ರವಾಗಿ ಮುಂದುವರಿಯುವುದು ಒಂದು ಸಹಜ ಘಟನೆ. ಚಂಪೂಕಾವ್ಯ, ವಚನ ಸಾಹಿತ್ಯ, ಷಟ್ಪದಿ ಕಾವ್ಯ ಮುಂತಾದ ಎಲ್ಲ ಸಾಹಿತ್ಯ ಪ್ರಕಾರಗಳಿಗೆ ಒದಗಿದ ಅವಸ್ಥೆಯೇ ಹರಿದಾಸ ಸಾಹಿತ್ಯಕ್ಕೂ ಒದಗಿತು."[1] ಈ ಎರಡು ಕಾರಣಗಳೂ ವಿಚಾರಣೀಯವಾಗಿಯೇ ಇವೆ. ಮೊದಲನೆಯದಕ್ಕಿಂತ ಎರಡನೆಯದು ಹೆಚ್ಚು ಚಿಂತನಪರವಾಗಿದೆ. ಕಾರಣ ಏನೇ ಇದ್ದರೂ ಯಾವುದೇ ಒಂದು ವ್ಯವಸ್ಥೆ ಶಾಶ್ವತತೆಯನ್ನು ಪಡೆದಿರುವುದಿಲ್ಲ, ಬದಲಾವಣೆಗೆ ಒಳಪಟ್ಟಿರುತ್ತದೆ ಮತ್ತು ಹೊಸದಕ್ಕೆ ದಾರಿಮಾಡಿಕೊಡುತ್ತದೆ ಎಂಬುದು ಪ್ರಕೃತಿ ಸಹಜವಾದ ನಿಯಮ. ಇದರಂತೆ ದಾಸಸಾಹಿತ್ಯವೂ ತನ್ನ ಪ್ರಭಾವವನ್ನು ಕಳೆದುಕೊಂಡು ಸಮಾಜದ ಪ್ರಸ್ತುತತೆಯ ಅಗತ್ಯಕ್ಕೆ ತಕ್ಕಂತೆ ಹೊಸರೂಪವನ್ನು ಪಡೆದು ಹೊಸದೊಂದರ ಉದಯಕ್ಕೆ ಕಾರಣವಾಗಿದೆ. ಆ ಕಾಲದ ಸಾಮಾಜಿಕ ಅಗತ್ಯಕ್ಕೆ ಅತ್ಯಗತ್ಯವಾಗಿದ್ದ 'ಅನುಭಾವ ಸಾಹಿತ್ಯ'ಕ್ಕೆ ಇದು ಕಾರಣವಾಗಿದೆ ಎಂದು ಅಂತಿಮವಾಗಿ ಹೇಳಬೇಕಾಗುತ್ತದೆ.

ಈ ಬಗ್ಗೆ ಹೊಸ ಚಿಂತನೆಯ ಅಗತ್ಯವಿದೆ. ಈ ಕಾಲ ಘಟ್ಟದ ಮತ್ತು ಇಲ್ಲಿಂದ ಮುಂದಿನ ಅವಧಿಯ ಸಾಹಿತ್ಯವನ್ನು ಯಾವುದೇ ಒಂದು ಮತದ ಅಥವಾ ಒಂದು ಪ್ರಕಾರದ ಹಿಡಿತಕ್ಕೆ ತರಲು ಸಾಧ್ಯವಿಲ್ಲದಷ್ಟು ವೈವಿಧ್ಯಮಯವಾಗಿದೆ. ಆಧ್ಯಾತ್ಮ-ತತ್ವ ಮತ್ತು ವೇದಾಂತ ವಿಷಯದ ವಸ್ತುಗಳೇ ಪ್ರಾಧಾನ್ಯವನ್ನು ಪಡೆಯುತ್ತವೆ. ಶರಣರು, ಸ್ಮಾರ್ತರು, ಶ್ರೀವೈಷ್ಣವರು. ಮಾಧ್ವರು ಹೀಗೆ ಎಲ್ಲ ವರ್ಗದವರಲ್ಲೂ ಇದು ಏಕ ಪ್ರಕಾರವಾಗಿ ಹರಡಿರುವುದನ್ನು ಸಾಮಾನ್ಯವಾಗಿ ಕಾಣಬಹುದು.

ಈ ಎಲ್ಲ ಸಾಹಿತ್ಯವನ್ನೂ ಈವರೆಗೆ ಆಯಾವರ್ಗದ ದೃಷ್ಟಿ-ಧೋರಣೆಗಳ ಹಿನ್ನೆಲೆಯಲ್ಲಿ ಪ್ರತ್ಯೇಕವಾಗಿ ಗುರುತಿಸಲು ಪ್ರಯತ್ನಿಸಲಾಗಿದೆ. ಉತ್ತರೋತ್ತರ ಕಾಲೀನ ಹರಿದಾಸರು 'ಶರಣರ ಅನುಭಾವ ಸಾಹಿತ್ಯ', 'ಮಾಧ್ವೇತರ ಹರಿದಾಸರು', ಅದ್ವೈತಸಾಹಿತ್ಯ' 'ಶ್ರೀವೈಷ್ಣವ ಕವಿಗಳು' ಭಕ್ತ ಕವಿಗಳು, 'ತತ್ವಪದಗಳು' ಇತ್ಯಾದಿ. ವಾಸ್ತವವಾಗಿ

---

1. ಎಂ. ವಿ. ಸೀತಾರಾಮಯ್ಯ, ಹರಿದಾಸರು ಮತ್ತು ಅನುಭಾವ ಕವಿಗಳು. 1988, ಪುಟ :4.

ಸಮಾನ ಆಶಯವನ್ನು ಹೊತ್ತು ಮತಭೇದಗಳನ್ನು ಮೀರಿ ಬೆಳೆದು ನಿಂತಿರುವ ಶ್ರೇಷ್ಠ ಸಾಹಿತ್ಯ ತತ್ವವನ್ನು ಹೀಗೆ ಮತಭೇದಗಳಲ್ಲಿ ಹಿಡಿದು ನಿಲ್ಲಿಸಿ ಸಂಕುಚಿತಗೊಳಿಸುವುದು ಅಷ್ಟು ಉಚಿತವಾಗಿ ಕಂಡುಬರುವುದಿಲ್ಲ. ಆದ್ದರಿಂದ ನಮಗೆ ಸಿಗುವ ಸಾಹಿತ್ಯದ ಗುಣ-ಸ್ವಭಾವದ ಹಿನ್ನೆಲೆಯಲ್ಲಿ ಈ ಕಾಲದ ಎಲ್ಲ ಬಗೆಯ ಸಾಹಿತ್ಯವನ್ನೂ 'ಅನುಭಾವ ಸಾಹಿತ್ಯ' ಎಂದು ಹೆಸರಿಸುವತ್ತ ನಮ್ಮ ಚಿಂತನೆ ಬೆಳೆಯ ಬೇಕಾಗಿದೆ. ಅನುಭವ ಜನ್ಯವಾದದ್ದು ಅನುಭಾವ. ಈ ಕಾಲದ ಎಲ್ಲ ಕವಿಗಳೂ ಸಾಹಿತ್ಯ ರಚಿಸಿದ್ದು ಈ ಬಗೆಯ ವಿಶಿಷ್ಟ ಅನುಭವ ಸಿದ್ಧಿಯಿಂದ. ಈ ಬಗ್ಗೆ ರಾನಡೆಯವರು ಈಗಾಗಲೆ ಚಿಂತನೆಯನ್ನು ನಡೆಸಿದ್ದಾರೆ.[1] ಅನುಭಾವದ ಬಗ್ಗೆ ಅತ್ಯಂತ ಸಮಂಜಸವಾದ ವಿವರಣೆಯನ್ನು ತಮ್ಮ ಗ್ರಂಥದಲ್ಲಿ ನೀಡಿದ್ದಾರೆ. 'ನಿಜವಾದ ಅನುಭಾವಿ ಶೈವನೂ ಅಲ್ಲ ವೈಷ್ಣವನೂ ಅಲ್ಲ' ಎನ್ನುವ ಮೂಲಕ ಅನುಭಾವ ಸಾಹಿತ್ಯದ ಸ್ವರೂಪವನ್ನು ನಿರ್ಧರಿಸಿದ್ದಾರೆ.

ಸಾಹಿತ್ಯ ಚರಿತ್ರೆಯಲ್ಲಿ 9ನೇ ಶತಮಾನದಿಂದ ಹಂತ ಹಂತವಾಗಿ ಸಾಹಿತ್ಯವನ್ನು ವಿಭಾಗ ಮಾಡಿಕೊಂಡು ಬರಲಾಗಿದೆಯಾದರೂ 18, 19ನೇ ಶತಮಾನದ ಈ ಮಿಶ್ರ ಕಾಲವನ್ನು ಸರಿಯಾಗಿ ಈವರೆಗೆ ಗುರುತಿಸಿಯೇ ಇಲ್ಲ ಎನ್ನಬೇಕಾಗುತ್ತದೆ. ಕುಮಾರ ವ್ಯಾಸ ಯುಗದಲ್ಲೇ ಇದನ್ನು ಸೇರಿಸಿಕೊಂಡುಬರಲಾಗಿದೆ. ಛಂದಸ್ಸಿನ ದೃಷ್ಟಿಯಿಂದ ನೋಡುವಾಗ ದೇಸಿ ಸಾಹಿತ್ಯ ಯುಗ ಎಂದು ಕರೆದಿದ್ದು ಸಾಂಗತ್ಯ, ತ್ರಿಪದಿ ಷಟ್ಪದಿ ಇತ್ಯಾದಿಗಳಲ್ಲಿ ಬರೆದಿರುವ ಸಾಹಿತ್ಯಪ್ರಾಬಲ್ಯದ ಕವಿಗಳನ್ನು ಮಾತ್ರ ಗುರುತಿಸಲಾಗಿದೆ. ಎಲ್ಲಾ ಛಂದೋಪ್ರಕಾರಗಳಲ್ಲೂ ಎಲ್ಲಾ ಮತ ಧರ್ಮಗಳಲ್ಲೂ ಸಮಾನವಾಗಿ ರಚನೆಯಾಗಿರುವ ಈ ಕಾಲದ ಸಾಹಿತ್ಯ ಹಾಗೆ ನೋಡಿದರೆ ಸಾಹಿತ್ಯ ಚರಿತ್ರಕಾರರ ದೃಷ್ಟಿಯನ್ನು ಸೆಳೆದೇ ಇಲ್ಲ ಎನ್ನಬೇಕಾಗುತ್ತದೆ. ಮತ ಭೇದಗಳ ಹಿನ್ನಲೆಯಲ್ಲಿ ಕೆಲವು ಮುಖ್ಯ ಕವಿಗಳನ್ನು ಮಾತ್ರ ವಿವೇಚಿಸಿದ್ದಾರೆ. ಈ ಅವಧಿಯ ಅನೇಕ ಕವಿಗಳು ಇನ್ನೂ ಅಜ್ಞಾತವಾಗಿಯೇ ಇದ್ದಾರೆ. ಒಂದು ಅಂದಾಜಿನ ಪ್ರಕಾರ ಸುಮಾರು ಎರಡು ಸಾವಿರ ಹರಿದಾಸರನ್ನೂ 18-19ನೇ ಶತಮಾನದಲ್ಲಿ ಊಹಿಸಲಾಗಿದೆ.[2] ಇಷ್ಟೇ ಸಂಖ್ಯೆಯ ಶರಣರೂ ಇತರ ಕವಿಗಳೂ ದೊರೆಯುವುದನ್ನು ಸುಲಭವಾಗಿ

---

1. R. D. Ranade, pathway's to God in Kannada Literature 1960.

2. ಎಂ. ವಿ. ಸೀ. ಹರಿದಾಸರು ಅನುಭಾವ ಕವಿಗಳು 1988, ಪುಟ 13

ಊಹಿಸಬಹುದು. ಆರ್. ನರಸಿಂಹಾಚಾರ್ ಅವರ ಕವಿ ಚರಿತೆಯ ಮೂರನೇ ಸಂಪುಟ,ರಾನಡೆಯವರ ಗ್ರಂಥ, ಬೇಲೂರು ಕೇಶವದಾಸರ 'ಕರ್ನಾಟಕ ಭಕ್ತ ವಿಜಯ' ಮುಂತಾದ ಗ್ರಂಥಗಳಲ್ಲಿ ಅಜ್ಞಾತ ಕವಿಗಳ ಉಲ್ಲೇಖಗಳು ದೊರಕುತ್ತವೆ. ಇತ್ತೀಚಿಗೆ ಈ ಅವಧಿಯ ಅನೇಕ ಕೃತಿಗಳು ಬೆಳಕು ಕಾಣುತ್ತಿವೆ. ಇವುಗಳೆಲ್ಲದರ ಹಿನ್ನಲೆಯಲ್ಲಿ ಈ ಅವಧಿಯ ಸಾಹಿತ್ಯವನ್ನು ಪೂರ್ಣವಾಗಿ ಸಂಗ್ರಹಿಸಿ ವ್ಯಾಪಕ ಕ್ಷೇತ್ರ ಕಾರ್ಯ ನಡೆಸಿ ಆಮೂಲಾಗ್ರವಾಗಿ ಸಂಶೋಧನೆ ನಡೆಸಿ ಪುನರಧ್ಯಯನಕ್ಕೆ ಒಳಪಡಿಸಬೇಕಾದ ಅಗತ್ಯ ವಿದೆ. ಈ ಕಾಲದ ಸಾಹಿತ್ಯದ ಮುಖ್ಯ ವಾಹಿನಿಯಾದ 'ಅನುಭಾವ'ವನ್ನು ಪ್ರಧಾನ ಆಶಯವಾಗಿಟ್ಟುಕೊಂಡು 'ಅನುಭಾವ ಸಾಹಿತ್ಯ' ಎಂದು ಹೆಸರಿಸಿ ಕನ್ನಡ ಸಾಹಿತ್ಯ ವನ್ನು ಶ್ರೀಮಂತಗೊಳಿಸಬೇಕಾಗಿದೆ. ಅಲ್ಲಿಯವರೆಗೆ ಈ ಅವಧಿಯ ಸಾಹಿತ್ಯದ ಯಾವುದೇ ಚಿಂತನೆಯನ್ನು ಮತಭೇದಗಳ ಅಥವಾ ಹರಿದಾಸ ಶರಣ ಸಾಹಿತ್ಯಗಳ ಪರಿಮಿತಿಯಲ್ಲೇ ಮಾಡಿದರೂ ಅದು ಕವಿ ಕೃತಿ ಪರಿಚಯದ ಮುಖ್ಯ ಉದ್ದೇಶವನ್ನು ಹೊಂದಿರುತ್ತದೆ. ಅನುಭಾವ ಸಾಹಿತ್ಯದ ಸಮಗ್ರ ಅಧ್ಯಯನಕ್ಕೆ ಪೂರಕ ಸಾಹಿತ್ಯ ವನ್ನು ಒದಗಿಸುವ ಪ್ರಯತ್ನವೂ ಆಗಿರುತ್ತದೆ ಎಂದು ಭಾವಿಸಬಹುದು.

——

ವೀರಣಾರ್ಯನ ಕಾಲ ಹಾಗೂ 'ಪ್ರಸಾದ ಚಾರಿತ್ರ' ಒಂದು ಟಿಪ್ಪಣಿ

—ಎಸ್. ಶಿವಣ್ಣ

'ಪ್ರಸಾದ ಚಾರಿತ್ರ'ದ ಕರ್ತೃ ವೀರಣಾರ್ಯ ಕವಿ ಕೊಲ್ಲಿಪಾಕಿ ಸೋಮೇಶ್ವರನಿಂದ ಆರಂಭಿಸಿ ತನ್ನ ವಂಶ ಪರಂಪರೆಯನ್ನು ನಿರೂಪಿಸಿದ್ದಾನೆ. ತಂದೆ ರೇವಣಾರಾಧ್ಯ ಹಾಗೂ ತಮ್ಮ ಶಾಂತೇಶ್ವರ.

ಆರ್. ನರಸಿಂಹಾಚಾರ್ಯರು 'ಕರ್ಣಾಟಕ ಕವಿಚರಿತೆ'ಯ ದ್ವಿತೀಯ ಸಂಪುಟ (1919) ಪು. 433ರಲ್ಲಿ ಈತನ ಕಾಲ ಸು. 1650 ಎಂದಿದ್ದಾರೆ. ತನ್ನ ಸಮಕಾಲೀನಯತಿಗಳನ್ನು ಹೆಸರಿಸುವಲ್ಲಿ ಕಂಪಿನಂಜಯ್ಯ (1–44) ನನ್ನು ಉಲ್ಲೇಖಿಸಿದ್ದಾನೆ. ಕಂಪಿನಂಜಯ್ಯ ನಮಗೆ ತಿಳಿದುಬಂದಿರುವಂತೆ ಚಿತ್ರದುರ್ಗದ ಬೃಹನ್ಮಠ ಪೀಠ ಪರಂಪರೆಯ ಶೂನ್ಯ ಸಿಂಹಾಸನದ ಮೂಲಕರ್ತೃಗಳಾಗಿದ್ದ (ಕ್ರಿ. ಶ. 1703ರಲ್ಲಿ ಲಿಂಗೈಕ್ಯರಾದ) ಮುರಿಗೆ ಶಾಂತವೀರ ಸ್ವಾಮಿಗಳ ಶಿಷ್ಯರಲ್ಲೊಬ್ಬ. ಈತ ಮುರಿಗೆ ಶಾಂತವೀರರ ಸ್ತುತಿ ರೂಪದ 'ನಾಂದ್ಯ' ಹಾಗೂ ಇತರ ಕೃತಿಗಳನ್ನು ರಚಿಸಿದ್ದಾನೆ. (ನೋಡ: ಮುರಿಗೆ ಶಾಂತ ವೀರ ಸ್ವಾಮಿಗಳ ಸ್ತೋತ್ರಕರಂಡ ಸಂ ಎಸ್. ಶಿವಣ್ಣ, ಚಿತ್ರದುರ್ಗ, ೧೯೮೪, ಪೀಠಿಕೆ XXii–XXiii)

ಹೀಗಾಗಿ ವೀರಣಾರ್ಯನ ಕಾಲ ೧೮ನೆಯ ಶತಮಾನದ ಪೂರ್ವಾರ್ಧವಾಗಿದ್ದು, ಸು.1730 ಎನ್ನಬಹುದಾಗಿದೆ.

ವೀರಣಾರ್ಯನ ಕೃತಿಯ ವಸ್ತು ಚರಲಿಂಗ ಪ್ರಸಾದದ ಶ್ರೇಷ್ಠತೆಯ ನಿರೂಪಣೆ. ಈ ಜಡೆಯ ಸಿದ್ಧಲಿಂಗಾರ್ಯ ಮೈಸೂರಿನ ಚಾಮರಾಜನ ಆಸ್ಥಾನದಲ್ಲಿ ಪ್ರಸಾದದ ಶ್ರೇಷ್ಠತೆಯನ್ನು ನಿರೂಪಿಸಿದ ವಿವರಣೆ ಕೃತಿಯಲ್ಲಿದೆ. ಈ ಕೃತಿಯಲ್ಲಿ 3 ಸಂಧಿಗಳಿದ್ದು 353 ಸಾಂಗತ್ಯ ಹಾಗೂ 300 ಶ್ಲೋಕಗಳಿವೆ. (GOML· iv· No· 497)

ಕವಿ ಮೊದಲ ಸಂಧಿಯಲ್ಲಿನ ಸಾಂಗತ್ಯ 40–62ರಲ್ಲಿ ಮೈಸೂರಿನ ಮಹಾಬಲಗಿರಿಯ ತಪ್ಪಲಿನಲ್ಲಿದ್ದ ಗುಹೆಗಳಲ್ಲಿ ವಾಸಿಸುತ್ತಿದ್ದ ವಿರಕ್ತ ಯತಿಗಳನ್ನು ನಾಮಸಹಿತ ಉಲ್ಲೇಖಿಸಿದ್ದಾನೆ. ಅಲ್ಲದೆ ಅವರು ಅಭ್ಯಸಿಸುತ್ತಿದ್ದ ಕೃತಿಗಳನ್ನು ತಿಳಿಸಿದ್ದಾನೆ.

ಈ ಯತಿ/ಕೃತಿಗಳ ಹೆಸರುಗಳು ಹದಿನೇಳನೆಯ ಶತಮಾನದ ಉತ್ತರಾರ್ಧ ಹಾಗೂ ಹದಿನೆಂಟನೆಯ ಶತಮಾನದ ಪೂರ್ವಾರ್ಧ ಕಾಲಮಾನಕ್ಕೆ ಸಂಬಂಧಿಸಿದ್ದು ಆ ಕಾಲದ ಧಾರ್ಮಿಕ-ಸಾಹಿತ್ಯಕ ಹಿನ್ನೆಲೆಯ ಅಭ್ಯಾಸಕ್ಕೆ ಪ್ರಮಾಣಭೂತ ಹಾಗೂ ಖಚಿತ ಆಕರ ಸಾಮಗ್ರಿಯಾಗಿದೆ.

ಈ ಭಾಗವನ್ನು ಕನ್ನಡ ಅಧ್ಯಯನ ಕೇಂದ್ರ (ಬೆಂಗಳೂರು ವಿಶ್ವವಿದ್ಯಾಲಯ) ದಲ್ಲಿನ ಕ್ರಮಾಂಕ ಬಿ. 1474ನೆಯ ಕಾಗದದ ಪ್ರತಿಯನ್ನು ಆಧರಿಸಿ ಸಿದ್ಧ ಪಡಿಸಲಾಗಿದೆ.

[ಸಂಧಿ-೧]

ಕಾಲಕಂಧರ| ಕರುಣಾವಲಂಬನ| ಗಿರಿ-
ಪಾಲನಂಗನೆಯ| ಮುಖಾಬ್ಜ
ಲೋಲಂಬ| ಗಣನಾಥ। ಜನಕ| ಮಹಾಬಲ
ಶೈಲಸಿ[ಖೆ] ಯೊಳೊಪ್ಪಿದನು (೪೦)

ಚಂಡ| ಮುಂಡಾದಿಯಾದಸುರ| ಸಂಚಯವನು
ದಿಂಡುಗೆಡಹಿ| ದೇವತೆಗಳ
ಹಿಂಡವ| ರಕ್ಷಿಸಲಗಜೆ| ಗಿರಿಯೊಳು| ಚಾ-
ಮುಂಡಿ| ನಾಮದಿ। ನಿಂದಳೊಲಿದು (೪೧)

ಆ| ಗಿರಿಸಾನುವಿನೊಳು| ಪರತತ್ವ|ವಿ-
ರಾಗವೆ| ರೂಪಾಂತು| ಶಿವನ
ಯೋಗಮುದ್ರೆಯನಾಂತ। ವೀರಮಾಹೇಶ್ವರ
ಪೂಗವೊಪ್ಪಿದ (೪೨)

ಗೋಪಲ| ಸಿದ್ಧನಂಜೇಶ| ಸಂಗಯ್ಯನು
ಲೇಸಾದ| ಗುರುಶಾಂತೇಶ
ದೋಷರಹಿತ| ಸಿದ್ಧವೀರೇಶ| ಮುಂತಾದ
ಭಾಸುರ| ವಿರತರಲ್ಲಿಹರು (೪೩)

ಕುಪ್ಪಸಗಂಥೆಯ| ಶಾಂತಮಲ್ಲೇಶ್ವರ
ಕಪ್ಪಿ × × ನಂಜೇಶ್ವರನು
ಉಪ್ಪಿನಹಳ್ಳಿಯ| ಸಿದ್ಧಬಸವರಾಜ-
ರೊಪ್ಪಿದರಾ| ಗವಿಗಳಲಿ (೪೪)

ಚಿನ್ನದ ಕಂಥೆಯು| ಗುರುಲಿಂಗದೇವ| ಸಂ-
ಪನ್ನ| ಶಾಂತೇಶ| ನಂದೀಶ
ಚೆನ್ನ ಬಸವರಾಜ| ಮುಂತಾದ| ವೈರಕ್ತ
ರುನ್ನತದಲಿ| ರಾಜಿಪರು (೪೫)

ಹುಲಿಯು ಕಂಥೆಯು ಗುರುಬಸವೇಶ [1][ಕಂ][1]ಬಾಳ
ಚೆಲುವ ಗಂಗಾಧರೇಶ್ವರನು
ಮಳೆಯ| ಚೆನ್ನಂಜೇಶ್ವರ| ಸೋಮಶೇಖರ-
ರೊಲಿದಿಹರಾ| ಗಿರಿಯೊಳಗೆ (೪೬)

ಮುದ್ದು ಮಲ್ಲೇಶ| ಪೆಂಡೆಯದ| ಗುರು
ಸಿದ್ಧರಾಮೇಶ| ಶಾಂತೇಶ
ಉದ್ದಾನ| ಕೆಂಪನಂಜೇಶಾದಿ| ವಿರತರು|
ಇದ್ದರಾ| ಗಿರಿಯ| ತಟದೊಳು (೪೭)

ಪೊದೆದ| ಬೊದಡೆಯ| ಭಸ್ಮದ| ಸುಲಿಪಲ್ಗಳ
ವಿಧಿತಾಗಮದ| ಪುಸ್ತಕದ
ಮದನವೈರಿಗೆ| ಪಡೆಯಾದ| ವಿರಕ್ತರು
ಕುಧರತಟದೊಳೊಪ್ಪಿದರು (೪೮)

ಹಲವು| ಸೂರಿಯಪುಟಲಾಕಿಯ
ತೆಳು[ಗಾ]ವಿಯ| ಕಂಬಳಿಯ
ಚೆಲುವಾದ| ಚಕ್ರ| ಚಾಗಾಳಿಯ| ಕಂಥೆಯ-
ತ್ಯ ಲಘು| ವೈರಾಗಿಗಳಿಹರು (೪೯)

ದಂಡ| ಖಟ್ವಾಂಗ| ವಿಭೂತಿಯಾಧಾರ|ಕಂಥೆ
ಗುಂಡಖರ್ಪರವೆಂಬವೈದು
ಮುಂಡನವಾದ| ಮುದ್ರೆಗಳಿಂದ| ವಿರತರ
ತಂಡವೊಪ್ಪಿದರಾ| ಗಿರಿಯೊಳು (೫೦)

ಬೆಳ್ಳಿಯ| ಹಾವುಗೆಗಳ × × ಕುಂಡಲ
ಝಲ್ಲಿಯಿಂದೆಸೆವ| ದಂಡಗಳ

---

1 ನ 1,

ಕೊಲ್ಲಿಪಾಕದ| ಜಂಗು| ಪಾದದೊಳಿರಲಿಹ-
ರಲ್ಲಿ| ಕಂಥೆಯು| ವಿರಾಗಿಗಳು (೫೨)

ಲಿಂಗಮುಕುಟ| ಪಸುಪತಿ| ಫಣಿಮುಕುಟದು-
ತ್ತುಂಗಹ ಚಾರ| ಮುಕುಟದ
ಕಂಗೊಳಿಸುವ|ಸೂಜಿ ಮುಕುಟದ| ವೈರಾಗ್ಯ
ಪುಂಗವರು| ರಂಜಿಪರು (೫೩)

ಪಶುಪತಿಯವತಾರನು | ಗುರುಪಾದ್ಯೆಯ್ಯ
ಕೆಸರೆಯು | ಚೆನ್ನಮಲ್ಲೇಶ
ಕುಸುಮ ಬಾಣನ | ಗೆದ್ದ| ಸಿದ್ಧಬಸವರಾಜ
ವಿಸರವೊಪ್ಪಿತು | ಗವಿಗಳಲಿ (೫೪)

ದನು [1][ಗೂ][1] ರ | [2](ಚೆ)[2] ನ್ನ ವೀರೇಶ ಗಂಗಾಧ-
ರನನದ × × ಪುರದ| ಮುದ್ದುನಂಜ
ಅನುಪಮ| ಮುರಿನಂಜೇಶ| ವಾ[3][ಟಾ][3] ಳಿನ
ಚೆನವೀರೇಶ ರೊಪ್ಪಿದರುಜ (೫೫)

ಉಪ್ಪಿನ ಹಳ್ಳಿಯ | ಬೋಳ ಬಸವರಾಜ
ಸಪ್ಪೆಯಾರ್ಯನು | ತೃಣ [4] [ಪುರಿ][4] ಯ
ಕಪ್ಪು ಗೊರಳ ನವತಾರನು | ಚೆನ್ನ ಬಸ-
ವಪ್ಪರೊಪ್ಪಿದರು | ಗಿರಿಯೊಳು (೫೬)

ಮುಂದುಜು ಬಿನ | ಬಳಿದಡಿಯ | ಕಾವಿಯು ದಟ್ಟೆ-
ಯೊಂದಿದ | ಪರ್ವ[ತ] ಗೃಹದ
ಅಂದವೆನಿಪ | ಕಿನ್ನರಿ| ಯಾಂತು ವೈರಾಗಿ
ವೃಂದವೊಪ್ಪಿದರಾ | ಗಿರಿಯೊಳು (೫೭)

ವರಭಕ್ತನಾದಿಯೆ × ಂ ತ | ನಿರ್ಣಯದೊಳು
ಪರಿಣತರೆನಿಸಿ | ರಾಜಿಸುವ

---

2 ಚಿ 2; 3 ದಾ 3; 4 ವುತೆ 4;

ಪರ ತತ್ವದ | ಪಾವನ ಚರಿತೆಯ| ಯತಿ
ವರರಿಹರಾ | ಗುಹೆಗಳಲಿ (೫೮)

ಕರಣಹಸಿಗೆ | ಮಿಸರಾರ್ಪಣ | ಪಂಚೀ-
ಕರಣದೊಳುಳ್ಳಂಗದಿರವ-
ನರಿದಕ್ಕಗಳ | ಸೃಷ್ಟಿ| ಪ್ರಭು [5][ಗೀತೊ][5] ಚನಾರ್ಥ
ದುಜು | ಗಾನ | ವಿರತರಲ್ಲಿಹರು (೫೯)

ಪರಿಣತರಾಗನು ದೊಳು | ಪೌರಾಣದ
ಲಜಿ* ವಿನೊಳಗೆ | ಬಲ್ಲಿ[ದರು]
× × × ಮುಂತಾದ | ವೈರಾಗ್ಯ
ಪರಮಯೋಗಿಗಳಲ್ಲಿಹರು (೬೦)

ಆ| ಮಧ್ಯದೊಳು | ಪರವಸ್ತು ವೆ| ವಿರತಿಯು-
ದ್ದಾ ಮತಿಯಾಂತು | ರಾಜಿಸುತ
ಭೂಮಿಗೆಳ್ತಂದ | ಜಡೆಯ | ಸಿದ್ಧ [ಲಿಂಗಾ]ರ್ಯ
ನಾಮವನಾಂತೊಲವಿನೊಳು (೬೧)

ಸ್ಮರ ವಿರೋಧಿಯು | ಮಾರದ್ವೇಷಿಯು | ಪುಷ್ಪ
ಶರವೈರಿಯನರ್ಚಿಸುತ
ಪರಮ| ವೈರಾಗಿ| ಜಡೆಯ | ಸಿದ್ಧಲಿಂಗೇಶ
ಚರದಿಷ್ಟ ವೀವು ತೊಪ್ಪಿದರು (೬೨)

೩

(ಅನುಬಂಧ-೧ ಇತಿಹಾಸಿಕ ವ್ಯಕ್ತಿಸೂಚಿ)

ಅಕ್ಕ (೫೯)
ಉದ್ದನ ಕೆಂಪನಂಜೇಶ (೪೭)
ಉಪ್ಪಿನಹಳ್ಳಿ ಬೋಳ ಬಸವರಾಜ (೫೬)

---

5 ಧ x 5

— " — ಸಿದ್ಧ ಬಸವರಾಜ	(೪೪)
ಕಪ್ಪಿ × ನಂಜೇಶ್ವರ	(೪೪)
ಕಂಬಾಳ ಗಂಗಾಧರದೇವ	(೪೬)
ಕುಪ್ಪಸಗಂಥೆ ಶಾಂತಮಲ್ಲೇಶ	(೪೪)
ಕೆಸರೆಯ ಚೆನ್ನ ಮಲ್ಲೇಶ	(೫೪)
ಗುರುಪಾದೈಯ್ಯ	(೫೪)
ಗುರು ಶಾಂತೇಶ	(೪೩)
ಗೋಸಲ ಸಿದ್ಧನಂಜೇಶ	(೪೩)
ಚೆನ್ನದ ಕಂಥೆ | ಗುರುಲಿಂಗದೇವ	(೪೫)
ಚೆನ್ನ ಬಸವರಾಜ	(೪೫)
ಜೆಡೆಯ| ಸಿದ್ಧಲಿಂಗಾರ್ಯ	(೬೧)
ತೃಣಪುರಿ| ಚೆನ್ನ ಬಸವಪ್ಪ	(೫೬)
ದನುಗೂರ (?)| ಗಂಗಾಧರ	(೫೫)
ದನುಗೂರ| ಚೆನ್ನವೀರೇಶ	(೫೫)
ನಂದೀಶ	(೪೫)
ಪ್ರಭು(=ಅಲ್ಲಮ)	(೫೯)
ಪೆಂಡೆಯದ| ಗುರುಸಿದ್ಧರಾಮೇಶ	(೪೭)
ಮರಿನಂಜೇಶ	(೫೫)
ಮಳೆಯ| ಚನ್ನಂಜೇಶ್ವರ	(೪೬)
ಮುದ್ದುನಂಜ(ನದ × × ಪುರದ)	(೫೫)
ಮುದ್ದುಮಲ್ಲೇಶ	(೪೭)
ವಾಟಾಳ| ಚೆನ್ನವೀರೇಶ	(೫೫)
ಶಾಂತೇಶ	(೪೭)
ಶಾಂತೇಶ (ಸಂಪನ್ನ)	(೪೫)
ಸಪ್ಪೆಯಾರ್ಯ	(೫೬)
ಸಂಗಯ್ಯ	(೪೩)
ಸಿದ್ಧ ಬಸವರಾಜ	(೫೪)
ಸೋಮಶೇಖರ	(೪೬)
ಹುಲಿಯಕಂಥೆ | ಗುರು ಬಸವೇಶ	(೪೬)

ಅನುಬಂಧ–೨ (ಸ್ಥಳಸೂಚಿ)

ಉಪ್ಪಿನಹಳ್ಳಿ ೪೪ (೪೪, ೪೬) ; ಕಂಬಾಳ(೪೬)
ಕೆಸರೆ (೫೪) ; ತೃಣಪುರಿ (೫೬) ; ದನುಗೂರ(೫೫)
ಪೆಂಡೆಯ (೪೭) : ನದ × ಪುರ (೫೫)
ನಾಟಾಳ (೫೫)

ಅನುಬಂಧ–೩ (ಸಂಕೀರ್ಣ)

ಉದ್ದನ (೪೭)
ಗೋಸಲ (೪೩)
ಕಪ್ಪಿ × (೪೪)
ಜಡೆಯ (೬೧)
ಮಳೆಯ (೪೬)

ವಿವಿಧ ಕಂಥೆಗಳು–

ಕುಪ್ಪಸ ಗಂಥೆ (೪೪)
ಚಿನ್ನದ ಕಂಥೆ (೪೫)
ಹುಲಿಯ ಕಂಥೆ (೪೬)

ಟೀಕೆ ಟಿಪ್ಪಣಿ

---

೧. ಕ್ರಿಯಾ ಸಮಾಸ – ಒಂದು ಉತ್ತರ

ಕ್ರಿಯಾ ಸಮಾಸ ಕುರಿತಾದ ನನ್ನ ಎರಡು ಲೇಖನಗಳಿಗೆ (ಕ. ಲೋ. ಡಿಸೆಂ ೯೩. ೬–೨. ಕಲೋ. ಡಿಸೆಂ. ೯೬.೯–೨.) ವಿದ್ವಾಂಸರಾದ ಶ್ರೀ. ಟಿ. ಕೇಶವಭಟ್ಟರು (ಕ. ಲೋ. ಜೂನ್. ೯೭, ೧೯–೧) ಪ್ರತಿಕ್ರಿಯಿಸಿದ್ದಾರೆ. ಅದಕ್ಕಾಗಿ ಮೊದಲು ನಾನು ಅವರಿಗೆ ಕೃತಜ್ಞ ಎಂದು ಹೇಳುತ್ತೇನೆ.

ಶ್ರೀ ಕೇಶವಭಟ್ಟರ ಪ್ರತಿಕ್ರಿಯೆಗೆ ಪ್ರತ್ಯುತ್ತರವಾಗಿ ನನ್ನ ವಿಚಾರಗಳನ್ನು ಇಲ್ಲಿ ಹರಹುತ್ತಿದ್ದೇನೆ.

ಉನ್ನತ ಪದವಿಯಾದ ಎಂ. ಎ. ವ್ಯಾಸಂಗದಲ್ಲಿ 'ಕನ್ನಡ ವ್ಯಾಕರಣಗಳ ತೌಲನಿಕ ಸಮೀಕ್ಷೆ' ಸ್ವರೂಪದ ಅಧ್ಯಯನ ನನಗೆ ದೊರೆಯಿತು. ಆಗಿನಿಂದ ಒಂದೊಂದಾಗಿ ಮುತ್ತಿ ಮುಸುಕಿದ ಅನುಮಾನ ಸಂಶಯದ ಹದ್ದುಗಳಲ್ಲಿ ಕೆಲವನ್ನಾದರೂ ದೂರ ಸರಿಸಲು ಅಧ್ಯಾಪಕನಾದ ಬಳಿಕ (೧೯೬೨ ರಿಂದ ಅಧ್ಯಾಪನ ಕಾರ್ಯದಲ್ಲಿ ತೊಡಗಿದೆ) ವಿದ್ಯಾರ್ಥಿಗಳೊಂದಿಗೆ ಮುಖಾಮುಖಿಯಾದಾಗಲೇ ಸಾಧ್ಯವಾಯಿತು.

ಕೆಲವು ಸಂದರ್ಭಗಳಲ್ಲಿ ಮಾತ್ರ ಭಾಷೆಯ ಎರಡು ಮುಖಗಳನ್ನೂ (ಅಂದರೆ ಕನ್ನಡದ ಶಿಷ್ಟರೂಪದೊಂದಿಗೆ ಬಾದಾಮಿ ಸುತ್ತಮುತ್ತಲಿನ ಕನ್ನಡ ಉಪಭಾಷೆಯನ್ನು ಸೇರಿಸಿ) ಹಲವು ನಿಟ್ಟಿನಿಂದ ಪರಿಶೀಲಿಸುತ್ತ ಅಧ್ಯಯನ ಮಾಡುತ್ತಲೇ ಬಂದಿದ್ದೇನೆ. ಆಗ ನಾನು ಅನುಭವಿಕವಾಗಿ ದಕ್ಕಿಸಿಕೊಂಡ ಕೆಲವು ಸಂಗತಿಗಳೆಂದರೆ—

(೧) ಕನ್ನಡ (ಶಿಷ್ಟ) ಭಾಷಾ ಪ್ರತಿನಿಧಿಗಳೆಸಿದ ವಿದ್ವಾಂಸರನೇಕರು ಆರಂಭದಿಂದಲೂ ಸಂಸ್ಕೃತ ಭಾಷಾ ವ್ಯಾಮೋಹಿತರಾಗಿಯೋ ಅಥವಾ ಅಪ್ರಜ್ಞಾಪೂರ್ವಕವಾಗಿ ಅಂಥವರನ್ನು ಅನುಸರಿಸಿಯೋ ಇಲ್ಲವೆ ಅಳವಡಿಸಿಕೊಂಡ ಪರಿಭಾಷಾ ಚೌಕಟ್ಟಿನ ನಡಿಗೆಯಲ್ಲಿಯೋ ಸಾಗಿದರು. ಹೀಗೆ ನಡೆದುದರಿಂದಲೊ ಏನೊ ಅವರ ಬರವಣಿಗೆಯಲ್ಲಿ ದ್ರಾವಿಡ ಮೂಲದ ಕೆಲವಾದರೂ ಆಂತರಿಕ ಭಾಷಾ ಲಕ್ಷಣಾಂಶಗಳು ಮುಸುಕಾಗುತ್ತ ಹೋದವು ; ಮತ್ತೆ ಕೆಲವು ಲಯವೂ ಆದುವೆಂದು ತೋರುತ್ತದೆ. ಈ ತೆರನಾದ ಮೂಲ ಲಕ್ಷಣಗಳ ಚಿತ್ರವನ್ನು ಉಪಭಾಷೆಗಳ ಸಮೀಕ್ಷಣೆ ಮತ್ತು ಪರಿಶೀಲನೆಯಿಂದ

ನಿಚ್ಚಳವಾಗಿ ಕಂಡರಸಿಕೊಳ್ಳುವ ಸಾಧ್ಯತೆಗಳುಂಟು. ಇಂಥ ಲಕ್ಷಣಗಳ ಅಸ್ಪಷ್ಟ ಸುಳಿವಿನ ವಿವರಣೆ ನೀಡುತ್ತ ಕೇಶಿರಾಜ ಹೊರಡುವ ಹಾಗೆ, ಆ ಮಾರ್ಗದಲ್ಲೆ ಮುನ್ನಡೆದು ಅದನ್ನೆಲ್ಲ ಪುನವರಿಕೆ ಮಾಡಿಕೊಂಡು (ಮೂಲ ಲಕ್ಷಣವೆನಿಸುವ) ಆ ಕೆಲವು ವ್ಯಾಕರಣಾಂಶಗಳನ್ನೆ ನಾನು ಎರಡು ಲೇಖನಗಳಲ್ಲಿ ಪ್ರತಿಪಾದಿಸಲು ಪ್ರಯತ್ನಿಸಿದ್ದೇನೆ (i) 'ಲಿಂಗನೊಂಬತ್ತು ತೆಱಂ'—'ಒಂದು ಟಿಪ್ಪಣಿ', ಅಂಕಣ, ಮೇ–ಜೂನ್, ೧೯೮೫; ೬–೫, (ii) ಜಾತ್ಯೇಕ ವಚನ— 'ಒಂದು ಮರು ಗಮನಿಕೆ'. ಕ. ಲೋ. ಡಿಸೆಂ. ೧೯೮೪, ೭–೨.

ಹೀಗೆ ಶಿಷ್ಟರೂಪದ ಭಾಷೆ ಮತ್ತು ಉಪಭಾಷೆಗಳೆರಡನ್ನೂ ಸಮಾನಾಂತರವಾಗಿ ನಿಲ್ಲಿಸಿ ಅಧ್ಯಯನ ಮಾಡಿದಂಥ ಸಂದರ್ಭಗಳಲ್ಲಿ ಸ್ವಾರಸ್ಯಕರ ಸಂಗತಿಗಳು ಚಿಮ್ಮಿಯಾವು ಎನಿಸುತ್ತದೆ. ಒಟ್ಟಾರೆ ಒಂದೇ ಮೂಲದ ಭಾಷಾ ರೂಪಗಳೆನಿಸಿದ ಇವುಗಳ ಅಂತರದಲ್ಲಿಯೂ ಒಂದೆ ಕಲ್ಪನೆಯ ಮೂಲ ತತ್ವಗಳು ಅಡಕಗೊಂಡಿರುವುದು ಅವುಗಳ ಅಧ್ಯಯನದ ಹಿನ್ನೆಲೆಯ ನಿರಂತರ ಆಕರ್ಷಣೆ ಆಗಿರುತ್ತದೆ. ಅಂತೆಯೆ ಈ ಆಡು ಭಾಷೆಯ ಸೂಕ್ಷ್ಮ ಗಮನಿಕೆಯಿಂದ ಮೇಲಿನ ಎರಡು ಲೇಖನಗಳ ವಿಷಯ ಕುರಿತು ಮಾತಾಡಲು ಸಾಧ್ಯವಾಯಿತೆಂಬ ಅಲ್ಪಮಟ್ಟಿನ ತೃಪ್ತಿಯಾದರೂ ಇದೆ. ಆದರೆ ಯಾವಾಗಲೂ ಹೀಗಾಗುತ್ತದೆ ಎನ್ನಲು ಬರುವಂತಿಲ್ಲ.

(೨) ಹೀಗೆಯೇ ಎರಡು ದಶಕಕ್ಕಿಂತಲೂ ಹೆಚ್ಚು ನನ್ನ ತಲೆ =[ಮನ] ಯಲ್ಲೆ ಕುಳಿತ ಬೀಜ ಈ ವರೆಗೆ ಮರವಾಗಿ ಬೆಳೆದಂಥ ಅನುಮಾನದ ವಿಷಯವೆಂದರೆ ಈ ಕ್ರಿಯಾ ಸಮಾಸ ಸಂಬಂಧಿ ವ್ಯಾಕರಣಾಂಶವೇ ಆಗಿದೆ. ಇಂಥ ಸಂದರ್ಭಗಳಲ್ಲೆ ವಿದ್ವಾಂಸರನೇಕರು ಪೂರ್ವಶಾಸ್ತ್ರಾನ್ವಯದ ಚಕ್ಷುವಿನೊಂದಿಗೆ ಅಥವಾ ಸಾಂಪ್ರದಾಯಿಕ ನೆಲೆಯ ಓಘದೊಂದಿಗೆ ಇಣುಕುತ್ತ ಪರಿಶೀಲಿಸಿರುವರು. ಆಗೆಲ್ಲಾ ಸಮಾಸಗಳ ರಚನೆ ಕೇವಲ ನಾಮಘಟಕಗಳ ತಯಾರಿ ಒಂದೇ ಆಗಿದೆ–ಎನ್ನುತ್ತ ಬಂದರು. ಆಮೇಲೆ ನಾಮರೂಪ ಮತ್ತು ಕ್ರಿಯಾಪ್ರಕೃತಿ ಸೇರಿದ ಉತ್ಪನ್ನ ಘಟಕವೂ ಕ್ರಿಯಾಸಮಾಸ ಎನಿಸುತ್ತದೆ–ಎನ್ನುವ ಹಾಗೆ ಉದಾರ ದೃಷ್ಟಿಯುಳ್ಳ ಪರಿಶೀಲನೆಯೂ ನಡೆಯಿತು. ಇದನ್ನು ನಾವು ಶ್ರೀ ಸೇಡಿಯಾಪು ಕೃಷ್ಣಭಟ್ಟರ ಲೇಖನದಲ್ಲಿ [ಕ. ಲೋ. ಜೂನ್ ೮೭ ೧೦–೧] ಕಾಣುತ್ತೇವೆ.]

ಅಂತೆಯೇ ಭೂತನ್ಯೂನ ರೂಪದ ಕ್ರಿಯಾವಾಚಿ ಪದ ಮತ್ತು ಕ್ರಿಯಾಪ್ರಕೃತಿ ಸೇರಿ ಉದಿಸಿದ ಏಕಾರ್ಥ ಸ್ವರೂಪದ ಕ್ರಿಯಾವಾಚಿ ಪದ ಘಟಕವೂ ಕ್ರಿಯಾಸಮಾಸದ ವ್ಯಾಪ್ತಿಯಲ್ಲಿ ಸೇರುತ್ತದೆ–ಎಂಬ ನಿಲುವು]ಸದ್ಯದಲ್ಲಿ] ನನ್ನದಾಗಿದೆ.

(೩) ಕನ್ನಡ ಭಾಷಾ ಕ್ಷೇತ್ರದಲ್ಲಿ ನಾನು ಕಂಡುಕೊಂಡ ಗಮನೀಯ-ಅಂಶ ಒಂದನ್ನು ಇಲ್ಲಿ ಹೇಳಿಕೊಳ್ಳಬೇಕಿದೆ. ಕನ್ನಡದ ಖ್ಯಾತ ಭಾಷಾ ವಿಜ್ಞಾನಿ ಎನಿಸಿದ

ಡಾ|| ಡಿ. ಎನ್. ಶಂಕರಭಟ್ಟರು ಈಚೆಗೆ ಒಂದು ಮಹತ್ವದ ಕಿರುಹೊತ್ತಿಗೆಯನ್ನು (ಕನ್ನಡದ ವ್ಯಾಕರಣ ಪರಂಪರೆ, ೧೯೯೪) ಹೊರತಂದಿದ್ದಾರೆ. ಕನ್ನಡ ಭಾಷೆಯೊಳಗಿನ ತನ್ನತನದ ನೈಜ ಲಕ್ಷಣಗಳನ್ನು ಕಂಡುಕೊಳ್ಳುವಲ್ಲಿ ಇಡುವ ಹಜ್ಜೆಗಳ ಕುರಿತು ಆಡಿದ ಮಾತುಗಳು ಆದಾಗಿವೆ. ಆದರ ಪರಿಣಾಮವಾಗಿ ಉದಿಸಿದ ಆತ್ಮವಿಶ್ವಾಸ ಮತ್ತು ಹುಮ್ಮಸ್ಸು ಒಂದು 'ಕ್ರಿಯಾಸಮಾಸ: ಪುನರವಲೋಕನ' ಲೇಖನ ನಿರ್ಮಾಣ ಕಾರ್ಯವನ್ನು ಮುನ್ನಡೆಸಿತು....ಅವಸರವೇ ಅಪಘಾತಕ್ಕೆ ಕಾರಣ ಎನ್ನುವ ನಮ್ಮ ಸಾರಿಗೆಸಂಸ್ಥೆಯವರ ಬಸ್ಸಿನೊಳಗಿನ ಮುನ್ನುಡಿಯಂತೆ ಹುಮ್ಮಸ್ಸಿನ ವೇಗದ ಛಲದಿಂದ ಸ್ವಲ್ಪ ದೃಷ್ಟಿದೋಷ (ಕೈಪಿಡಿ ವಿಷಯ ಕುರಿತು ನೀವು ಹೇಳಿದಂತೆ) ಉಂಟಾದಂತಾಗಿದೆ ಎಂಬುದು ಒಪ್ಪತಕ್ಕ ಮಾತು.

ಅಲ್ಲದೆ ನನ್ನ ವಿಷಯ ಪ್ರತಿಪಾದನೆಗೆ ಸಾಕ್ಷಿಯಾಗಿ ಗಿಡವೊಂದರ ಟೊಂಗೆಯಂತಿರುವ ಬಾದಾಮಿ ಕನ್ನಡ ಉಪಭಾಷೆಯ ಉದಾಹರಣೆಗಳನ್ನು ಕೊಟ್ಟೆ. ಇದಕ್ಕೆ ಸಂಬಂಧಿಸಿದಂತೆ ಈ ಮೊದಲೇ ಹಿಂದಿನ ವಿದ್ವಾಂಸರು ಪೂರಕವಾಗಿ ಸುಳುಹುದೋರಿದಾರೆಂಬ ಬಗೆಗೂ ಉಲ್ಲೇಖಿಸಬೇಕಾಯಿತು.

ಕಾವ್ಯದಿಂದಲೂ (ಆದಿಪುರಾಣ ದೀಪಿಕೆ. ಸಂ. ತ. ಸು. ಶಾಮರಾಯ ೧೯೯೧] ನಾವಿಲ್ಲಿ ಒಂದೆರಡು ಉದಾಹರಣೆಗಳನ್ನು ಗಮನಿಸಬಹುದು.

(i) ಓಲುತ್ತ + ಆಡು → ಓಲಾಡು ಪುಟ : ೨೦೦ ಪದ್ಯ : ೬೩
(ii) ಮಱೆದು + ಸುಂದು → ಮಱೆಸುಂದು ಪುಟ : ೧೨೫ ಪದ್ಯ : ೬೨
(iii) ಬೇಡುತ್ತ + ಕೊಳ್ → ಬೇಡಿಕೊಳ್ ಪುಟ ; ೨೫೧ ಪದ್ಯ : ಗದ್ಯಭಾಗ

ಆದರೆ ಇದೇ ಸಂದರ್ಭದಲ್ಲಿ ಶ್ರೀ ಕೇಶವ ಭಟ್ಟರು ಈ ಉಪಭಾಷೆಯ (= ಆಡುಭಾಷೆ) ಕುರಿತು ಆಡಿದ ಮಾತುಗಳಲ್ಲಿ ಕೇಶಿರಾಜನ ಧ್ವನಿ ಅನುರಣನಗೊಂಡಂತಾಗಿದೆ ಎನಿಸಿತು. ಆಡುಭಾಷೆ ಕುರಿತಿರುವ ಕೇಶಿರಾಜನ ಪೂರ್ವಗ್ರಹ ಕಲ್ಪನೆಗಳು ಮತ್ತು ಆ ಹಿನ್ನೆಲೆಯ ಅವನ ನುಡಿಗಳು ಶ್ರೀ ಕೇಶವ ಭಟ್ಟರಲ್ಲೆ ಮರುಕಳಿಸಿದಂತಾಗಿದೆ. ವಿಷಯ ಪ್ರಸ್ತಾಪದ ಪರಿಧಿಯಿಂದ ದೂರಕ್ಕೆ ಬಂದು ಈ ಆಡು ಭಾಷೆಯನ್ನೇ ಕೇಂದ್ರೀಕರಿಸಿ ಅವರು "............ಪ್ರಯೋಗಕ್ಕೆ ಶುದ್ಧಾಶುದ್ಧತೆಯ ನಿರ್ಣಯವಿಲ್ಲ ; ಜನರು ಪ್ರಯೋಗಿಸುವ ವಿಧಾನವೇ ಮಾನದಂಡ...........ಶಬ್ದ ಶುದ್ಧಿ ಅವಶ್ಯವಿಲ್ಲ........ ..." (ಪುಟ : 54, 55) ಎಂದು ಮಾತನಾಡುತ್ತಾರೆ. ಈ ಬಗ್ಗೆ ನಾನೇನೂ ಹೆಚ್ಚಿಗೆ ಹೇಳಲಾರೆ. ಈ ಮಾತುಗಳೆಲ್ಲ ಅವರ ಭಾಷಾಧ್ಯಯನ ಕ್ಷೇತ್ರದಲ್ಲಿರುವ ಚಂದ್ರಕುಳಿಯಂತೆ ಕಾಣುತ್ತವೆ ಎಂದು ಮಾತ್ರ ಹೇಳಬಲ್ಲೆ.

ಭಾಷೆ ಮೊದಲು, ಆಮೇಲೆ ತಾನೆ ಅದರ ಆಂತರಿಕ ರಚನಾ ನಿಯಮಾವಳಿಯ ಪರಿವೀಕ್ಷಣೆ, ತದನಂತರ ಶಿಸ್ತಿಗೊಳಪಟ್ಟ ಅಧ್ಯಯನ ? ಹೀಗೆಯೇ ಒಂದು ಐತಿಹಾಸಿಕ ಪರಂಪರೆಯುಳ್ಳ ಅಲ್ಲದೆ ಒಂದು ನಿಶ್ಚಿತ ಪ್ರದೇಶದ ಶಿಷ್ಟಭಾಷೆ ಮತ್ತದರ ಉಪಭಾಷೆಗಳ ಅಧ್ಯಯನ ನಡೆದಾಗ ಮಾತ್ರ ಭಾಷೆಯೊಂದನ್ನು ಸಂತೃಪ್ತಿಕರ ದೆಸೆಯಲ್ಲಿ ಅದರ ಆಳ-ಅಗಲಗಳ ಸ್ವರೂಪ ದರ್ಶನದೊಂದಿಗೆ ಅರಿಯಬಹುದೆಂಬ ತಾತ್ವಿಕ ನಂಬಿಕೆಯತ್ತ ಅತು ಕೊಂಡವನು ಕೆಲವೊಮ್ಮೆ ಶಿಷ್ಟಭಾಷೆಯ ವ್ಯಾಕರಣಾಂಶ ಗಂಟಿಕ್ಕಿಕೊಂಡಂತೆ ಕಂಡಾಗ ಅದನ್ನು ಬಿಡಿಸಲು ಬೇಕಿರುವ ಕೀಲಿಕೈಗಳು ಅದರ ಇತರ ಉಪಭಾಷೆಗಳ ಅಧ್ಯಯನ ದಿಂದಲೂ ಲಭ್ಯ ಎಂದು ತೋರುತ್ತದೆ.

ಕನ್ನಡ ಭಾಷಾ ವ್ಯಾಕರಣಾಂಶಗಳನ್ನು ಮತ್ತೊಮ್ಮೆ ಪರಿವೀಕ್ಷಣೆಗೈಯಲು ನಮ್ಮ ಸಾಂಪ್ರದಾಯಿಕ ವೈಯಾಕರಣರು ದಯಪಾಲಿಸಿದ—ಸಂಸ್ಕೃತ ವ್ಯಾಕರಣ ತತ್ವಾಂಶಗಳ ವಿವರಣೆಗೆ ಬಳಕೆಯಾದ—ಪರಿಭಾಷೆಗಳ ಚೌಕಟ್ಟಿನಲ್ಲೆ ಎಲ್ಲವನ್ನೂ ಕಣ್ಣು ಮುಚ್ಚಿ ನೋಡುತ್ತ, ಅನುಸರಿಸುತ್ತ ಹೋಗುವುದೊ ? ಅಥವಾ ಕನ್ನಡದ ಕನ್ನಡಕ ವನ್ನು ಹಾಕಿಕೊಂಡು ತೆರೆದ ಕಣ್ಣಿನಿಂದ ಕಾಣುತ್ತ ಕಂಡುಕೊಳ್ಳುವುದು ಯುಕ್ತವೊ?!

ಸದ್ಯ ನಮ್ಮ ಮುಂದಿರುವ ಪ್ರಶ್ನೆಯು ಇವೆನ್ನಿಸುತ್ತದೆ.

—ಡಾ. ಎಂ. ಜಿ. ನಾರಿ

೨. ಒಂದು ವಚನದ ಬಗ್ಗೆ

ಡಾ. ಎಲ್. ಬಸವರಾಜು ಅವರು ಸಂಪಾದಿಸಿರುವ ೧೯೬೬ರಲ್ಲಿ ಮೊದಲ ಮುದ್ರಣಗೊಂಡ "ಅಕ್ಕನ ವಚನಗಳು" ಕೃತಿಯಲ್ಲಿ ಪೀಠಿಕೆಯ ಪ್ರಾರಂಭದಲ್ಲಿ ಈ ವಚನವಿದೆ.

ಅಲ್ಲಯ್ಯಗಳ ವಚನ ಎರಡೆಂಬತ್ತು ಕೋಟಿ
ಅಪ್ಪಯ್ಯಗಳ (?) ವಚನ ನಾಲ್ಕು ಲಕ್ಷದ ಮುವ್ವತ್ತಾರು ಸಾವಿರ
ಎ (ಅ ?) ಮ್ಮಯ್ಯಗಳ ವಚನ ವಚನಕ್ಕೊಂದು (?)
ಸೀಲಮ್ಮನ ವಚನ ಲಕ್ಷದ ಹನ್ನೊಂದು ಸಾವಿರ

ಗಂಗಾಂಬಿಕೆಯ ವಚನ ಲಕ್ಷದ ಎಂಟು ಸಾವಿರ
ಎಮ್ಮ ನಾಗಾಯಿಯ ವಚನ ಮೂರು ಲಕ್ಷದ ತೊಂಬತ್ತಾರು ಸಾವಿರ
ಮಡಿವಾಳಣ್ಣನ ವಚನ ಮೂರು ಕೋಟಿ ಮುನ್ನೂರು
ಹಡಪದಪ್ಪಯ್ಯಗಳ ವಚನ ಹನ್ನೊಂದು ಸಾವಿರ
ಮರುಳುಸಿದ್ಧನ ವಚನ ಅರುವತ್ತೆಂಟು ಸಾಸಿರ
ಇಂತಪ್ಪ ವಚನದ ರಚನೆಯ ಬಿಟ್ಟು
ಕುತ್ಸಿತ ವಾಕ್ಯಾಲಂಕಾರ (ಕಾವ್ಯಾಲಂಕಾರ) ವ ನೋಡುವರ ನೋಡಿ
ಕುಡಿಮಣ್ಣ ಹೊಯ್ಯದೆ ಮಾಬನೆ ಮಹಾದೇವ
ಕಪಿಲಸಿದ್ಧ ಮಲ್ಲಿಕಾರ್ಜುನ ! ?

ಈ ವಚನವನ್ನು ತಾವು ಹಳಕಟ್ಟಿಯವರ "ಸಿದ್ಧರಾಮೇಶ್ವರ ವಚನಗಳು" ಎಂಬ ಸಂಗ್ರಹದ ೪೫೯ನೇ ಪುಟದಿಂದ ಆರಿಸಿಕೊಂಡಿರುವುದಾಗಿ ಹೇಳಿರುವ ಬಸವರಾಜು ಅವರು ಅಲ್ಲಯ್ಯ ಎಂದರೆ ಅಲ್ಲಮ ಪ್ರಭು ಎಂದೂ ಅಪ್ಪಯ್ಯ ಎಂದರೆ ಬಸವಣ್ಣ ಎಂದೂ ಊಹೆ ಮಾಡಿ ಈ ಎಲ್ಲಾ ವಚನಕಾರರು ರಚಿಸಿರಬಹುದಾದ ಆದರೆ ನಂತರದ ಕಾಲದಲ್ಲಿ ನಾನಾ ಕಾರಣಗಳಿಂದ (ಕೀಟಗಳ ಹಾವಳಿ, ಶತ್ರುರಾಜರ ಧಾಳಿ, ಸೋತವರ ಗ್ರಂಥಗಳನ್ನು ಸುಡುವ ಪದ್ಧತಿ) ನಷ್ಟವಾಗಿ ಹೋಗಿರಬಹುದಾದ ವಚನಗಳ ಸಂಖ್ಯೆಯನ್ನು ಹೀಗೆ ಪಟ್ಟಿ ಮಾಡಿದ್ದಾರೆ.

ಅಲ್ಲಯ್ಯ (=ಅಲ್ಲಮ ಪ್ರಭು)	೧೬೦,೦೦೦೦ ೦೦೦
ಮಡಿವಾಳ (ಮಾಚಯ್ಯ)	೩,೦೦೦೦ ೩೦೦
ಅಪ್ಪಯ್ಯ (ಬಸವಣ್ಣ?)	೪೩೬ ೦೦೦
	೪೬೪ ೦೦೦ ಅಥವಾ
	೪೯೬ ೦೦೦
ನಾಗಾಯಿ (=ಅಕ್ಕ ನಾಗಲಾಂಬಿಕೆ)	೩,೯೬ ೦೦೦
ನೀಲಮ್ಮ	೧,೧೧ ೦೦೦
ಗಂಗಾಂಬಿಕೆ	೧,೦೮ ೦೦೦
ಸಿದ್ಧರಾಮ	೬೮, ೦೦೦
ಮರುಳುಸಿದ್ಧ	೬೮. ೦೦೦
ಹಡಪದಪ್ಪಯ್ಯ	೧೧, ೦೦೦
ಎಮ್ಮಯ್ಯ (=ಚೆನ್ನಬಸವ ?) ಅಥವಾ	
ಅಮ್ಮಯ್ಯ (ಕನ್ನಡಿ ಕಾಯಕದ ಅಮುಗಿ ಅಥವಾ ಅಮ್ಮಿದೇವ?)	

ನನ್ನ ಸಂದೇಹವೇನೆಂದರೆ, ಯಾವುದೇ ವ್ಯಕ್ತಿಯ (ಕವಿಯ) ಕೃತಿಗಳನ್ನು ಪಟ್ಟಿ ಮಾಡಬೇಕಾದರೆ ಅವರು ಸತ್ತನಂತರ (ಸಾಯುವವರೆಗೂ ಬರೆಯುತ್ತಿದ್ದರೆ) ಅಥವಾ ಬರೆಯುವುದನ್ನು ನಿಲ್ಲಿ (ಸುವವರೆಗೆ), ಸಿದನಂತರ, ಉದಾಹರಣೆಗೆ–ಕುವೆಂಪು ಅವರ ಕೃತಿಗಳ ಪಟ್ಟಿ, ಪೂರ್ಣ ಪಟ್ಟಿ ಪ್ರಕಟವಾಗುವುದು. ಅವರು ಬರೆವಣಿಗೆ ನಿಲ್ಲಿಸಿದ ಮೇಲೆ. ಇಲ್ಲದಿದ್ದರೆ ಆ ಪಟ್ಟಿಗೆ ಸೇರ್ಪಡೆಯಾಗುತ್ತಲೇ ಇರುತ್ತದೆ. ಉದಾ. ಸಿ. ಪಿ. ಕೆ. ಯವರ ನೂರು ಕೃತಿಗಳು ಪ್ರಕಟವಾಗಿವೆ. ಅವರು ಇನ್ನೂ ಬರೆಯುತ್ತಿರುವುದರಿಂದ ಆ ಪಟ್ಟಿಗೆ ಸೇರ್ಪಡೆಯಾಗುತ್ತಲೇ ಇದೆ. ಆದ್ದರಿಂದ ಸಿಪಿಕೆಯವರು ಇದುವರೆಗೆ ಬರೆದಿರುವ ಕೃತಿಗಳು ಇಂತಿಷ್ಟು ಎಂದು ಹೇಳಬಹುದು. ಆದರೆ ಕುವೆಂಪು ಬರೆದಿರುವ ಕೃತಿಗಳು ಇಷ್ಟೇ ಎಂದು ಹೇಳಬಹುದು.

ಮೇಲ್ಕಂಡ ವಚನಕಾರರು ಸಂಪೂರ್ಣ ಆರೋಗ್ಯವಂತರಾಗಿ ಬದುಕಿದ್ದಾಗ, ವಚನಗಳನ್ನು ಇನ್ನೂ ರಚಿಸುತ್ತಿದ್ದಾಗ, ಕಲ್ಯಾಣದ ರಕ್ತಕ್ರಾಂತಿಯ ಸಂಭವನೀಯತೆಯ ಅರಿವೂ ಇಲ್ಲದಿದ್ದಾಗ–ಯಾವುದೇ ಒಬ್ಬ ವಚನಕಾರ–ಇಲ್ಲಿ ಸಿದ್ಧರಾಮ ಹೀಗೆ ಇಂತಿಂತಹವರು ರಚಿಸಿರುವ ವಚನಗಳು ಇಷ್ಟು ಇಷ್ಟೇ ಎಂದು ಪಟ್ಟಿ ಮಾಡಬಹುದೆ? ಅಥವಾ ಅವನ ಅಭಿಪ್ರಾಯದಲ್ಲೂ ಇದುವರೆಗೆ ಎಂಬ ವಿಶೇಷಣ ಇದ್ದಿರಬಹುದೇ?

ಡಾ|| ಎಸ್. ವಿ. ಪ್ರಭಾವತಿ

ಗ್ರಂಥಾವಲೋಕನ

(1) ಗ್ರಂಥ ಸಂಪಾದನೆ : ಕೆಲವು ಅಧ್ಯಯನ

ಪ್ರಸ್ತುತ ಕಾಲದಲ್ಲಿನ ಗ್ರಂಥ ಸಂಪಾದನಾ ಕ್ಷೇತ್ರದ ವಿರಳ ಸಂಪಾದಕಿಯರಲ್ಲಿ ಶ್ರೀಮತಿ ವೈ. ಸಿ. ಭಾನುಮತಿಯವರು ಒಬ್ಬರು. ಇವರು ಸುಮಾರು ೨೧ ವರ್ಷಗಳ ಕಾಲ ಈ ಕ್ಷೇತ್ರದಲ್ಲಿ ಅವಿಚ್ಛಿನ್ನವಾಗಿ ದುಡಿದಿದ್ದಾರೆ. ಇವರ ೯ ಲೇಖನಗಳು ಪ್ರಸ್ತುತ ಕೃತಿಯಲ್ಲಿವೆ. ಇವು ಜೈನಹಸ್ತಪ್ರತಿಕಾರರು ; ಕನ್ನಡದಲ್ಲಿನ ಆಯುರ್ವೇದ ಕೃತಿಗಳು, ಕುಮಾರವ್ಯಾಸ ಭಾರತದ ಪ್ರಕ್ಷೇಪಗಳು, ಕ್ಲಿಷ್ಟಪಾಠಗಳು; ಮಿಷನರಿಗಳು; ಕಿಟೆಲ್; ಎಂ. ಆರ್. ಶ್ರೀ. ; ಎಂ. ಜಿ. ನಂಜುಂಡಾರಾಧ್ಯರವರ ಗ್ರಂಥ ಸಂಪಾದನಾಕ್ಷೇತ್ರದ· ಕೊಡುಗೆ ಹಾಗೂ ಮಹಿಳೆಯರ ಗ್ರಂಥ ಸಂಪಾದನೆ ಮತ್ತು ಒಂದು ದಶಕದ (೧೯೮೦-೯೦ರ ಕಾಲದ) ಗ್ರಂಥಸಂಪಾದನೆಗಳಿಗೆ ಸಂಬಂಧಿಸಿವೆ.

ಲೇಖನಗಳಲ್ಲಿ ವಿಶೇಷವಾಗಿ ಜೈನ ಹಸ್ತಪ್ರತಿಕಾರರು, ಆಯುರ್ವೇದ ಕೃತಿಗಳು ಹಾಗೂ ಕುಮಾರವ್ಯಾಸ ಭಾರತಕ್ಕೆ ಸಂಬಂಧಿಸಿದ ಲೇಖನಗಳು ಅವರ ಆಳವಾದ ಅಭ್ಯಾಸದ ಪ್ರತೀಕಗಳಾಗಿವೆ.

ಗ್ರಂಥ ಸಂಪಾದನಾಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳ ಸಂಪುಟವೊಂದು ಮೊದಲ ಬಾರಿಗೆ ಪ್ರಕಟವಾಗಿದ್ದು, ಆ ಕ್ಷೇತ್ರದ ಇತಿಹಾಸಕ್ಕೆ ಸಂಬಂಧಿಸಿದಂತೆ ಈ ಪುಸ್ತಕ ಒಂದು ಮೈಲಿಗಲ್ಲಾಗಿದೆ. ಇದಕ್ಕೆ ಕಾರಣರಾದ ಶ್ರೀಮತಿ ವೈ. ಸಿ. ಭಾನುಮತಿಯವರು ಅಭಿನಂದನಾರ್ಹರಾಗಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಂಗ್ರಹಗೊಂಡಿರುವ ಚಂದ್ರಸಾಗರ ವರ್ಣಿಯ ಸ್ವಹಸ್ತದ ಕಾಲೋಲ್ಲೇಖವುಳ್ಳ ಹಸ್ತ ಪ್ರತಿಗಳಿರುವಂತೆ ಬೆಂಗಳೂರು ವಿಶ್ವ ವಿದ್ಯಾಲಯದ ಹಸ್ತ ಪ್ರತಿ ಸಂಗ್ರಹದಲ್ಲೂ ವಿಪುಲವಾಗಿವೆ.

ಈ ಲೇಖನಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಅಂಶಗಳನ್ನು ಹಾಗೂ ತಿದ್ದುಪಡಿಗಳನ್ನು ಈ ಮುಂದೆ ಸೂಚಿಸಲಾಗಿದೆ.

---

1. ವೈ. ಸಿ. ಭಾನುಮತಿ, ಕೇಶವ ಪ್ರಕಾಶನ, ಮೈಸೂರು-570 023.

— ಪು. ೨೮ರಲ್ಲಿನ ಸಾಳ್ವನ 'ವೈದ್ಯ ಸಾಂಗತ್ಯ'ದ ಸ್ವಲ್ಪ ಭಾಗ 'ಸಾಳ್ವ-ಮಂಗರಾಜ ಚಿಕಿತ್ಸಾ ಪ್ರಕರಣ' ಎಂಬ ಹೆಸರಿನಲ್ಲಿ ೧೮೯೪ರಲ್ಲಿ ಎಳಂದೂರು ಶಾಸ್ತ್ರಿ ಸುಬಂಣ ಅವರಿಂದ ಪ್ರಕಟವಾಗಿದೆ.

— ಪು. ೨೯ರಲ್ಲಿನ ನಾರಸಿಂಹಭಟ್ಟರ 'ವೈದ್ಯಸಾರ ಸಂಗ್ರಹ' ಪ್ರಕಟವಾಗಿದೆ. (ಸಂ) ಜಿ. ಶ್ರೀನಿವಾಸಮೂರ್ತಿ ಮತ್ತು ಎನ್. ರಾಮಚಂದ್ರಭಟ್, ಮದ್ರಾಸ್.(ಸಂಪುಟ-೧) ೧೯೫೧, (ಸಂಪುಟ-೨) ೧೯೫೩.

— ಪು. ೩೩ರಲ್ಲಿ ಬೊಮ್ಮಯ ಕವಿಯ 'ವೈದ್ಯಕಂದ'ದ ಏಕೈಕ ಪ್ರತಿಯು ಬಗೆಗೆ ಪ್ರಸ್ತಾವವಿದೆ. ಈ ಕೃತಿಯ ಮತ್ತೊಂದು ಓಲೆ ಪ್ರತಿ ಕ. ಅ. ಕೇಂ (ಬೆಂ. ವಿ. ವಿ. ನಲ್ಲಿದೆ. ಇವೆರಡನ್ನೂ ಬಳಸಿಕೊಂಡು ಶ್ರೀ ಬಿ. ಎಸ್. ಸಣ್ಣಯ್ಯನವರು ೧೯೯೧ರಲ್ಲಿ ಪ್ರಕಟಿಸಿದ್ದಾರೆ.

— ಪು. ೨೦ರಲ್ಲಿ ಕುಮಾರವ್ಯಾಸ ಭಾರತದ ಉಪಲಬ್ಧ ಕ್ರಿ. ಶ. ೧೫೫೪ರ ಕಾವ್ಯ ಲೇಖವನ್ನುಳ್ಳ ಓಲೆ ಪ್ರತಿಬಗೆಗೆ ತಿಳಿಸಿದೆ. ಇದೇ ಶತಮಾನದ ಕ್ರಿ. ಶ. ೧೫೭೬ರ ಓಲೆ ಕೃತಿ ಕನ್ನಡ ಸಾಹಿತ್ಯ ಪರಿಷತ್ (ಬೆಂಗಳೂರು) ನಲ್ಲಿದೆ.

— ಪು. (೭೩ರಲ್ಲಿ ನವರಸ ನಿರೂಪಣೆಯುಳ್ಳ ಸಂಸ್ಕೃತ ಹಾಗೂ ಕನ್ನಡ ಕೃತಿಗಳ ಬಗೆಗೆ ತಿಳಿಸಿದೆ. ಈಗ ತಿಳಿದುಬಂದಿರುವಂತೆ ಕುಮಾರವ್ಯಾಸನಿಗಿಂತ ಪೂರ್ವ ಕಾಲೀನವಾದ ಇದೇ ಭಾವವನ್ನುಳ್ಳ ವೃತ್ತ, ೨೧ ಷಟ್ಪದಿಗಳು ಅಗ್ಗಳನ (೧೧೮೯) 'ಚಂದ್ರಪ್ರಭ ಪುರಾಣ' (೧೦-೪೩), ಕವಿಕಾಮನ(೧೨೦೦) 'ಶೃಂಗಾರ ರತ್ನಾಕರ' (ಕ.ಕ.ಚ) 1, ೧೯೬೧, ೩೫೭), ರಾಘವಾಂಕನ (೧೨೦೦) 'ಸೋಮನಾಥಚಾರಿತ್ರ' (೨-೭೯) ಹಾಗೂ ಮಲ್ಲಿಕಾರ್ಜುನನ (ಸು.೧೨೪೫) 'ಸೂಕ್ತಿ ಸುಧಾರ್ಣವ'ಗಳಲ್ಲಿವೆ (೮-೨೩೫)

— ಪು. ೯೪ರಲ್ಲಿ ಸಿದ್ಧರಾಮನ ದೀಕ್ಷೆ ಬಗೆಗಿನ ಎಂ. ಆರ್. ಶ್ರೀ ಅವರ ಉಲ್ಲೇಖವಿದೆ. ಇದು ಮೊದಲ ಬಾರಿಗೆ ಕಲ್ಲುಮಠದ ಪ್ರಭುದೇವನ (೧೪೩೪)ವಚನ ಸಂಕಲನ ಕೃತಿ 'ಲಿಂಗಲೀಲಾ ವಿಲಾಸ ಚಾರಿತ್ರ'ದಲ್ಲಿ ಪ್ರಸ್ತಾವಿತವಾಗಿದೆ.

— ಪು. ೧೦೩ರಲ್ಲಿನ ಅಪೂರ್ಣ 'ಶಂಕರಶತಕ' ಕವಿಗಳ ಸ್ವಹಸ್ತಪ್ರತಿಯನ್ನು ಅವಲಂಬಿಸಿ ಪ್ರಕಟವಾಗಿದೆ. ಶಿಥಿಲಸ್ಥಿತಿಯ ಕವಿಗಳ ಸ್ವಹಸ್ತ ಪ್ರತಿ ಈಗ ಕ. ಅ. ಕೇಂದ್ರ (ಬೆ. ವಿ. ವಿ.)ದಲ್ಲಿದೆ.

— ಪು. ೧೦೫ರಲ್ಲಿ ನಾಗವರ್ಮನ 'ಕರ್ಣಾಟಕ ಕಾದಂಬರಿ' ಪರಿಷ್ಕರಣದ ಬಗೆಗೆ ಹೇಳಲಾಗಿದೆ. ಇಲ್ಲಿನ ತ್ರುಟಿತ ಭಾಗಗಳನ್ನು ಶ್ರೀ ಬಸವಪ್ಪ ಶಾಸ್ತ್ರಿ (ಪೂರ್ವ ಕಾದಂಬರಿ, ೬೦೩-೧೪ ಹಾಗೂ ೭೨೧-೨೭) ಶ್ರೀ ಅಯ್ಯಾ ಶಾಸ್ತ್ರಿ (ಉತ್ತರ ಕಾದಂಬರಿ, ೫೬೦-೭೯), ಹಾಗೂ ಪಿ. ಆರ್. ಕರಿಬಸವಪ್ಪ ಶಾಸ್ತ್ರಿ (ಉ. ಕಾದಂಬರಿ ೭೨೫-೩೫) ಗಳು ಪುನಾರಚಿಸಿಕೊಟ್ಟಿದ್ದಾರೆ.

— ಪು. ೧೨೧ ರಲ್ಲಿನ ಚಂದ್ರಸಾಗರವರ್ಣಿಯ ಕೃತಿಯ ಉಲ್ಲೇಖ ‘ಚಂದ್ರ ಸಾಗರ ವರ್ಣಿಯ ಲಘುಕೃತಿಗಳು’ ಎಂದಾಗಬೇಕು.

— ಪು. ೧೨೨ರಲ್ಲಿನ ರನ್ನನ‘ ಸಾಹಸಭೀಮವಿಜಯ’ವನ್ನು ಎಸ್.ಜಿ.ನರಸಿಂಹಾಚಾರ್ ಹಾಗೂ ಎಂ. ಎ. ರಾಮಾನುಜಯ್ಯಂಗಾರ್ ಅವರು 1895ರಲ್ಲಿ ಮೊದಲ ಬಾರಿ ಪ್ರಕಟಿಸಿದರು. ಇದರ ತೃತೀಯ ಮುದ್ರಣ ೧೯೨೫ರಲ್ಲಿ ಪ್ರಕಟವಾಗಿದೆ.

.... ಪು. ೧೨೩ ರಲ್ಲಿನ ಹಸ್ತಿಮಲ್ಲನ ‘ಪೂರ್ವಪುರಾಣ’ ಪ್ರೊ. ಕುಂದಣಗಾರರಿಂದ ೧೯೪೩ರಲ್ಲಿ ಪ್ರಕಟವಾಗಿದೆ ಪೂರ್ಣವಾಗಿ.

.... ಪು. ೧೨೩ರಲ್ಲಿನ ‘ಕುಮುದೇಂದ-ರಾಮಾಯಣ’ದ ಮೊದಲ ಎಂಟು ಸಂಧಿಗಳನ್ನು ಪ್ರೊ. ಕುಂದಣಗಾರರ- ೧೯೩೬ರಲ್ಲಿ ಪ್ರಕಟಿಸಿದ್ದಾರೆ.

.... ಪು ೧೨೪ರಲ್ಲಿನ ‘ಗುರುದತ್ತ ಚರಿತೆ’ಯ ಕರ್ತೃ ದೇವರಸ. ಈತನ ಕೃತಿ ಕವಿಚರಿತೆಯ ದ್ವಿತೀಯ ಸಂಪುಟ (೧೯೧೯, ಪು. ೩೯೧-೯೨)ದಲ್ಲಿದೆ.

— ಪು. ೧೨೫ರಲ್ಲಿ ಶ್ರುತಕೀರ್ತಿಯ ‘ವಿಜಯಕುಮಾರಿ ಚರಿತೆ’ ಬಗೆಗೆ ಉ.ವಿದೆ. ಈತ ಸಾಂಗತ್ಯದಲ್ಲಿ ‘ಯಶೋಧರ ಚರಿತೆ’ ರಚಿಸಿದ್ದಾನೆ. (ಸನ್ಮತಿ, ೨೨.೨,೧೯೭೮, ಪು. ೩೯-೪೦). ಈತನ ಕಾಲ ೧೫೬೮/೧೫೬೭ ಆಗಬೇಕು.

.... ಪು. ೧೩೦ರಲ್ಲಿನ ಶ್ರೀ ಪಿ. ಎಂ. ಗಿರಿರಾಜು ಅವರು ಪ್ರಕಟಿಸಿದ ‘ಷಟ್ಸ್ಥಲ ಸಂಗ್ರಹ’, ಲೇಖಕಿಯವರು ತಿಳಿಸಿದಂತೆ ಬಿಡಿಬಿಡಿಯಾಗಿ ಪ್ರಕಟಿಸಿದ ಆಚರಣೆಯ ಸಂಬಂಧದ ವಚನಗಳ ಸಂಗ್ರಹವಲ್ಲ. ಈ ಕೃತಿ ಶಾಂತದೇವರು ಸಂಕಲಿಸಿದ ಅಖಂಡ ವಚನ ಸಂಕಲನ ಕೃತಿ.

.... ಪು. ೧೩೩ರಲ್ಲಿನ ಭೂಪರೆಡ್ಡಿ /ಭೂಸರಡ್ಡಿ ಇರಬೇಕು.

.... ಪು.೧೩೫ರಲ್ಲಿನ ‘ಚಂದ್ರಚೂಡಾಮಣಿ ಶತಕ’ ದ ಕರ್ತೃ ನಾಗವರ್ಮಾಚಾರ್ಯ.

— ಪು. ೧೩೯ರಲ್ಲಿ ಅ. ನ. ಕೃಷ್ಣರಾವ್ ಅವರು ನಾಗರಸನ ಭಗವದ್ಗೀತೆ ಸಂಪಾದಿಸಿದರೆಂದಿದೆ. ಇದು ತಪ್ಪಾಗಿದ್ದು ಅವರು ಕೀರ್ತನರೂಪದಲ್ಲಿನ-ತಮ್ಮ ತಾತನವರಾದ-ಅರಕಲಗೂಡು ಕೃಷ್ಣಯೋಗಿಗಳು (1826-1906) ರಚಿಸಿದ್ದ, ‘ಭಗವದ್ಗೀತಾರ್ಥ ಸಾರ’ ಎಂಬ ಹೆಸರಿನಲ್ಲಿ ೧೯೫೬ರಲ್ಲಿ ಪ್ರಕಟಿಸಿದ್ದಾರೆ.

— ಪು. ೧೪೯-೧೫೩ರಲ್ಲಿನ ಪಟ್ಟಿಗೆ ಈ ಕೆಳಗಿನ ಉಲ್ಲೇಖಗಳ ಸೇರ್ಪಡೆಯಾಗಬೇಕಾಗಿದೆ.

೧) ತಾರಾವಳೀ ಸಂಪುಟ-೧ (ಸಂ) ಎಂ. ಎಸ್. ಬಸವರಾಜಯ್ಯ, ತಿಪಟೂರು ೧೯೮೨.

೨) ಕೈಫಿಯತ್ತು ಮತ್ತು ಮೈಸೂರು ರಾಜರ ಚರಿತ್ರೆ, ವಚನಕಾವ್ಯವು (ಸಂ) ಬಿ. ಎಸ್. ಕುಲಕರ್ಣಿ, ಕ. ಸಂ. ಸಂ. ಧಾರವಾಡ, ೧೯೮೫

೩) ಮಹಾಮೂರ್ತಿಯ ಅಷ್ಟಾವರಣ ತಿಲಕ (ಸ.) ವೀರಣ್ಣ ದಂಡೆ, ಕಲಬುರ್ಗಿ, ೧೯೮೮

೪) ಹರಭಕ್ತಿಸಾರ–ಶಿವಧ್ಯಾನದ ರಾಮಯ್ಯ (ಸ.) ಹೀ. ಚಿ. ಶಾಂತವೀರಯ್ಯ, ಬೆಂಗಳೂರು, ೧೯೯೭.

—ಉ. ೫೨ರ (ಪು. ೧೫೦) ಕೃತಿಯ ಪೂರ್ಣ ಹೆಸರು ಷಟ್ಸ್ಥಲ ಬ್ರಹ್ಮಾನಂದ ವಿರಕ್ತ ಚಾರಿತ್ರದ ವಚನಗಳು.

—ಉ. ೫೬ (ಪು. ೧೫೧) ಕಡಕೊಳ/ಕಡಕೋಳ

—ಉ. ೭೨ (ಪು. ೧೫೧) ಶರ್ಮ/ರಾವ್. ಇಲ್ಲಿ ಸಂಪುಟ ೧–೪ ಎಂದು ಸೂಚಿಸಬೇಕು.

—ಉ. ೭೩ (ಪು, ೧೫೧) ತಿಂಥಿಣಿ/ತಿಂಥಣಿ ಕಡಕೊಳ–ಕಡಕೋಳ ಈರಣ್ಣ ಇಟಗಿ/ ಕೆ. ಪಿ. ಈರಣ್ಣ

—ಉ. ೮೦ (ಪು. ೧೫೦) ಶಿವಯೋಗಿನಾಥರ ಶಿವಯೋಗಿ ಸಿದ್ಧರಾಮನ ಹಾನಗಲ್ಲ| ಹಾನುಗಲ್ಲ

ಉ. ೧೧೫ [ಪು. ೧೫೩] ಪುನರುಕ್ತಿ [ನೋಡಿ ಉ.೯೮]

ಉ. ೧೧೮ [ಪು. ೧೫೩] ಸರ್ವಾರ್ಥ|ಸರ್ವಾಚಾರ

ಉ. ೧೨೨ (ಪು. ೧೫೩] ಎ.|ಎಲ್.

ಉ. ೧೨೩ (–"–] ಸಜ್ಜೆ|ಸೆಜ್ಜೆ. ಕೃತಿ ೧೯೮೯ರಲ್ಲಿ ಪ್ರಕಟಿತ.

ಉ. ೧೨೪ [–"–] ಬಾಳಮ್ಮ|ಬೊಳಮಲ್ಲ.

ಉ. ೧೨೫ [–"–] ರ ಕೃತಿಯ ಹೆಸರು. 'ತಾರಾವಳೀ ಸಂಪುಟ–೨' ಆಗಬೇಕು.

ಉ, ೧೨೯ [–"–] ದೇವರ / ದೇವರು

ಉ. ೧೩೧ [–"–] ಭೂಸರೆಡ್ಡಿ/ಭೂಸರಡ್ಡಿ.

ಉ. ೧೩೨ [–"–] ಶಾಸ್ತ್ರಿ| ಶಾಸ್ತ್ರೀ

— ಎಸ್. ಶಿವಣ್ಣ

(2) ಸೌಂದರ್ಯಲಹರಿ ಮತ್ತು ಕನಕಧಾರಾ ಸ್ತೋತ್ರ

ಶ್ರೀ ಶಂಕರಾಚಾರ್ಯರ ಎರಡು ಕೃತಿಗಳ ಪದ್ಯಾನುವಾದಗಳು ಇಲ್ಲಿವೆ. ಸಂಸ್ಕೃತದಲ್ಲಿ ಇವು ಅರ್ಥಜಟಿಲವಿರುವುದರಿಂದ ಇವನ್ನು ವಾರ್ಧಕ ಷಟ್ಪದಿಯಲ್ಲಿ ಹಿಡಿಸಿರುವುದು ಕನ್ನಡ ಓದುಗರಿಗೆ ಅರ್ಥ ಮಾಡಿಕೊಳ್ಳಲು ಸುಕರವಾಗಿದೆ. ವಾರ್ಧಕ ಷಟ್ಪದಿ ಗಮಕವಾಚನಕ್ಕೆ ಸೊಗಸೂ ಆಗುವುದು. ಅದಲ್ಲದೆ ಈ ಆಧುನಿಕ ಕಾಲದಲ್ಲಿ ಕನ್ನಡದ ಪದ್ಯರಚನೆ ದಾರಿತಪ್ಪುತ್ತ, ಛಂದಸ್ಸನ್ನು ಉಲ್ಲಂಘಿಸುವುದೇ ನೀತಿಯೆಂಬಂತಾದ ದಯನೀಯ ಪರಿಸ್ಥಿತಿಯಲ್ಲಿ ಅದನ್ನು ಮೌನದಿಂದ ಖಂಡಿಸಿ, ಛಂದೋಬದ್ಧ ಪದ್ಯರಚನೆ ಅದೆಷ್ಟು ಸೊಗಸು ! ಎಂಬುದನ್ನು ತೋರಿಸಿಕೊಡುವುದರೊಂದಿಗೆ ಉದಯೋನ್ಮುಖ ಕವಿಗಳಿಗೆ ದಿಗ್ದರ್ಶನ ಮಾಡಿದಂತೆಯೂ ಆಗುವುದು ನಿಶ್ಚಯ.

ಸೌಂದರ್ಯಲಹರಿ ಒಂದು ನೂರು ಪದ್ಯಗಳಿಂದ ಕೂಡಿದೆ. ಕನಕಲಕ್ಷ್ಮೀ ಸ್ತವನ ರೂಪದ 'ಕನಕಧಾರಾ ಸ್ತೋತ್ರ' ಪದ್ಯಗಳು ಇಪ್ಪತ್ತೊಂದು. ಇವೆರಡರ ಕೊನೆಗೆ ಪ್ರತಿ ಪದ್ಯಾನುವಾದ ರೂಪದಲ್ಲಿ ವಿವರಣೆಗಳನ್ನು ಕೊಡಲಾಗಿದೆ. ಆ ಮೇಲೆ ಅರ್ಥಕೋಶ ಟಿಪ್ಪಣಿಯೂ ಇದೆ. ಸೌಂದರ್ಯಲಹರಿ ಶ್ರೀ ಚಕ್ರದ ತಾಂತ್ರಿಕ ಮಹತ್ವವನ್ನೊಳಗೊಂಡಿರುವ ಆಧ್ಯಾತ್ಮಿಕ ಆನಂದಲಹರಿಯೂ ಆಗಿದೆ. ಅಂತಹ ಶ್ರೀ ಚಕ್ರವನ್ನಿಲ್ಲಿ ಸಚಿತ್ರವಾಗಿ ಕೊಟ್ಟಿರುವುದಲ್ಲದೆ ಆ ಯಂತ್ರಮಹತ್ವವನ್ನು ಶ್ರೀ ಆರ್. ಎಸ್. ರಾಮರಾಯರು ನಿರೂಪಿಸಿರುವುದನ್ನಿಲ್ಲಿ ಒಳಪಡಿಸಲಾಗಿದೆ. ವಿದ್ವಾನ್ ಎನ್. ರಂಗನಾಥಶರ್ಮರ ಪ್ರಸ್ತಾವನೆ, ಡಾ|| ಟಿ. ವಿ. ವೆಂಕಟಾಚಲ ಶಾಸ್ತ್ರಿಯವರ ಶುಭಾಶಂಸನೆ–ಈ ಎರಡೂ ಕೃತಿಗಳ ಆಂತರಿಕ ಮೌಲ್ಯದ ಹಿರಿಮೆಯನ್ನು ಉದ್ಯೋತಿಸುತ್ತವೆ. ಚಿನ್ಮಯಮಿಶನ್ನಿನ ಸ್ವಾಮಿ ಬ್ರಹ್ಮಾನಂದರ ಶುಭಾಶಯ, ಶೃಂಗೇರಿ ಜಗದ್ಗುರು ಶ್ರೀ ಭಾರತೀ ತೀರ್ಥ ಸ್ವಾಮಿಗಳ ಆಶೀರ್ವಚನವೂ ಇಲ್ಲಿ ಅಡಕವಾಗಿವೆ.

ಈ ಎರಡೂ ಕೃತಿಗಳನ್ನು ಮೂಲಕ್ಕೆ ಚ್ಯುತಿ ಬಾರದಂತೆ ಇನ್ನೂ ಅತಿಶಯದ ಸೌಂದರ್ಯ ಬರುವಂತೆ ಕನ್ನಡಿಸಿರುವುದಾಗಿ ಇವರೆಲ್ಲರೂ ಮುಕ್ತಕಂಠದಿಂದ ತಮ್ಮ ಮಾತು

---

2. ಕವಿ : ಗಮಕಿ ಆರ್. ಶಂಕರನಾರಾಯಣ್.
ಪ್ರ : ಸತ್ಯಶ್ರೀ ಪ್ರಕಾಶನ, 67, ಐ.ಟಿ.ಐ. ಬಡಾವಣೆ, ವಿದ್ಯಾಪೀಠ, ಬನಶಂಕರಿ 3ನೇ ಹಂತ ಬೆಂಗಳೂರು-560 085.
ಪುಟ : ೧೨೦, ಬೆಲೆ : ರೂ. ೩೦-೦೦ (ಪ್ರ, ಮು. ೧೯೯೭)

ಗಳಲ್ಲಿ ತಿಳಿಸಿರುತ್ತಾರೆ. "ಇದು ಶಾಸ್ತ್ರ ಆಧಾರಿತವಾದುದು, ಆದುದರಿಂದ ಸಾಧಕ ಸಜ್ಜ ನರಿಗೆ ಇದು ಕಾಮಧೇನು, ಕಲ್ಪವೃಕ್ಷ" ಎಂಬುದು ಶ್ರೀ ಬ್ರಹ್ಮಾನಂದರ ಆನಂದ ವಾಣಿ. "ಲಲಿತ ಗಂಭೀರವಾದ ಬಂಧಗುಣ, ಹಿತವಾದ ಶಬ್ದಶಯ್ಯೆ ಅವರ ಅನುವಾದದಲ್ಲಿ ಕಂಡುಬಂದಿದೆ" ಎಂಬುದು ಶಾಸ್ತ್ರೀವಚನ. "ಶಿವಾನಂದಲಹರಿ, ಮೋಹಮುದ್ಗರ ಮೊದಲಾದ ಅನೇಕ ಸಂಸ್ಕೃತ ಸ್ತೋತ್ರಗಳನ್ನು ಯಶಸ್ವಿಯಾಗಿ ಕನ್ನಡಕ್ಕೆ ಅನು ವಾದಿಸಿರುವ ಶ್ರೀಯುತರ (ನಾರಾಯಣರ) ಶಂಕರ ಕೈ ಅನುವಾದ ಕಾರ್ಯದಲ್ಲಿ ಚೆನ್ನಾಗಿ ಪಳಗಿದೆ"....ಎಂಬುದು ಶ್ರೀಶರ್ಮರ ಮೆಚ್ಚಿನ ಮಾತು.

ಹಲವು ವಿದ್ವಾಂಸರ ಮೆಚ್ಚಿಕೆಯ ಮಾತುಗಳ ಮುಂದೆ ಈ ವಿಮರ್ಶಕನಿಗೆ ಹೆಚ್ಚೇನೂ ಹೇಳಲು ಉಳಿದಿಲ್ಲವೆಂದು ಮಾತ್ರ ಹೇಳಬಹುದು. ತಪ್ಪಿಲ್ಲದ ಅಕ್ಷರ ಜೋಡಣೆಯ ಮುದ್ರಣ, ಉತ್ತಮವಾದ ಕಾಗದದ ಬಳಕೆ, ಓದಲು ಅರ್ಥೈಸಲು ಸುಗಮತೆ, ಒಳಗೆ ಶ್ರೀಚಕ್ರಚಿತ್ರ ಸಮೇತವಾದ ಈ ಕೃತಿಯನ್ನು ಶ್ರೀ ಚಕ್ರೋಪಾಸಕ ರಾಗಿದ್ದ ತಮ್ಮ ಅತ್ತೆಮಾವಂದಿರಿಗೆ ಅರ್ಪಣೆ ಮಾಡಿರುವುದು ಮಾತ್ರವಲ್ಲದೆ ಕನ್ನಡಿ ಗರಿಗೆ ಇದನ್ನು ಮುದ್ರಿಸಿ ಒದಗಿಸಿರುವುದು ಈ ಕೃತಿಕಾರರ ಸಾಧುವರ್ತನೆಯೇ ಸರಿ.

(3) ತಾಳಮದ್ದಳೆ

ಉತ್ತರಕನ್ನಡ ಜಿಲ್ಲೆಯ ಸಿರ್ಸಿ ಎಂ. ಎಂ, ಕಾಲೇಜಿನಲ್ಲಿ ಕನ್ನಡ ಉಪನ್ಯಾಸ ಕಿಯಾಗಿರುವ ಲೇಖಕಿಯವರು, ಡಾ|| ಶಾಲಿನಿ ರಘುನಾಥ್–ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುವ, ಕರ್ನಾಟಕ ವಿಶ್ವವಿದ್ಯಾಲಯದ ಡಾಕ್ಟರೇಟ್ ಪ್ರಶಸ್ತಿಗೆ ಪಾತ್ರವಾದ ಸಂಶೋಧನ ಗ್ರಂಥವಿದು. ಕಾಸರಗೋಡು, ದ. ಕ., ಉ. ಕ, ಶಿವಮೊಗ್ಗ ಜಿಲ್ಲೆ ಗಳಲ್ಲಿ ಕ್ಷೇತ್ರಕಾರ್ಯ ನಡೆಸಿ, ಮಾಹಿತಿಗಳನ್ನು ಸಂಗ್ರಹಿಸಿ, ಅನೇಕ ಮಂದಿ ಯಕ್ಷಗಾನ ಕಲಾವಿದರನ್ನು ಸಂಪರ್ಕಿಸಿ, ತಾಳಮದ್ದಳೆಯ ಕಾರ್ಯಕ್ರಮಗಳನ್ನು ನೋಡಿ ವಿಷಯ ಸಂಗ್ರಹ ಮಾಡಿ ಈ ಗ್ರಂಥವನ್ನು ರೂಪಿಸಿರುವುದು ವೇದ್ಯವಾಗುತ್ತದೆ. ಇದು ಈ ವಿಷಯದಲ್ಲಿ ಪ್ರಶಸ್ತಿ ಪಡೆದ ಮೊದಲ ಗ್ರಂಥವೆಂಬುದು ನಿಜ. ಆದರೆ ಈ ಕ್ಷೇತ್ರದಲ್ಲಿಯ ಸಂಶೋಧನೆಗೆ ಪ್ರಾಚೀನತೆಯೂ ಇದೆಯೆನ್ನಬಹುದು.

೧೯೫೫ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪಿ. ಎಚ್. ಡಿ. ಗಾಗಿ "ಯಕ್ಷಗಾನ ತಾಳಮದ್ದಳೆ"ಯನ್ನು ಪ್ರಬಂಧ ವಸ್ತುವಾಗಿ ಸಿದ್ಧಪಡಿಸಲು ನಾನು ಪ್ರೊ|| ಸ. ಸ. ಮಾಳವಾಡರ ಮಾರ್ಗದರ್ಶನದಲ್ಲಿ ಯೋಚಿಸಿದ್ದೆ. ಅದಕ್ಕೆ ಮೊದಲೇ ಹೊರಬಂದಿದ್ದ

3. ಲೇ : ಡಾ|| ವಿಜಯ ನಳಿನಿ ಆರ್. ಹೆಗಡೆ
ಪ್ರ : ಕರ್ನಾಟಕ ಸಂಘ, ಪುತ್ತೂರು–೫೭೪ ೨೦೨.
ಆಕೃತಿ : ಡಿಮ್ಮಿ : ೧/೮, ಪುಟಗಳು : ೧೮೩. ಬೆಲೆ : ರೂ. ೯೦–೦೦
(ಪ್ರ. ಮು. ೧೯೯೩)

ಡಾ||ಶಿವರಾಮ ಕಾರಂತರ "ಯಕ್ಷಗಾನ ಬಯಲಾಟ" ಸಂಪೂರ್ಣವಾಗಿ ಬಡಗುತಿಟ್ಟನ್ನೇ ಪ್ರತಿನಿಧಿಸುತ್ತಿದ್ದುದರಿಂದ ಬಡಗು-ತೆಂಕು ಎಂಬೆರಡೂ ತಿಟ್ಟುಗಳ ನಿರೂಪಣೆಯ ಸಂಶೋಧನೆಗೆ ಮನಸ್ಸು ಮಾಡಿದ್ದೆ. ಆದರೆ ಮೂಳವಾಡರು ಮೆಚ್ಚುಗೆಯಿಂದ ಮಾರ್ಗ ದರ್ಶಕರಾಗಲು ಒಪ್ಪಿದ "ದ. ಕ ಜಿಲ್ಲೆಯ ಜನಪದ ಗೀತಗಳು" ಎಂಬುದನ್ನು ಸಿದ್ಧ ಪಡಿಸಿ ೧೯೬೬ರಲ್ಲಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದೆ. ಆದರಲ್ಲಿ ಒಂದು ಅಧ್ಯಾಯವು ಯಕ್ಷಗಾನವನ್ನೇ ಕುರಿತುದು. [ಆ ಗ್ರಂಥ ೧೯೭೭ರಲ್ಲಿ ಕ. ಸಾ. ಪ. ಮೂಲಕ ಪ್ರಕಟವಾಗಿದೆ.] ನನಗೆ ಸ್ವತಃ ತೆಂಕುತಿಟ್ಟಿನ ಭಾಗವತಿಕೆ, ಮದ್ದಳೆಯ ವಾದನ ಮತ್ತು ಅರ್ಥಗಾರಿಕೆ-ಎಂಬೀ ಮೂರರಲ್ಲಿಯೂ ತಕ್ಕ ಪರಿಶ್ರಮವಿದ್ದು, ಹಲವೆಡೆ ಈ ಸಂಬಂಧದ ಪ್ರಾಯೋಗಿಕ ಉಪನ್ಯಾಸಗಳು, ಲೇಖನಗಳು ನನ್ನಿಂದ ಆಗಿದ್ದುದರಿಂದ ನನಗೆ ಪ್ರಕೃತ ಈ 'ತಾಳಮದ್ದಳೆ' ವಿಷಯದ ಸಂಶೋಧನ ಗ್ರಂಥ ಕುತೂಹಲೋತ್ಪಾದ ಕವೂ ಮನಸ್ಸಿಗೆ ಸಮೀಪಗತವೂ ಎನಿಸಿದೆ.

ಈ ಗ್ರಂಥದಲ್ಲಿ ಏಳು ಅಧ್ಯಾಯಗಳಿವೆ. ಮೊದಲಿನದು "ಅಧ್ಯಯನದ ಉದ್ದೇಶ ಮತ್ತು ವಿಧಾನ". ಕೊನೆಯದು 'ಉಪಸಂಹಾರ' ಮತ್ತು ಅನುಬಂಧಗಳು. ನಡುವಣ ಐದು ಅಧ್ಯಾಯಗಳು ಗ್ರಂಥದ ತಿರುಳಾಗಿವೆ. ಇವುಗಳಲ್ಲಿ ತಾಳಮದ್ದಳೆಯ ಸ್ವರೂಪ, ಸೃಜನಶೀಲತೆ, ಪಠ್ಯಪ್ರದರ್ಶನ-ಸಂದರ್ಭಗಳು. ತಾಳಮದ್ದಳೆ- ಪ್ರಾದೇಶಿಕ ಅಧ್ಯಯನ, ತಾಳಮದ್ದಳೆ ಮತ್ತು ಸಮಾಜ-ಎಂಬ ವಿಚಾರಗಳನ್ನು ಮಂಡಿಸಲಾಗಿದೆ. ಸೃಜನಶೀಲತೆಯ ಅಧ್ಯಾಯದಲ್ಲಿ ಯಕ್ಷಗಾನ ಪ್ರಸಂಗಗಳ ಕಥಾವಸ್ತು ವೈಶಿಷ್ಟ್ಯ, ಅರ್ಥ ಧಾರಿಗಳ ಸಂವಾದ ಪ್ರತಿಭೆ-ಇವುಗಳ ದಿಗ್ದರ್ಶನವಿದೆ. ಕೆಲವು ಪ್ರಸಂಗ ಪದ್ಯಭಾಗ ಗಳನ್ನು ಉಲ್ಲೇಖಿಸಿ, ಅವುಗಳ ಅರ್ಥದ ಸೊಗಸನ್ನು ತಿಳಿಸುವ ಪ್ರಯತ್ನ ಮಾಡಲಾ ಗಿದೆ. ತಾಳಮದ್ದಳೆಯಲ್ಲಿ ಉತ್ತರಕನ್ನಡದ ಮತ್ತು ದಕ್ಷಿಣ ಕನ್ನಡದ ಕೆಲವು ಪ್ರಸಿದ್ಧ ಅರ್ಥಧಾರಿಗಳ ಮಾತಿನ ಜಾಣ್ಮೆಯ ತುಣುಕುಗಳನ್ನು ಪ್ರಸ್ತಾವಿಸಲಾಗಿದೆ. ಯಕ್ಷ ಗಾನದ ಮಾತುಗಾರಿಕೆಯಲ್ಲಿ ಕಂಡುಬರುವ ಚುಟುಕು ಶೈಲಿ, ವಿದ್ವತ್ ಶೈಲಿ, ನಾಟ ಕೀಯ ಶೈಲಿ, ಭಾವನಾತ್ಮಕ ಶೈಲಿ, ಪಾತ್ರೋಚಿತ ಶೈಲಿ ಎಂಬಿವನ್ನೂ ತಿಳಿಸಲಾಗಿದೆ ಯಲ್ಲದೆ, ಈ ಕಲೆಯನ್ನು ಉಳಿಸಿ ಬೆಳಸುವ ಕಡೆಗೆ ದಿಗ್ದರ್ಶನವನ್ನು ಕೊಡಲಾಗಿದ್ದು- ಇವೆಲ್ಲವೂ ಗ್ರಂಥದ ಹಿರಿಮೆಗೆ ಕಾರಣಗಳಾಗಿವೆ.

ಹೀಗಿದ್ದರೂ ಈ ಗ್ರಂಥದಲ್ಲಿ ಅಸಮರ್ಪಕತೆಗಳು ಇಲ್ಲವೆಂಬಂತಿಲ್ಲ. ಸುಮಾರು ೯೦-೯೫ ವರ್ಷಗಳ ಹಿಂದಿನ ತಾಳಮದ್ದಳೆಯ ಮಾಹಿತಿ ಸಿಗುವುದಿಲ್ಲವೆನ್ನಲಾಗಿದೆ(ಪುಟ ೧೫೫). ಆದರೆ, ಕನಕದಾಸರ ನಳಚರಿತ್ರೆಯಲ್ಲಿ (ಕಾಲ : ೧೫೫೦) ಈ ಪದ್ಯವಿದೆ-

ಒಂದು ಕಡೆಯಲಿ ತಾಳಮದ್ದಳೆ
ಯೊಂದು ಕಡೆಯಲಿ ಸರಸನೃತ್ಯಗ

ಕೊಂದು ಕಡೆಯಲಿ ಸಾರತರ ಸಂಗೀತಸಾಹಿತ್ಯ
ಒಂದು ಕಡೆಯಲಿ ಗದ್ಯಪದ್ಯಗ
ಕೊಂದು ಕಡೆಯಲಿ ತರ್ಕಶಾಸ್ತ್ರಗ
ಕೊಂದು ಕಡೆಯಲಿ ಹಾಸ್ಯದಿಂದಿರುತಿರ್ದುದಾ ಸ್ಥಾನ (೩-೫೨).

ಪ್ರಸಂಗ' ಎಂಬುದು ತಾಳಮದ್ದಳೆಗೆ ಇರುವ ಪರ್ಯಾಯನಾಮ-ಎನ್ನಲಾಗಿದೆ. ವಾಸ್ತವಿಕವಾಗಿ ಪ್ರಸಂಗ ಎಂಬುದು ರಾಗ ತಾಳಬದ್ಧವಾದ ಯಕ್ಷಗಾನದ ಗೇಯಂ ಸಾಹಿತ್ಯ. ಅದರ ಕಥಾವಸ್ತುವಿಗೂ ಪ್ರಸಂಗವೆನ್ನುವರು. ಆದರೆ ಕಥಾವಸ್ತು ವೇನೂ ಇಲ್ಲದ 'ಭೇಷಜ ಪ್ರಸಂಗ' ಅಥವಾ 'ಮದ್ದಿನ ಪ್ರಸಂಗ' ಎಂಬುದು ನನ್ನಲ್ಲಿದೆ. ವಿವಿಧ ರಾಗ-ತಾಳಗಳ ಪದಗಳು, ಕಂದಷಟ್ಪದಿಗಳೂ ಭೇಷಜ ಪ್ರಸಂಗದಲ್ಲಿವೆ. ಆದುದ ರಿಂದ ರಾಗ-ತಾಳ ಛಂದಸ್ಸಿನ ಯಕ್ಷಗಾನದ ಶೈಲಿಯ ರಚನೆಗೆ 'ಪ್ರಸಂಗ' ಎಂಬ ಹೆಸರಿರುವುದು ಸ್ಪಷ್ಟವಾಗುವುದು. ಕಿಟ್ಟೆಲ್ ಕೋಶದಲ್ಲಿ ಪ್ರಸಂಗ ಎಂಬುದಕ್ಕೆ- "ಹಳ್ಳಿಯ ನಾಟಕ-ಯಕ್ಷಗಾನ ಎಂಬರ್ಥಗಳೂ ಇವೆ"- ಎಂದಿರುವುದು ಆಶ್ಚರ್ಯಕರ ! ಏಕೆಂದರೆ-ಕಿಟ್ಟೆಲ್ ಶಬ್ದಕೋಶ (೧೮೯೪) ಪ್ರಾಚೀನ ಪ್ರತಿಯಲ್ಲಾಗಲಿ, ಪುನರ್ಮುದ್ರಿತ (೧೯೭೦) ಪ್ರತಿಯಲ್ಲಾಗಲಿ ಈ ಅರ್ಥಗಳಿಲ್ಲ ! ಸಹೃದಯರು ನೋಡಿಕೊಳ್ಳಬಹುದು. ಲೇಖಕಿಯವರಿಗೆ ಅಲ್ಲಿ ಇದೆಯೆಂದವರು ಯಾರೋ ? ಕ. ಸಾ. ಪರಿಷತ್ತಿನ ಎಂಟು ಸಂಪುಟಗಳ ಕನ್ನಡ ನಿಘಂಟಿನಲ್ಲಿ "ಯಕ್ಷಗಾನಕ್ಕಾಗಿ ಆರಿಸಿಕೊಂಡ ಕಥಾವಸ್ತು, ಕಥಾ ನಕ ಮತ್ತು ಅವುಗಳಿಂದ ಆಡುವ ನಾಟಕ ರೂಪ" ಎಂದಿದೆ. ಇದರಲ್ಲಿಯೂ ಯಕ್ಷ ಗಾನ ಪ್ರಸಂಗದ ಸರಿಯಾದ ರೂಪವಿವರವಿಲ್ಲ. 'ರಾಗ-ತಾಳಸೂಚಿಯಿರುವ ಗೇಯ ಸಾಹಿತ್ಯ'-ಎಂಬ ವಿವರವಿಲ್ಲ.

'ತಾಳಮದ್ದಳೆಯು ನಟ ಪ್ರಧಾನ ಕಲೆ' ಎಂದು ಈ ಗ್ರಂಥದ ಉದ್ದಕ್ಕೂ ಹೇಳ ಲಾಗಿದೆ. ಸೇಡಿಯಾಪು ಕೃಷ್ಣಭಟ್ಟರು ಇದನ್ನು 'ಲುಪ್ತನಾಟ್ಯ'ವೆಂದು ಬಣ್ಣಿಸಿರುವು ದಾಗಿಯೂ ಲೇಖಕಿಯವರು ಹೇಳುತ್ತಾರೆ. ಯಕ್ಷಗಾನದ ಬಯಲಾಟವನ್ನು ನಟ ಪ್ರಧಾನ ಕಲೆಯನ್ನಬಹುದು. ತಾಳಮದ್ದಳೆ ಕಾರ್ಯಕ್ರಮದಲ್ಲಿ ವೇಷಧಾರಣೆಯಾಗಲೀ ನಾಟ್ಯ (ಕುಣಿತ)ವಾಗಲಿ ಇಲ್ಲದಿರುವಾಗ ಅದನ್ನು ನಟಪ್ರಧಾನವೆಂಬುದು ಸರಿಗಾಣದು. ವಾಚಿಕಾಭಿನಯವುಳ್ಳುದೆಂದು ಒಪ್ಪಬಹುದು. ಬಡಗುತಿಟ್ಟಿನಲ್ಲಿ ಭಾಗವತರು ತಾಳಕ್ಕಾಗಿ ಚಕ್ರತಾಳವನ್ನು (ತಾಳಬಿಲ್ಲೆಯನ್ನು) ಉಪಯೋಗಿಸುವರು. ತೆಂಕುತಿಟ್ಟಿನಲ್ಲಿ ಜಾಗಟೆ ಯನ್ನು ಉಪಯೋಗಿಸುವರೆಂಬುದು ನಿಜ. ಇದರಿಂದ ಈ ಕಲೆ ಉತ್ತರ ಕನ್ನಡ ಜಿಲ್ಲೆ ಯಲ್ಲಿ ಹುಟ್ಟಿಕೊಂಡಿರಬೇಕು-ಎಂಬ ಮಾತೂ ಅಡಿಗಟ್ಟಿಲ್ಲದುದು. 'ಚಕ್ರತಾಳ ಮದ್ದಳೆ' ಎಂಬ ಹೆಸರು ಈ ಕಲೆಗೆ ಇಲ್ಲ. ಯಕ್ಷಗಾನದಲ್ಲಿ ಹಾಡುವಾಗ ಒಂದೇ

ವೇದಿಕೆಯಲ್ಲಿ, ಭಾಗವತರು ತಾಳಹಾಕುತ್ತಾರೆ; ಆ ತಾಳಕ್ಕೆ ಮದ್ದಳೆ ಬಾರಿಸಲಾಗುತ್ತದೆ–ಆದುದರಿಂದ 'ತಾಳಮದ್ದಳೆ' ಎಂಬ ಹೆಸರು ಬಂತೆನ್ನಬಹುದು.

ಯಕ್ಷಗಾನದ ಪ್ರಯೋಗರೂಪಗಳಾಗಿ ಆಟ (ಬಯಲಾಟ) ತಾಳಮದ್ದಳೆ, ನಾಟಕ, ಗೊಂಬೆಯಾಟ–ಎಂಬ ಪ್ರಭೇದಗಳಿದ್ದರೂ ಹೆಚ್ಚು ಪ್ರಚಲಿತವೂ ಜನಾದರ ಪಾತ್ರವೂ ಆದುವು ಆಟ–ತಾಳಮದ್ದಳೆಗಳು. ಅಂತಹ ತಾಳಮದ್ದಳೆಯನ್ನು ಕುರಿತು ಇದೊಂದು ಸಂಶೋಧನ ಕೃತಿ ಹೊರಬಂದುದು ಮೆಚ್ಚತಕ್ಕಸಂಗತಿ. ಇದನ್ನು ಸುಂದರ ಮುದ್ರಣದಿಂದ ಹೊರತಂದಿರುವ ಪುತ್ತೂರು ಕರ್ನಾಟಕ ಸಂಘ ಅಭಿನಂದನಾರ್ಹವಾಗಿದೆ. ಈ ಗ್ರಂಥದ ಮುಖಪುಟದ ರೇಖಾಚಿತ್ರದಲ್ಲಿ ಜಾಗಟೆ ಬಾರಿಸುವ ಭಾಗವತನ ಎಡಗಡೆ ಮದ್ದಳೆಗಾರನಿದ್ದಾನೆ. ಮದ್ದಳೆಯು ಭಾಗವತನ ಬಲಗಡೆ ಇರಬೇಕಾದುದು ರೂಢಿಯಲ್ಲಿರುವ ಸರಿಯಾದ ಕ್ರಮ. ಏಕೆಂದರೆ–ಮದ್ದಳೆಯ ನಾದದ ಶ್ರುತಿಬದ್ಧವಾದ ಛಾಪಿನ ಭಾಗ ಸಭೆಗೆದುರಾಗಿರಬೇಕಾದುದು ಶಿಷ್ಟಕ್ರಮ. ಈ ಸಂಶೋಧನ ಕೃತಿ ಕನ್ನಡಿಗರಿಗೆಲ್ಲ ಪ್ರಿಯವಾಗಬಹುದು- ಯಕ್ಷಗಾನ ಕಲಾವಿದರಿಗೆ ಇದರಿಂದ ಅಭಿಮಾನ ಹೆಚ್ಚಾದೀತು ; ತಾಳಮದ್ದಳೆಯನ್ನು ಅಷ್ಟೇನೂ ಬಲ್ಲರಲ್ಲದವರಿಗೆ ಅದನ್ನು ತಿಳಿಯುವ, ಕಲಿಯುವ ಕುತೂಹಲವುಂಟಾದೀತು.

4. ಮುದ್ದಣನಿಗೆ ನಮನ

ನಂದಳಿಕೆ ಲಕ್ಷ್ಮೀನಾರಣಪ್ಪ ಎಂಬ ನಿಜನಾಮಧೇಯದ ಮುದ್ದಣ ಕವಿಯ [೧೮೭೦–೧೯೦೧]೧೨೫ನೆಯ ಜಯಂತಿಯ ಸ್ಮೃತಿಸಂಪುಟವಾಗಿ ಈ ಗ್ರಂಥ ಪ್ರಕಟವಾಗಿದೆ. ಈ ಕವಿ ವಿದ್ಯಾರ್ಥಿದಶೆಯಲ್ಲಿಯೇ ಏಕಪಾಠಿಯಾಗಿ ಇಂಗ್ಲಿಷ್ ಕನ್ನಡ ಸಂಸ್ಕೃತಗಳಲ್ಲಿ ನೈಪುಣ್ಯಗಳಿಸಿದ್ದನು. ಸ್ವಪ್ರಯತ್ನದಿಂದಲೇ ಯಕ್ಷಗಾನ, ಸಂಗೀತ ಸಾಹಿತ್ಯಗಳಲ್ಲಿ ಘನ ವಿದ್ವಾಂಸನಾಗಿ ಹೈಸ್ಕೂಲೊಂದರಲ್ಲಿ ವ್ಯಾಯಾಮ ಶಿಕ್ಷಕ ವೃತ್ತಿಯಲ್ಲಿದ್ದುಕೊಂಡು ವಿಶೇಷ ಸಾಹಿತ್ಯ ರಚನೆ ಮಾಡಿದ್ದಾನೆ ; ನೂತನ ಮಾರ್ಗಾನ್ವೇಷಿ ಎನಿಸಿದ್ದಾನೆ. ರತ್ನಾವತೀ ಕಲ್ಯಾಣ ಮತ್ತು ಕುಮಾರ ವಿಜಯ ಇವೆರಡೂ ಅವನ ಯಕ್ಷಗಾನ ಪ್ರಸಂಗಗಳು. ಶ್ರೀರಾಮಪಟ್ಟಾಭಿಷೇಕ–ವಾರ್ಧಕ ಷಟ್ಪದಿಯ ಕಾವ್ಯ. ಅದ್ಭುತ ರಾಮಾಯಣ ಮತ್ತು ಶ್ರೀ ರಾಮಾಶ್ವಮೇಧ–ಇವು ಹಳಗನ್ನಡ ಶೈಲಿಯ ಗದ್ಯಕೃತಿಗಳಾಗಿ ವಿದ್ವಜ್ಜನಮಾನ್ಯವಾದವು.

---

4. ಸಂ. ಜಯರಾಮಕಾರಂತ ಮತ್ತು ನಂದಳಿಕೆ ಬಾಲಚಂದ್ರರಾವ್.
ಪ್ರ: ಕರ್ನಾಟಕ ಸಂಘ, ಪುತ್ತೂರು, ೫೭೪೨೦೨. ದ. ಕ.
ಆಕೃತಿ: ಡೆಮ್ಮಿ ೧/೮, ಪುಟಗಳು ; ೪೫೪. ಬೆಲೆ : ರೂ. ೧೪೫-00 (ಪ್ರ. ಮು. ೧೯೯೬)

ಮುದ್ದಣ ಕವಿಯ ೭೫ನೆಯ ವರ್ಷದ ಸ್ಮಾರಕೋತ್ಸವವು ನಂದಳಿಕೆಯಲ್ಲಿ ೧೯೭೬ರಲ್ಲಿ ನೆರವೇರಿದಾಗ, "ಮುದ್ದಣ ಪ್ರಶಸ್ತಿ ಗ್ರಂಥ"ವನ್ನು ಸಂಪಾದಿಸುವ ಹೊಣೆ ನನ್ನದಾಗಿದ್ದಿತು. ಆದಕ್ಕೆ ಐವತ್ತು ವರ್ಷಗಳ ಹಿಂದೆ, ೧೯೨೬ ರಲ್ಲಿ ಪ್ರಬುದ್ಧ ಕರ್ಣಾಟಕ ಪತ್ರಿಕೆಯ ಸಂಪುಟ ೭ರ ಸಂಚಿಕೆ ಡಿ. ವಿ. ಜಿ. ಯವರ ಮುನ್ನುಡಿಯೊಂದಿಗೆ 'ಮುದ್ದಣ ಸಂಚಿಕೆ'ಯಾಗಿಯೇ ಪ್ರಕಟವಾಗಿದ್ದಿತು. ಅಲ್ಲಿಂದೀಚೆಗೆ ಮುದ್ದಣ ಕವಿ-ಕೃತಿ ವಿಷಯವಾಗಿ ಅನೇಕ ಬರಹಗಳು ಪ್ರಕಾಶನಗೊಂಡಿವೆ. ನನ್ನ ಮಿತ್ರ ದಿ. ಬಿ. ಪದ್ಮನಾಭಾಚಾರ್ಯರು 'ಮುದ್ದಣ ಕವಿ' ಎಂಬ ಕಾದಂಬರಿಯನ್ನು ಬರೆದು ಪ್ರಕಟಿಸಿದ್ದಾರೆ. ೧೯೮೭ರಲ್ಲಿ ಮುದ್ದಣನ ಸಮಗ್ರ ಕೃತಿಗಳನ್ನು ಹೊಸಗನ್ನಡ ಅನುವಾದದೊಂದಿಗೆ "ಮುದ್ದಣ ಭಂಡಾರ"ಎಂಬ ಹೆಸರಿಂದ ಕನ್ನಡ ಸಾಹಿತ್ಯ ಸಂಸ್ಕೃತಿ ಇಲಾಖೆ ಪ್ರಕಾಶನ ಪಡಿಸಿದೆ. ಈ ಮುದ್ದಣ ಭಂಡಾರದ ಲೇಖಕರು ಪ್ರೊ ಜಿ. ವೆಂಕಟಸುಬ್ಬಯ್ಯನವರು. ಇವರ ಸಂಪಾದನೆಯಲ್ಲಿ "ಮುದ್ದಣ ಪದಕೋಶ" ಎಂಬ ನಿಘಂಟನ್ನು ಪುತ್ತೂರಿನ ಕರ್ಣಾಟಕ ಸಂಘವು ಪ್ರಕಟಪಡಿಸಿದೆ. ಪ್ರಕೃತದ ಈ "ಮುದ್ದಣನ ನಮನ" ಈ ಕವಿ ಕಾವ್ಯ ಪರಿಚಯಾತ್ಮಕ ಹಾಗೂ ವಿಮರ್ಶಾತ್ಮಕ ಗ್ರಂಥ ರೂಪದ ಕೊಡುಗೆಯಾಗಿ ನಮ್ಮ ಮುಂದಿದೆ. ಇದರಲ್ಲಿ ಹಿಂದೆ ಬೇರೆ ಬೇರೆ ಕಡೆ ಪ್ರಕಟವಾದ ಕೆಲವು ಲೇಖನಗಳು ಮಾತ್ರವಲ್ಲದೆ ಹೊಸತೆನಿಸುವ ಇನ್ನು ಹಲವು ಲೇಖನಗಳೂ ಇವೆ.

ಈ 'ಮುದ್ದಣನ ನಮನ' ಪ್ರಾರಂಭದಲ್ಲಿಯೇ ಇದೇ ಶಿರೋನಾಮದಿಂದ ಕವಿ ಕೃತಿ ಪರಿಚಯದೊಂದಿಗೆ, ಇದುವರೆಗೆ ಪ್ರಕಟವಾದ ಮುದ್ದಣನ ವಿಚಾರದ ಲೇಖನಗಳ, ಪುಸ್ತಕಗಳ ವಿವರವನ್ನು ಸಂಪಾದಕರು ಸಮೀಕ್ಷಾತ್ಮಕವಾಗಿ ಸಮರ್ಪಕವಾಗಿ ನೀಡಿದ್ದಾರೆ. ಪ್ರೊ|| ಜಿ. ವೆಂಕಟಸುಬ್ಬಯ್ಯನವರು ಬರೆದ "ನೆನಪು-ನಂದಾದೀಪ" ದಿಂದ ಗ್ರಂಥಾರಂಭವಾಗಿದೆ. ಈ ಸಮಗ್ರ ಗ್ರಂಥದಲ್ಲಿ ಎಂಟು ಭಾಗಗಳಿವೆ. ಕೊನೆಗೆ ನಾಲ್ಕು ಅನುಬಂಧಗಳಲ್ಲಿ ಮುದ್ದಣ ಕವಿ ಕೃತ ಸಂಪ್ರದಾಯದ ಹಾಡುಗಳು (ಶೋಭಾನೆ ಹಾಡುಗಳು) ಅಂಬಾತನಯ ಮುದ್ರಾಡಿ ಅವರ 'ಪದದಿಂದೆ ಶಬ್ದದೀಪಂ' ಹಾಗೂ ಅವರಿಂದಲೇ ಆಯ್ಕೆಗೊಂಡ 'ಮುದ್ದಣನ ಲೋಕೋಕ್ತಿಗಳು ಇದರಲ್ಲಿವೆ. ಇನ್ನುಳಿದ ಭಾಗ – ಒಂದರಿಂದ ಎಂಟರ ವರೆಗೂ ಹಿಂದಿನ ಮತ್ತು ಇಂದಿನ ವಿದ್ವಾಂಸರು ಈ ಕವಿಯ ಹಾಗೂ ಕೃತಿಗಳ ಬಗೆಗೆ ನೀಡಿದ ವಿವರಣೆ, ವಿಮರ್ಶೆ ಸಂಶೋಧನೆಗಳು ಅಡಕವಾಗಿ ಓದುಗರಿಗೆ ವಿಶೇಷ ಅನುಭವಸಂಪತ್ತನ್ನು ನೀಡುವಂತಿವೆ. ನಂದಳಿಕೆ ಅಭ್ಯುದಯಗೊಂಡಿರುವ ಪರಿಯನ್ನು ಶ್ರೀ ಈಶ್ವರ ದೈತೋಟ ಅವರು ಓದುಗರ ಮುಂದಿಟ್ಟಿದಾರೆ.

ಕಬ್ಬಿನಾಲೆ ವಸಂತಭಾರದ್ವಾಜರು 'ಯಕ್ಷಗಾನ ಕವಿಯಾಗಿ ಮುದ್ದಣ' ಎಂಬ ಲೇಖನದಲ್ಲಿ ಮುದ್ದಣನು ತಾಳಪ್ರಜ್ಞೆಯುಳ್ಳ ಕವಿಯೆಂಬುದನ್ನು ಅವನ ಯಕ್ಷಗಾನದ ಕಂದಪದ್ಯದಲ್ಲಿ ಜಗಣದ ಉಲ್ಲಂಘನೆಯಾದುದರ ಔಚಿತ್ಯದ ಮೂಲಕ ದೃಢಪಡಿಸಿದ್ದಾರೆ. ಅವಲ್ಲದೆ ಗಣಪರಿವೃತ್ತಿಗೆ ಯಕ್ಷಗಾನ ಕೃತಿಗಳಲ್ಲಿ ಪ್ರಯೋಗ ಸಮೃದ್ಧಿ ಇದ್ದರೂ ಇದನ್ನರಿಯದ ವಿದ್ವಾಂಸರು "ಪಂಪ ಭಾರತವನ್ನು ಬಿಟ್ಟರೆ ಗಣಪರಿವೃತ್ತಿಯ ಪ್ರಯೋಗವಿರುವುದು ಬಿ. ಎಂ. ಶ್ರೀಯವರ ಕವಿತೆಯಲ್ಲಿ" ಎಂದಿರುವುದು ಹೇಗೆ ಅಜ್ಞಾನದ ಸಂಕೇತವೆಂಬುದನ್ನು ತೋರಿಸಿ ಕೊಟ್ಟಿದ್ದಾರೆ. ನಾನೂ ಇದನ್ನು ಹಿಂದೆಯೇ ತಿಳಿಸಿದ್ದುಂಟು. ಮುದ್ದಣನ ಯಕ್ಷಗಾನ ಪ್ರಸಂಗಗಳು ರಂಗಸ್ಥಳದಲ್ಲಿ ಸಾಕಷ್ಟು ಪ್ರದರ್ಶನಗೊಂಡಿಲ್ಲವೆಂಬ ಗತಾನುಗತಿಕ ಉದ್ಗಾರಗಳನ್ನು ಶ್ರೀ ಎಂ. ಪ್ರಭಾಕರ ಜೋಶಿಯವರು ತಮ್ಮ "ಎರಡು ಪ್ರಸಂಗಗಳು" ಎಂಬ ಲೇಖನದಲ್ಲಿ ಅಲ್ಲಗಳೆದಿರುವುದರಲ್ಲಿ ನನ್ನದೂ ಸಹಮತವಿದೆ. ಏಕೆಂದರೆ–ನನ್ನ ಹತ್ತೋ ಹನ್ನೆರಡೋ ವರ್ಷದ ಪ್ರಾಯದಲ್ಲಿ ಕುರುಡಪದವಿನಲ್ಲಿ ಆದ ಕುಮಾರ ವಿಜಯ ಪ್ರಸಂಗದ ಆಟಕ್ಕೆ ಏಳೆಂಟು ಮೈಲು ದೂರದ ನಮ್ಮ ತಾಳ್ತಜೆ ಮನೆಯಿಂದ ಇತರರೊಡಗೂಡಿ ಹೋಗಿ ಆ ರಾತ್ರಿಯೆಲ್ಲಾ ನಡೆಯುತ್ತಿದ್ದ ಕಾರ್ಯಕ್ರಮ ನೋಡಿದುದು, ಆ ಆಟದ ಸನ್ನಿವೇಶ ಚಿತ್ರಣ ಹಾಗೂ ಬಲಿಪ್ಪ ಭಾಗವತರ ಹಾಡುಗಾರಿಕೆಯ ಮಟ್ಟು ಈಗಲೂ ನೆನಪಿನ ಚಿತ್ರವನ್ನು ಕಾಣಿಸುತ್ತದೆ.

ಹೀಗೆ ಈ ನಮೂನ ಗ್ರಂಥ ಮುದ್ದಣ ಕವಿಯ ಜೀವನ ಹಾಗೂ ಕೃತಿಗಳ ವಿಚಾರದಲ್ಲಿ ಹೆಚ್ಚಿನ ಬೆಳಕನ್ನೀಯುವುದಲ್ಲದೆ, ಅವನ್ನರಿತು ನಮ್ಮ ಅನುಭವಗಳನ್ನು ಹೆಚ್ಚಿಸಿಕೊಳ್ಳಲು ತುಂಬ ಸಹಾಯಕವಾಗುವುದರಲ್ಲಿ ಸಂಶಯವಿಲ್ಲ.

—ಟಿ. ಕೇಶವ ಭಟ್ಟ

1. ನಾಡಕವಿ ವೇಮಣ್ಣ

ಕನ್ನಡ ನಾಡಿನಲ್ಲಿ ಸರ್ವಜ್ಞ ಹೇಗೆ ಜನರ ನಾಲಗೆಯಲ್ಲಿ ನೆಲಸಿದ್ದಾನೊ ಅದೇ ರೀತಿ ಆಂಧ್ರದಲ್ಲಿ ವೇಮಣ್ಣ. ಆತನ ಆಟವೆಲದಿಗಳನ್ನು (ಚೌಪದಿ) ಒಂದು ಕಂದ

1. ಪದ್ಯಕಾವ್ಯ (ಕನ್ನಡ ಅನುವಾದ) ಶಿವಕವಿ ಎನ್. ಶಿವಗೌಡರು
ಪ್ರಕಾಶಕರು: ಬಿ. ಆರ್. ವಿ. ಗೌಡ, ಬೆಂಗಳೂರು
ಪ್ರ. ಮು: 1997, ಪುಟ: 124, ಬೆಲೆ: ನಮೂದಿಸಿಲ್ಲ.

ಪದ್ಯವನ್ನು ಹೊರತುಪಡಿಸಿ-610 ಪದ್ಯಗಳನ್ನು ಆಯ್ಕೆಮಾಡಿಕೊಂಡು ಅದನು ಕನ್ನಡಕ್ಕೆ ಶಿವಕವಿ ಎಸ್. ಶಿವಗೌಡರು ಅನುವಾದಿಸಿದ್ದಾರೆ. ಮೂರ್ಖ ಪದ್ಧತಿ, ಡಾಂಭಿಕ, ವಿದ್ವತ್, ಅರ್ಥ, ದುರ್ಜನ, ಸಜ್ಜನ, ದೈವ ಕರ್ಮ, ಧೈರ್ಯ, ಮೋಹ, ಯೋಗಿ, ಬ್ರಹ್ಮಸ್ವರೂಪ, ಗುರುಭಕ್ತಿ, ಪ್ರಪಂಚ, ಸ್ವಭಾವ ಮತ್ತು ಜೀವನ್ಮುಕ್ತಿ ಪದ್ಧತಿಗಳೆಂಬ 16 ವಿಭಾಗಗಳಲ್ಲಿ ನೀತಿ, ತತ್ವಗಳ ಸಾರವನ್ನು ಅದೇ ಆಟವೆಲದಿ ಛಂದಸ್ಸಿನಲ್ಲಿ ಕನ್ನಡಕ್ಕೆ ತರುವ ಪ್ರಯತ್ನ ಇದಾಗಿದೆ. ಮೊದಲ ಮತ್ತು ಮೂರನೆಯ ಪಾದದಲ್ಲಿ ತಲಾ 18 ಮಾತ್ರೆಗಳು, ಎರಡನೆ ಮತ್ತು ನಾಲ್ಕನೆ ಪಾದದಲ್ಲಿ ತಲಾ 15 ಮಾತ್ರೆಗಳು (ಪದ್ಯವೊಂದರಲ್ಲಿ ಒಟ್ಟು 66 ಮಾತ್ರೆಗಳು) ಇದ್ದು ಕಡೆಯ ಪಾದದಲ್ಲಿ ಕಡ್ಡಾಯವಾಗಿ "ವಿಶ್ವದಾಭಿರಾಮ ವೇಮ ತಿಳಿಯೊ" ಎಂದು ಮುಕ್ತಾಯ ಗೊಳ್ಳುತ್ತದೆ. ತೆಲುಗಿನ ಪದ್ಯದ ಗೇಯತೆ, ಲಯವನ್ನು ಕನ್ನಡದಲ್ಲೂ ತರುವ ಸ್ತುತ್ಯ ಪ್ರಯತ್ನವಿದೆ. ಇವನ್ನೆ ಕಟ್ಟುನಿಟ್ಟಾಗಿ ಅನುಸರಿಸುವಲ್ಲಿ ಕೆಲವು ಕಡೆ ಶಬ್ದ ಅರ್ಥಗಳ ಅಸ್ಪಷ್ಟತೆ ಉಂಟಾಗಿರುವುದರೊಂದಿಗೆ ಲಯಕ್ಕೆ ಊನ ಉಂಟಾಗಿರುವಂತೆ ತೋರುತ್ತದೆ. ಕೆಲವು ಕಡೆ ಅನುವಾದ ಉತ್ತಮವಾಗಿದೆ.

ಉದಾ : ಆತ್ಮ ಶುದ್ಧಿಲೇನಿ ಆಚಾರ ಮದಿಯೇಲ | ಭಾಂಡಶುದ್ಧಿಲೇನಿ ಪಾಕಮೇಲ |
ಚಿತ್ತ ಶುದ್ಧಿಲೇನಿ ಶಿವಪೂಜಲೇಲರಾ | ವಿಶ್ವದಾಭಿರಾ ವಿನುರ ವೇಮ
(ವೇಮನ)

ಕನ್ನಡದಲ್ಲಿ : ಆತ್ಮ ಶುದ್ಧಿಯಿರದ ಆಚಾರವದು ಏಕೆ ?
ಗಡಿಗೆ ಶುದ್ಧವಿರದ ಅಡಿಗೆಯೇಕೆ ?
ಚಿತ್ತ ಶುದ್ಧವಿರದ ಶಿವನ ಪೂಜೆಗಳೇಕೆ ?
ವಿಶ್ವದಾಭಿರಾಮ ವೇಮ ತಿಳಿಯೊ (ಪದ್ಯ ಸಂ. 45)

ಪ್ರಸ್ತುತ ಕಾವ್ಯಾನುವಾದ ತೆಲುಗಿನ ವೇಮನನನ್ನು ಕನ್ನಡಕ್ಕೆ ಅದೇ ಧಾಟಿ, ಛಂದಸ್ಸಿನಲ್ಲಿ ತರುವಲ್ಲಿ ಶಿವಗೌಡರು ಉತ್ತಮ ಉದಾಹರಣೆಯಾಗಿದ್ದಾರೆ ಎನ್ನಲಡ್ಡಿ ಯಿಲ್ಲ.

2. ಕನ್ನಡ ಶಾತ್ತುಮೊರೆ ಮತ್ತು ರಂಗದಾಸರ ಕೀರ್ತನೆಗಳು

ಶ್ರೀವೈಷ್ಣವರ ದೇವತಾರ್ಚನೆಯ ಒಂದು ಮುಖ್ಯ ಭಾಗ ಶಾತ್ತುಮೊರೆ. ತೆಂಗಲೆ ಸಂಪ್ರದಾಯಕ್ಕೆ ಸೀಮಿತವಾಗಿರುವ ಈ ಪಾಶುರಗಳು ಸಂಸ್ಕೃತ-ತಮಿಳುಗಳ

2. ನಾ. ಗೀತಾಚಾರ್ಯ, ಪ್ರಕಾಶಕರು : ನಾರಾಯಣ ಶರ್ಮ ಸಂಸ್ಕೃತಿ ಕೇಂದ್ರ, ದೊಡ್ಡಹೆಜ್ಜಾಜಿ – 561214.

ಸಂಮಿಶ್ರಣ. ತಮಿಳು ಬಾರದ ಕನ್ನಡಿಗರಿಗೆ ಅನುಸಂಧಾನ ಮಾಡಲು ಅನುಕೂಲ ವಾಗುವಂತೆ ಅನುವಾದ ಮಾಡಲಾಗಿದೆಯೆಂದು ಅನುವಾದಕರು ಹೇಳಿದ್ದಾರೆ. ಧಾಟಿ ಮತ್ತು ಧ್ವನಿ ಮೂಲಕ್ಕೆ ಹತ್ತಿರವಾಗಿದೆ ಎನಿಸುತ್ತದೆ. ಪ್ರತಿ ಪಾಶುರದ ಅಡಿಯಲ್ಲಿ ಕ್ಲಿಷ್ಟ ಪದಗಳಿಗೆ ಅರ್ಥವನ್ನು ಕೊಟ್ಟಿರುತ್ತಾರೆ. ಆದರೆ, ಕೆಲವು ತಮಿಳು ಸಂಸ್ಕೃತ ಪದಗಳನ್ನು ಹಾಗೇ ಇಡಿ ಇಡಿಯಾಗಿ ಇರಿಸಿದ್ದಾರೆ. ಇದರಿಂದ ಅನುವಾದ ಉತ್ತಮ ಎಂದೆನಿಸುವುದಿಲ್ಲ. ಆದರೂ, ತಮಿಳು ಲಿಪಿ ಮತ್ತು ಭಾಷೆಯ ಪರಿಚಯವಿರದ ಶ್ರೀವೈಷ್ಣವ ಕನ್ನಡಿಗರ ದೇವಪೂಜಾ ಪ್ರಾರ್ಥನೆ ಸಮಯದಲ್ಲಿ ಓದಲು, ಅರ್ಥಮಾಡಿ ಕೊಳ್ಳಲು ಇದರಿಂದ ಸ್ವಲ್ಪವಾದರೂ ಸಹಾಯವಾದೀತೇನೊ ! ಕನ್ನಡದಲ್ಲೇ ಅರ್ಚನೆ ಮಾಡಬಲ್ಲವರಿಗೆ ಈ ಅನುವಾದ ತುಂಬ ಉಪಯುಕ್ತವಾಗಬಲ್ಲದು.

1830 ರಿಂದ 1910 ವರೆಗೆ ಜೀವಿಸಿದ್ದ 19ನೆ ಶತಮಾನದ ಹರಿದಾಸ ಪರಂಪರೆಗೆ ಸೇರಿದ ರಂಗದಾಸರ 16 ಕೀರ್ತನೆಗಳು ರಂಗದಾಸರ ಕೀರ್ತನೆಗಳು ಪುಸ್ತಕದಲ್ಲಿ ಪ್ರಕಟವಾಗಿವೆ. ಇದರಲ್ಲಿ ಕವಿಯ ಬಗ್ಗೆ, ಕಾಲದೇಶಗಳ ಮತ – ಕೃತಿಗಳ ಬಗ್ಗೆ ಸಾಕಷ್ಟು ಉಪಯುಕ್ತ ವಿವರಗಳನ್ನು ಸಂಪಾದಕರು ಕಲೆಹಾಕಿದ್ದಾರೆ. ಉಪಯೋಗಿಸಿರುವ ಹಸ್ತಪ್ರತಿ 1904ರಲ್ಲಿ ಮುದ್ರಣಗೊಂಡ ಪೇಟಿ ಮುದ್ರಣ ಪ್ರತಿಯಾಗಿದೆ. ಕೆಲವು ಸೂಕ್ಷ್ಮ ಬದಲಾವಣೆಗಳನ್ನು ಸೂಕ್ತವಾದ ರೀತಿಯಲ್ಲಿ ಮಾಡಿರುತ್ತಾರೆ. ರಂಗ ಅಥವಾ ರಂಗನಾಥ ಎಂಬ ಅಂಕಿತದಲ್ಲಿರುವ ರಂಗದಾಸರ ಕೀರ್ತನೆಗಳು ಗಾಯಕರ, ಸಂಗೀತಗಾರರ ದೃಷ್ಟಿಗೆ ಬಿದ್ದು ಪ್ರಚಾರಗೊಂಡರೆ ಶ್ರೀ ಸಾಮಾನ್ಯರಿಗೂ ಆಸಕ್ತಿ ಮೂಡಿಸಬಲ್ಲದು. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿದ್ದ ದ್ವೈತ ಅದ್ವೈತ ಸಂಪ್ರದಾಯದ ಕೀರ್ತನೆಗಳ ಜೊತೆಗೆ ಈ ರಂಗದಾಸರು ಮತ್ತು ಈ ಮೊದಲೇ ಈ ಸಂಪಾದಕರೇ ಪ್ರಕಟಿಸಿರುವ 'ನಾರಾಯಣದಾಸರ ಕೀರ್ತನೆಗಳು' ವಿಶಿಷ್ಟಾದ್ವೈತ ಪರಂಪರೆಯ ಕೀರ್ತನೆಗಳು ಹೊಸದಾಗಿ ಸೇರ್ಪಡೆಯಾಗುತ್ತಿರುವುದು ಗಮನಾರ್ಹ ಸಂಗತಿ.

ಮಾ. ನೆಂ. ಶ್ರೀನಾಥ್

3. ಬಿ. ಎಂ. ಶ್ರೀ

ತುಮಕೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನವರು ತಮ್ಮ ಸಂಸ್ಥೆಯು 25 ವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ ಬೆಳ್ಳಿ ಹಬ್ಬದ ಪ್ರಕಟಣೆಯಾಗಿ ಹೊರ

ಲೇ : ಪ್ರೊ. ಎಂ. ಪಜೀರ್ ಅಹ್ಮದ್
ಪ್ರಕಾಶಕರು : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ತುಮಕೂರು–572101
ಮೊದಲ ಮುದ್ರಣ : 1997 ಪುಟಗಳು : 174 . 8 ಬೆಲೆ : ರೂ. 35-00

ತಂದ ಕೃತಿ. ಇದರ ಲೇಖಕರಾದ ಪ್ರೊ. ಎಂ. ನಜೀರ್ ಅಹ್ಮದ್‌ರವರು ಬಿ. ಎಂ. ಶ್ರೀಕಂಠಯ್ಯನವರ ಸಂಕ್ಷಿಪ್ತ ಜೀವನವನ್ನು ಒಂದೆರಡು ಮಾತುಗಳಲ್ಲಿ ತಿಳಿಸಿದ್ದಾರೆ. ಆದರೆ, ಅವರು "ಶ್ರೀ" ಯವರ "ಇಂಗ್ಲಿಷ್ ಗೀತ"ಗಳನ್ನು ಆಂಗ್ಲ ಮೂಲದೊಂದಿಗೆ "ಶ್ರೀ"ಯವರ ಅನುವಾದವನ್ನು ತುಲನಾತ್ಮಕವಾಗಿ ಅಧ್ಯಯನ ಮಾಡುವಲ್ಲಿ ಸಫಲರಾಗಿದ್ದಾರೆ. ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು ಇವರು ಪ್ರಕಟಿಸಿರುವ "ಇಂಗ್ಲೀಷ್ ಗೀತ"ಗಳನ್ನು (ಮೂಲ ಮತ್ತು ಅನುವಾದ) ಬಳಸಿಕೊಂಡಿದ್ದಾರೆ. ಈ ಕೆಲಸವನ್ನು ಈಗಾಗಲೆ ಹಲವರು ಮಾಡಿದ್ದರೂ ಅವು ಕೆಲವರು ಕೆಲವು ಪದ್ಯಗಳನ್ನು ಮೂಲದೊಂದಿಗೆ ತುಲನೆ ಮಾಡಿರುವ, ಅನುವಾದದ ಸಫಲತೆ – ವಿಫಲತೆಗಳನ್ನು ಗುರುತಿಸುವ ಬಿಡಿ ಪ್ರಯತ್ನಗಳು. ಆದರೆ, ಇಲ್ಲಿ ನಜೀರ್ ಅಹ್ಮದ್‌ರವರು ಇಡೀ ಕೃತಿಯ ಎಲ್ಲಾ ಪದ್ಯಗಳನ್ನು ತುಲನಾತ್ಮಕ ದೃಷ್ಟಿಯಿಂದ ಅಧ್ಯಯನ ಮಾಡಿರುವುದು 'ಬಿ.ಎಂ.ಶ್ರೀ' ಕೃತಿಯ ವಿಶೇಷತೆ.

ಮತ್ತೊಂದು ವೈಶಿಷ್ಟ್ಯವೆಂದರೆ ಮೂಲದಲ್ಲಿ ಕವಿ ಯಾವ ಸಂದರ್ಭದಲ್ಲಿ ಪದ್ಯ ಸೃಷ್ಟಿ ಮಾಡಿದ, ಅದರ ಉದ್ದೇಶವೇನು, ಅದು ಉಂಟು ಮಾಡಿದ ಪರಿಣಾಮ ಇವುಗಳನ್ನು ತಿಳಿಸಿದ್ದಾರೆ. ಇದರಿಂದ ಕವಿಯ ಮನೋಭಾವ, ಕವಿತೆಯ ಆಶಯ ಇವುಗಳನ್ನು ಹೆಚ್ಚು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬಹುದು ಮತ್ತು ಅದರ ಹಿನ್ನೆಲೆಯಲ್ಲಿ ಮೂಲ ಮತ್ತು ಅನುವಾದಗಳನ್ನು ನೋಡಬಹುದಾಗಿದೆ.

'ಇಂಗ್ಲೀಷ್ ಗೀತ'ಗಳಲ್ಲಿನ ಪ್ರತಿಯೊಂದು ಪದ್ಯವನ್ನು ಮೂಲದೊಂದಿಗೆ ಪಂಕ್ತಿ ಪಂಕ್ತಿಯಾಗಿ ತೌಲನಿಕ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. "ಶ್ರೀ"ಯವರ ಅನುವಾದ ಸಾಮರ್ಥ್ಯವನ್ನು ಕೊಂಡಾಡಿದ್ದಾರೆ, ಹೆಚ್ಚಿನ ಸಂದರ್ಭದಲ್ಲಿ ಕೆಲವು ಕಡೆಗಳಲ್ಲಿ "ಶ್ರೀ" ಯವರು ಮೂಲದೊಡನೆ ಹೇಗೆ ಭಿನ್ನವಾಗಿದ್ದಾರೆ, ಕನ್ನಡದ ಜಾಯಮಾನಕ್ಕೆ ಒಗ್ಗುವಂತೆ ಸನ್ನಿವೇಶ, ಸಂದರ್ಭಗಳನ್ನು ಹೇಗೆ ಮಾರ್ಪಡಿಸಿಕೊಂಡಿದ್ದಾರೆ, ಹೇಗೆ ಪುನರ್ ಸೃಷ್ಟಿಸಿದ್ದಾರೆ, ಎಲ್ಲಿ ಹೆಚ್ಚಿಗೆ ತಮ್ಮದೆ ಮಾತುಗಳನ್ನು ಸೇರಿಸಿದ್ದಾರೆ, ಎಲ್ಲೆಲ್ಲಿ ಮೂಲವನ್ನು ಬಿಟ್ಟಿದ್ದಾರೆ ಎನ್ನುವುದನ್ನು ಸಮರ್ಥ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಪ್ರೊ. ಎಂ. ನಜೀರ್ ಅಹ್ಮದರು ಹೇಳುವುದನ್ನು ಖಚಿತವಾಗಿ ಹೇಳಿದ್ದಾರೆ. "ಶ್ರೀ"ಯವರ ಸಫಲತೆ – ವಿಫಲತೆಗಳನ್ನು ಸಾಧಾರವಾಗಿ ತೋರಿಸಿಕೊಟ್ಟಿಸಿದ್ದಾರೆ. ಆದರೆ ಎಲ್ಲೂ ಅವರನ್ನು ಟೀಕಿಸದೆ, ಬಹಳ ಸೌಮ್ಯೋಕ್ತಿಗಳಿಂದ ವಿಮರ್ಶೆ ಮಾಡಿದ್ದಾರೆ. ಲೇಖಕರು ತಮ್ಮ ವಸ್ತುನಿಷ್ಠ ಅಧ್ಯಯನದಲ್ಲಿ ಉತ್ತಮವಾದ ಕೆಲಸ ಮಾಡಿದ್ದಾರೆ ಎನ್ನಬಹುದು. ಇದಕ್ಕಾಗಿ ಲೇಖಕರು ಅಭಿನಂದನೀಯರು, ಪ್ರಶಂಸಾರ್ಹರು.

ಪುಸ್ತಕದಲ್ಲಿ ಕೆಲವು ಕಡೆ ಮುದ್ರಣ ದೋಷಗಳು ನುಸುಳಿದ್ದು ಕೆಲವೊಮ್ಮೆ ಜೇರೆ ಅಕರಗಳನ್ನು ಖಚಿತತೆಯ ದೃಷ್ಟಿಯಿಂದ ನೋಡಬೇಕಾಗುತ್ತದೆ. ಉದಾ :– "ದುಃಖ ಸೇತು"—ದುಃಖ ಸೇತುವೆ ಆಗಿದೆ. ಈ ಕೃತಿಯನ್ನು ಓದಿದ ನಂತರ "ಶ್ರೀ" ಯವರ ಶಿಷ್ಯರಾದ ಪ್ರೊ. ಎ. ಎನ್. ಮೂರ್ತಿರಾಯರು ಹೇಳಿರುವ "ಶ್ರೀಯವರ ಪ್ರತಿಭೆ ಮಹಾಕೃತಿಯೊಂದರ ಲಯಕ್ಕೆ ಸರಿಯಾಗಿ ಮಿಡಿಯಬಲ್ಲದು....ಆದರೆ ತಾನೆ ಆ ಮಟ್ಟದ ಕೃತಿಯನ್ನು ಸೃಷ್ಟಿಸಲಾರದು" ಎನ್ನುವ ಮಾತು ಶ್ರೀಯವರ ಕೃತಿಗಳನ್ನು ನೋಡಿದರೆ ಇಲ್ಲ ಎನ್ನಲಾಗದು. ಇದಕ್ಕೆ ಹಲವು ಕಾರಣಗಳಿರಬಹುದು. ಮುಖ್ಯ ವಾಗಿ ತಮಗೆ ಆ ಶಕ್ತಿ ಸಾಮರ್ಥ್ಯಗಳಿದ್ದರೂ ತಾವು ಸ್ವಂತ ಕೃತಿಗಳನ್ನು ರಚಿಸದೆ ಇದ್ದುದು. ವಿಮರ್ಶಕರು, ಮತ್ತಾರೇ ಆದವರು ಏನೇ ಹೇಳಿದರೂ 'ಶ್ರೀ' ಯವರ "ಇಂಗ್ಲೀಷ್ ಗೀತಗಳು" 20ನೆ ಶತಮಾನದ ಸಾವಿರಾರು ಕವಿಗಳಿಗೆ ದಾರಿ ತೋರಿಸಿತು, ಬೆಳಕು ನೀಡಿತು, ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಮಿಂಚಿನ ಸಂಚಾರ ಮೂಡಿಸಿತು ಎಂದರೆ ಅತಿಶಯೋಕ್ತಿ ಆಗಲಾರದು. ಇಂತಹ ಕೃತಿಯೊಂದರ ವಸ್ತುನಿಷ್ಠ ಅಧ್ಯಯನದ ಫಲ "ಬಿ.ಎಂ.ಶ್ರೀ." ಕನ್ನಡಿಗರು ಇದನ್ನು ಆದರದಿಂದ ಬರಮಾಡಿಕೊಳ್ಳಬಲ್ಲರು ಎನಿಸುತ್ತದೆ.

—ನಾ. ನಂ. ಶ್ರೀನಾಥ್

4. ಅವ್ವನ ವಚನಗಳು

ತಮಿಳು ಸಾಹಿತ್ಯದಲ್ಲಿ ಅವ್ವೆಯಾರ್ ಎನ್ನುವರು ರಚಿಸಿರುವರೆನ್ನಲಾದ ಸೂಕ್ತಿ ಗಳು ಪದ್ಯಗಳು ತಮಿಳುನಾಡಿನಲ್ಲೆಲ್ಲ ಮನೆಮಾತು. ಅವ್ವೈಯಾರ್ ಎಂದರೆ "ತಾಯಿಯಂಥ ಮುಪ್ಪಿನ ಹಿರಿಯ ಹೆಂಗುಸು." ಈ ಹೆಸರಿನ ಅನೇಕ ಕವಯತ್ರಿಯರು ತಮಿಳು ಸಾಹಿತ್ಯ ಚರಿತ್ರೆಯಲ್ಲಿ ಇರುವುದಾಗಿ ತಿಳಿದು ಬರುತ್ತದೆ. ನಿಖರವಾಗಿ ಇಂತಹ ಕಾಲಘಟ್ಟದವರೇ ಎಂದು ಹೇಳಲು ಬರುವುದಿಲ್ಲ. ಆದರೂ ದೊರೆತಿರುವ ಅವ್ವೈಯಾರ್ ಗ್ರಂಥಗಳಲ್ಲಿ ಹೆಚ್ಚು ಪ್ರಚಲಿತವಿರುವ ಅತ್ತಿಚೂಡಿ, ಕೊನ್ರೈವೇಂದನ್, ಮೂದುರೈ ಮತ್ತು ನಲ್ವಳಿ ಎಂಬ ನಾಲ್ಕು ಗ್ರಂಥಗಳನ್ನು ಕನ್ನಡಕ್ಕೆ ಪ್ರಯಾಸಪಟ್ಟು, ಶ್ರಮಪಟ್ಟು ಎಂ. ಗೋವಿಂದರಾಜು ಅವರು ಅನುವಾದಿಸಿದ್ದಾರೆ. ಅತ್ತಿಚೂಡಿ ಮತ್ತು ಕೊನ್ರೈವೇಂದನ್‌ಗಳು ಚಿಕ್ಕ ಚಿಕ್ಕ ನುಡಿಗಟ್ಟುಗಳಲ್ಲಿ ಸರಳ ಜೀವನ ಸೂತ್ರಗಳನ್ನು,

---

ಅನುವಾದಕರು : ಎಂ. ಗೋವಿಂದರಾಜು
ಪ್ರಕಾಶನ : ಶ್ರೀ ಕೈಲಾಸ ಆಶ್ರಮ, ಶ್ರೀ ರಾಜೇಶ್ವರಿ ನಗರ, ಬೆಂಗಳೂರು-560 039
ಮೊದಲ ಮುದ್ರಣ : 1997, ಪುಟಗಳು : viii + 88 + 3 ಬೆಲೆ : ರೂ. 25-00

ತತ್ತ್ವ ವಿಚಾರವನ್ನು ಒಳಗೊಂಡಿವೆ (ಒಟ್ಟು ೧೪೯ ಸೂಕ್ತಿಗಳು) ಆಣಿ ಮುತ್ತುಗಳಂತಿವೆ. ತಮಿಳಿನ ಮೂಲ ಭಾವ ಮತ್ತು ಆಶಯ ಅನುವಾದದಲ್ಲಿ ಇಲ್ಲವಾಗಿದೆ. ಭಾಷಾ ಪ್ರಯೋಗ ಮತ್ತು ವಾಕ್ಯ ರಚನೆ ಕನ್ನಡದ ಜಾಯಮಾನಕ್ಕೆ ಒಗ್ಗುವಂತಹದ್ದಲ್ಲ. ತಮಿಳಿನ ಮೂಲ ಕನ್ನಡ ಲಿಪಿಯಲ್ಲಿ, ಅನುವಾದ ಹಾಗೂ ಅರ್ಥ ಮೂರನ್ನೂ ಒಳಗೊಂಡಿದೆ ಈ ಕೃತಿ. ಹಲವೆಡೆಗಳಲ್ಲಿ ತಮಿಳಿನ ಪದಗಳಿಗೆ ಕನ್ನಡದ ಪ್ರತ್ಯಯಗಳನ್ನು ಸೇರಿಸಿ ಅತ್ತ ತಮಿಳೂ ಅಲ್ಲದ ಇತ್ತ ಕನ್ನಡವೂ ಅಲ್ಲದ ವಿಚಿತ್ರ ಪದಗಳನ್ನು ಧಾರಾಳವಾಗಿ ಅನುವಾದಕರು ಸೃಷ್ಟಿಸಿದ್ದಾರೆ.

ಮೂದುರೈ (ಹಿರಿಯರ ನುಡಿ) ಮತ್ತು ನಲ್ವಳಿ (ಒಳ್ದಾರಿ) ಎಂಬ ಅಧ್ಯಾಯಗಳಲ್ಲಿ ಒಟ್ಟು ೭೦ ಚೌಪದಿಗಳಿವೆ. ತಮಿಳಿನ ವೆಣ್ಬಾಛಂಧಸ್ಸಿನ ಧಾಟಿಯಲ್ಲಿ ಅದೇ ಲಯ, ಪ್ರಾಸ, ಶೈಲಿಯನ್ನು ಕನ್ನಡದಲ್ಲೂ ತಂದಿರುವುದಾಗಿ ಅನುವಾದಕರು ಅರಿಕೆಯಲ್ಲಿ ಹೇಳಿಕೊಂಡಿದ್ದಾರೆ. ಆದಿ ಪ್ರಾಸವನ್ನೇನೊ ಉಳಿಸಿದ್ದಾರೆ. ಶಬ್ದಾರ್ಥಗಳ ಔಚಿತ್ಯದ ಕಡೆ, ವ್ಯಾಕರಣದ ದೃಷ್ಟಿಯಿಂದ ವಾಕ್ಯ ರಚನೆಯ ಕಡೆ ಗಮನವಿರಿಸಿದ್ದಂತಿಲ್ಲ ಪ್ರತಿ ಪದ್ಯಕ್ಕೂ ಶೀರ್ಷಿಕೆ, ಮೂಲ, ಅನುವಾದ, ಅರ್ಥ ನೀಡಿದ್ದಾರೆ. ಉದಾಹರಣೆಗೆ: ಆತ್ತಿ ಚೂಡಿಯಲ್ಲಿ :– ೧. ತಮಿಳು :- ಅರಂ ಶೆಯ್ಯ ವಿರುಂಬು; ಕನ್ನಡಾನುವಾದ :- ಅರವನು ಗೆಯ್ಯ ಬಯಸು; ಅರ್ಥ :- ಎಂದಿಗೂ ಧರ್ಮವನ್ನೇ ಕರ್ತವ್ಯವೆಂದು ಮಾಡಲು ಬಯಸು. ಕೊನ್ರೈವೇಂದನ್‌ನಲ್ಲಿ :–೧. ತ :– ಅನ್ನೈಯುಂ ಪಿತಾವುಂ ಮುನ್ನರಿ ತೈಯ್ವಂ; ಕ :– ಅಮ್ಮನು ಅಪ್ಪರೆ ಮುನ್ನರಿಯುವ ದೇವರು; ಅರ್ಥ :- ತಾಯಿತಂದೆಯರೇ ಮೊಟ್ಟಮೊದಲಿಗೆ ಅರಿಯುವ ದೇವರು. ಮೂದುರೈನಲ್ಲಿ :- ೧. ಉಪಕಾರ ಮಾಡಿದರೆ ಒಳ್ಳೆತ್ತಾಗುವುದು. ತ :– ನನ್ರಿ ಒರುವರುಕ್ಕು ಶೆಯ್ದಕ್ಕಾಲ್ ಅನ್ನನ್ರಿ/ಎನ್ರು ತರುಂಗೊಲ್ ಎನವೇಂಡಾ–ನಿನ್ರು / ತಳರಾ ವಳರ್ ತೆಂಗು ತಾಳುಂಡ ನೀರ್ರೈತ್ / ತಲೆಯಾಲ್ ತಾನ್‌ತರುದಲಾಲ್; ಕ :– ನಲ್ಮೆಯೊಬ್ಬರಿಗೆ ಗೆಯ್ದುರವಕ್ಕೆ ಪ್ರತಿಯಾಗಿ ಎಂದು / ನಲ್ಮೆಮಾಡುವರೆಂದೆಣಿಸಬೇಡ – ತೆಲ್ಲಯಿಸಿ / ಬೆಳೆಯುತ ತೆಂಗು ತಳದಲಿ ಉಂಡ ನೀರನು / ತಲೆಯಲಿ ತಾನು ತರುವುದರಿಂದ;

ಅರಿಕೆಯಲ್ಲಿ ಅನುವಾದಕರು "ಕನ್ನಡ ಮತ್ತು ತಮಿಳು ನನ್ನ ಎರಡು ಕಣ್ಣುಗಳು 'ಅವ್ವನ ವಚನಗಳು' ಹೊತ್ತಿಗೆಯಿಂದ ಕನ್ನಡ ತಮಿಳು ಬಾಂಧವ್ಯಕ್ಕೆ ಪ್ರಯೋಜನ ದೊರಕಿದರೆ ಅದೇ ನನಗೆ ಸಾರ್ಥಕತೆ" ಎಂದಿದ್ದಾರೆ. ಯಾವ ಕಣ್ಣಿಗೂ ಹಾನಿಯಾಗದೆ ಇದ್ದರೆ ಅದೇ ಉಭಯ ಭಾಷಾ ಬಾಂಧವ್ಯಕ್ಕಾಗುವ ಪ್ರಯೋಜನ ಎಂದು ಓದುಗರು ಭಾವಿಸಬಹುದು.

ಈಗಾಗಲೆ ಶ್ರೀ ಗೋವಿಂದರಾಜು ಅವರು ಕನ್ನಡದ ಬಸವಣ್ಣನ ವಚನಗಳನ್ನು ತಮಿಳಿಗೂ ತಮಿಳಿನ 'ಸಿದ್ಧವೈದ್ಯ'ವನ್ನು ಕನ್ನಡಕ್ಕೂ ಅನುವಾದಿಸಿದ್ದಾರೆ. ಬಿ.ಎಂ.ಶ್ರೀ ಪ್ರತಿಷ್ಠಾನದಲ್ಲೇ ಪ್ರೊ|| ಎಂ. ವಿ. ಸೀತಾರಾಮಯ್ಯನವರೊಂದಿಗೆ ತಿರುಕ್ಕುರಳ್ ಅನ್ನು ಭಾಗಶಃ ಅನುವಾದ ಮಾಡಿದ್ದು ಉಳಿದದ್ದನ್ನು ಶ್ರೀ ರಾಮಸ್ವಾಮಿ ಅಯ್ಯರ್ ಮತ್ತು ಗೀತಾಚಾರ್ಯ ಅವರೊಂದಿಗೆ ಮುಂದುವರಿಸುತ್ತಿದ್ದಾರೆ.

— ಮಾ. ನಂ. ಶ್ರೀನಾಥ್

ಸಮಸ್ಯಾಪೂರ್ಣ ಮುಂದುವರಿದಿದೆ....

7 ಜೀವನದ ಸಫಲತೆಗೆ ಕರ್ಮದ
ಪಾವನತೆಯೇ ಸರ್ವಸಾರವು
ಜೀವದಯೆಯೇ ಸಕಲ ಕರ್ಮದ ಧರ್ಮ ವಾಗಿಹುದು
ಬೇವು ಬೆಲ್ಲದ ನಡುವೆ ಧರ್ಮವೆ
ಕಾವ ತೋಲನವದರ ದೃಢತೆಗೆ
ಭಾವ ಶುದ್ಧಿಯ ಬಕುತಿ ಬೇಹುದು ಪರಮ ದೈವದಲಿ

ತಲೆಂಗಳ ರಾಮಕೃಷ್ಣ ಭಟ್ಟ, ವಿದ್ವಾನ್

8 ದೇವಗುಣವನ್ನಾಂತುಕೊಂಡೇ
ದೇವಪೂಜೆಯ ಗೈಯ ಬೇಹುದು
ಭಾವ ಶುದ್ಧಿಯ ಬಕುತಿ ಬೇಹುದು ಸಕಲ ಕರದೊಳು
ಸಾವಧಾನದಿ ಗುರುನಿರೂಪಣ
ದಾ ವಿಮಲ ಮಂತ್ರೋಚ್ಚರಣೆಯಿಂ
ದೇವ ಸಾಯುಜ್ಯವನು ಪಡೆದಾನಂದದಿಂದಿಹುದು ||

ತಾಳ್ತಜೆ ಕೃಷ್ಣ ಭಟ್ಟ, ವಿದ್ವಾನ್

ಮುಂದಿನ ಸಂಚಿಕೆಯಲ್ಲಿ ಪ್ರಕಟಣೆಗಾಗಿ ಸಮಸ್ಯಾವಾಕ್ಯ
"ತೊಳಲುತರಸುವ ಬಳ್ಳಿ ಕಾಲ್ತೊಡಕಿದಂತೆ"

ಜೈಮಿನಿ ಭಾರತ

ವಸ್ತು ಸಂಗ್ರಹ

---

1. ಅ. ಭಾ. ಕನ್ನಡ ಸಾಹಿತ್ಯ ಸಮ್ಮೇಳನ

ಈ ಬಾರಿ ಅಖಿಲ ಭಾರತ ೬೬ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೯೬ನೆಯ ಡಿಸೆಂಬರ್ ೧೧, ೧೨, ೧೩, ೧೪ – ಈ ನಾಲ್ಕು ದಿನ ತುಂಬ ಯಶಸ್ವಿಯಾಗಿ ಮಂಗಳೂರಿನಲ್ಲಿ ಅಬ್ಬಕ್ಕರಾಣಿ ನಗರ ಎನ್ನಲಾದ ಮಂಗಳ ಕ್ರೀಡಾಂಗಣದಲ್ಲಿ ಮುದ್ದಣ ಮಂಟಪದಲ್ಲಿ ನೆರವೇರಿತು. ಸಭಾವೇದಿಕೆಗೆ 'ರತ್ನಾಕರವರ್ಣಿ ವೇದಿಕೆ' ಎಂದು ಹೆಸರಿಡಲಾಗಿತ್ತಲ್ಲದೆ ಕಾರ್ನಾಡ್ ಸದಾಶಿವರಾವ್ ದ್ವಾರ ಹಾಗೂ ಹಲವು ಮಂದಿ ಕವಿ–ಸಾಹಿತಿಗಳ ಹೆಸರುಗಳುಳ್ಳ ಪ್ರವೇಶ ದ್ವಾರಗಳು ಅಭಿಮಾನಕರವಾಗಿದ್ದವು. ಸಮ್ಮೇಳನಾಧ್ಯಕ್ಷರು ೮೨ ವರ್ಷವಯಸ್ಸಿನ ಉತ್ಸಾಹಿ ಕವಿ, ಸಾಹಿತಿ, ಕನ್ನಡ ಪಂಡಿತ, ವಿಮರ್ಶಕರಾಗಿ ಮಾತ್ರವಲ್ಲದೆ ನಾಡಿಗಾಗಿ ಹೋರಾಟಗಾರರೂ ಆಗಿರುವ ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳವರು. ಅಧ್ಯಕ್ಷ ಭಾಷಣದಲ್ಲಿ ಭಾರತೀಯ ಸಾಹಿತ್ಯ ಸಂಸ್ಕೃತಿಗಳ ವಿಹಂಗಾವಲೋಕನದೊಂದಿಗೆ ಕನ್ನಡ ಭಾಷೆ–ಸಾಹಿತ್ಯ–ಶಿಕ್ಷಣ ವಿಚಾರಗಳನ್ನು ಸಂಸ್ಪರ್ಶಿಸಿದರು. ಕನ್ನಡದೊಂದಿಗೆ ತುಳು – ಕೊಂಕಣಿ ಭಾಷೆ ಸಾಹಿತ್ಯಗಳನ್ನು ಪ್ರಸ್ತಾವಿಸಿದರು. ದಕ್ಷಿಣ ಕನ್ನಡ ಜಿಲ್ಲೆಯ ಅವಿಭಾಜ್ಯ ಪ್ರದೇಶವಾದ ಕಾಸರಗೋಡು ಕೇರಳಕ್ಕೆ ಸೇರಿಕೊಳ್ಳುವಲ್ಲಿ ಆದ ಅನ್ಯಾಯವನ್ನು ಎತ್ತಿತೋರಿಸಿದರಲ್ಲದೆ, ಆ ಭಾಗವನ್ನು ಕರ್ನಾಟಕದಲ್ಲಿ ಈಗಲಾದರೂ ಸೇರಿಸಲು ದಿಗ್ದರ್ಶನ ಮಾಡಿದರು.

ಸಮ್ಮೇಳನ ಉದ್ಘಾಟನೆಯಲ್ಲಿ ೬೬ ಹೊಸ ಪ್ರಕಟಣೆಗಳನ್ನು ಬಿಡುಗಡೆ ಮಾಡಲಾಯಿತು. ಅದಲ್ಲದೆ, ಪ್ರತಿಷ್ಠಾನದ ಆಜೀವ ಸದಸ್ಯರಲ್ಲೊಬ್ಬರಾದ ಶ್ರೀ ಕೆ. ಪಿ. ರಾಜಗೋಪಾಲ್–ಅವರ ಪ್ರಕಟಣೆಯ 'ಮಯೂರವರ್ಮ ವಿಲಾಸ' (ಕರ್ನಾಟಕದಲ್ಲಿ ಪ್ರಪ್ರಥಮ ಕನ್ನಡಿಗನೊಬ್ಬ ರಾಜ್ಯ ಕಟ್ಟಿದ ಕಥೆ) ಎಂಬ ಐತಿಹಾಸಿಕ ಯಕ್ಷಗಾನ ಕೃತಿಯನ್ನು ಬಿಡುಗಡೆ ಮಾಡಲಾಯಿತು. 'ಪೊನ್ನಕಂಠಿ' ಮತ್ತು 'ಸ್ವರ್ಣಕಲಶ' ಎಂಬ ಸಂಚಿಕೆಗಳನ್ನು ಹೊರತರಲಾಯಿತು. ಮೆರವಣಿಗೆ, ಉದ್ಘಾಟನೆ, ಉಲ್ಲಾಸ-ವಿಕಾಸ ಕಾರ್ಯಕ್ರಮಗಳು, ವಿಶೇಷ ಕಾರ್ಯಕ್ರಮಗಳು, ವಿಶೇಷೋಪನ್ಯಾಸಗಳು, ಕವಿಗೋಷ್ಠಿ, ಸಮಾಲೋಚನ ಸಭೆ ಹಾಗೂ ವಿವಿಧ ವಿಷಯ ವಿಚಾರಗಳ ಎಂಟು ಗೋಷ್ಠಿಗಳು ನೆರವೇರಿ ಸಮಾರೋಪವನ್ನು ಮಾಡಲಾಯಿತು.

2. ಸನ್ಮಾನ, ಗೌರವಗ್ರಂಥ ಬಿಡುಗಡೆ

1) ಡಾ|| ಟಿ. ವಿ. ವೆಂಕಟಾಚಲಶಾಸ್ತ್ರೀ : ಕನ್ನಡದ ಶ್ರೇಷ್ಠ ಸಂಶೋಧಕರಲ್ಲೊಬ್ಬರೂ ಪ್ರತಿಷ್ಠಾನದ ಕಾರ್ಯ ಸಮಿತಿ ಸದಸ್ಯರೂ ಆದ ಡಾ|| ಟಿ. ವಿ. ವೆಂಕಟಾಚಲ ಶಾಸ್ತ್ರೀ ಅಭಿನಂದನ ಸಮಾರಂಭ 30–8–97 ರಂದು ಬೆಂಗಳೂರಿನಲ್ಲಿ ನಡೆಯಿತು. ಈ ಸಂದರ್ಭದಲ್ಲಿ 'ಶ್ರೀಮುಖ' ಎಂಬ ಅಭಿನಂದನ ಸಂಪುಟವನ್ನು ಹೊರತರಲಾಯಿತು. ಶಾಸ್ತ್ರಿಗಳ ಬಹುಮುಖ ಪ್ರತಿಭೆಯನ್ನು ಪಾಂಡಿತ್ಯ ಕ್ಷೇತ್ರದಲ್ಲಿನ ಅವರ ಮಹತ್ತರ ಸಾಧನೆಯನ್ನು ಗುರುತಿಸುವಲ್ಲಿ ಯಶಸ್ವಿಯಾದ ಈ ಸಮಾರಂಭ ತುಂಬ ಅರ್ಥಪೂರ್ಣವಾಗಿ ನಡೆಯಿತು. ಶಾಸ್ತ್ರಿಗಳ ಸಂಶೋಧನಾ ಲೇಖನಗಳನ್ನೇ ಬಹುಪಾಲು ಹೊಂದಿರುವ 'ಶ್ರೀಮುಖ' ಅಭಿನಂದನ ಗ್ರಂಥ ಒಂದು ಮಾದರಿ ಆಕರ ಗ್ರಂಥವಾಗಿದೆ. ಶ್ರೀ ನಿಟ್ಟೂರು ಶ್ರೀನಿವಾಸರಾವ್, ಡಾ|| ಹಾ. ಮಾ. ನಾಯಕ್, ಡಾ|| ಎಂ. ಎಂ. ಕಲಬುರ್ಗಿ, ಪ್ರೊ|| ಎಸ್. ಕೆ. ರಾಮಚಂದ್ರರಾವ್ ಈ ಸಮಾರಂಭದಲ್ಲಿ ಭಾಗವಹಿಸಿದ್ದರು.

2) ಶ್ರೀ ಕೆಳದಿ ಗುಂಡಾಜೋಯಿಸ್ : ಕೆಳದಿ ಇತಿಹಾಸ ಸಂಶೋಧನೆ ಮತ್ತು ಪ್ರಾಚೀನ ಹಸ್ತಪ್ರತಿ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಪ್ರತಿಷ್ಠಾನದ ಸ್ಥಾಪಕ ಸದಸ್ಯರೂ ಆದ ಶ್ರೀ ಕೆಳದಿ ಗುಂಡಾಜೋಯಿಸ್ ಅವರಿಗೆ 28–12–97 ರಂದು ಸಾಗರದಲ್ಲಿ ಅಭಿನಂದನಾ ಸಮಾರಂಭವೂ 'ಕೆಳದಿಶ್ರೀ' ಅಭಿನಂದನ ಗ್ರಂಥ ಬಿಡುಗಡೆಯೂ ನಡೆಯಿತು. ತಮ್ಮ ಇಳಿವಯಸ್ಸಿನಲ್ಲಿ ಸಾಹಿತ್ಯ, ಇತಿಹಾಸ, ಸಂಶೋಧನೆಯತ್ತ ಆಸಕ್ತಿವಹಿಸಿ ಎಂ.ಎ. ಮಾಡಿ ಎಲ್ಲರೂ ಆಶ್ಚರ್ಯ ಪಡುವಷ್ಟು ಕೆಲಸ ಮಾಡಿರುವ ಗುಂಡಾಜೋಯಿಸರ ಪ್ರಯತ್ನದ ಪರಿಶ್ರಮದ ಫಲ "ಕೆಳದಿ ವಸ್ತು ಸಂಗ್ರಹಾಲಯ ಮತ್ತು ಸಂಶೋಧನಾ ಸಂಸ್ಥೆ" ಪ್ರತಿಷ್ಠಾನ ಮತ್ತು ಈ ಸಂಸ್ಥೆ ಜೊತೆ ಜೊತೆಯಲ್ಲಿ ಪ್ರಾರಂಭವಾದರೂ ಇಂದು ಕೆಳದಿ ವಸ್ತು ಸಂಗ್ರಹಾಲಯ ರಾಜ್ಯಪ್ರಾಚ್ಯ ವಸ್ತು ಇಲಾಖೆಯಿಂದಲೇ ನಡೆಸಲ್ಪಡುತ್ತಿರುವ ಮಾದರಿ ಕೇಂದ್ರವಾಗಿದೆ. ಅದರ ಗೌರವ ನಿರ್ದೇಶಕರೂ ಆಗಿದ್ದಾರೆ. ಡಾ|| ಅ. ಸುಂದರ ಶ್ರೀ ಮಲ್ಲಿಕಾರ್ಜುನ, ಮುರುಘರಾಜೇಂದ್ರಸ್ವಾಮಿ, ಅ. ಮಹಾಬಲೇಶ್ವರ ಭಟ್ ಮುಂತಾದವರು ಈ ಸಮಾರಂಭದಲ್ಲಿ ಭಾಗವಹಿಸಿದ್ದರು.

3) ಕನ್ನಡ ಗಣಕ ಪರಿಷತ್ತಿನ ಉದ್ಘಾಟನೆ : ಎಲ್ಲ ಕ್ಷೇತ್ರಗಳೂ ಗಣಕೀಕರಣಗೊಳ್ಳುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಕನ್ನಡದಲ್ಲಿ ಗಣಕೀಕರಣ ಸಾಧ್ಯವೆಂಬುದನ್ನು ತೋರಿಸುವ ಆಧುನಿಕ ತಂತ್ರ ಜ್ಞಾನಕ್ಕೆ ಕನ್ನಡವನ್ನು ಸಮರ್ಥವಾಗಿ ಬಳಸುವ

ವಾತಾವರಣವನ್ನು ನಿರ್ಮಾಣ ಮಾಡುವ ಹಿನ್ನೆಲೆಯಲ್ಲಿ ಆರಂಭವಾಗಿರುವ ಕನ್ನಡ ಗಣಕ ಪರಿಷತ್ತು ಶುಭ ಸೂಚನೆಯಾಗಿದೆ. ಈ ಕ್ಷೇತ್ರದಲ್ಲಿ ಈಗಾಗಲೆ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿ ಕೊಂಡಿರುವ ಶ್ರೀ ಜಿ. ವಿ. ಶ್ರೀನಾಥಶಾಸ್ತ್ರಿ ಅವರು ಇದರ ಹಿಂದಿದ್ದು ಇದಕ್ಕೊಂದು ಸ್ಪಷ್ಟ ರೂಪವನ್ನು ನೀಡಬಲ್ಲರೆಂದು ನಂಬಲಾಗಿದೆ. ಶ್ರೀ ಆರ್. ವಿ. ದೇಶಪಾಂಡೆ (ಕೈಗಾರಿಕಾ ಸಚಿವರು) ಇವರು ಉದ್ಘಾಟಿಸಿದ ಈ ಸಮಾರಂಭ ಕನ್ನಡಕ್ಕೆ ಉತ್ತಮ ಭರವಸೆಯನ್ನು ಮೂಡಿಸಿದೆ. ಇದೇ ದಿನ ಈ ಕಾರ್ಯಕ್ರಮಕ್ಕೆ ಮೊದಲು ವಿವಿಧ ಇಲಾಖೆ, ಸಂಸ್ಥೆಗಳು ಕನ್ನಡದಲ್ಲಿ ಕಂಪ್ಯೂಟರ್ ಮೂಲಕ ನಡೆಸಿರುವ ಸಾಧನೆ, ಕಾರ್ಯಗಳ ಪ್ರಾತ್ಯಕ್ಷಿಕೆಗಳ ಪ್ರದರ್ಶನವೂ ಇತ್ತು.

4) "ಗಮಕ ಕಾವೇರಿ" ಯೋಜನೆ : ಕರ್ನಾಟಕ ಗಮಕ ಕಲಾಪರಿಷತ್ತು ಭಾರತದ ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ ಈ ಈ ವಿಶೇಷಯೋಜನೆ ಇಡೀ ವರ್ಷ ರಾಜ್ಯಾದ್ಯಂತ 1100 ಗಮಕ ಕಾರ್ಯಕ್ರಮಗಳನ್ನು ನಡೆಸುವುದಾಗಿದೆ. ಎಚ್.ಎಂ.ಟಿ. ಮತ್ತು ಸರ್ಕಾರಗಳಿಂದ ಆರ್ಥಿಕ ನೆರವನ್ನು ಪಡೆದು ಹಮ್ಮಿಕೊಂಡಿರುವ ಈ ಯೋಜನೆಯನ್ನು ಕನ್ನಡ ಸಂಸ್ಕೃತಿ ಸಚಿವರಾದ ಲೀಲಾದೇವಿ ಆರ್. ಪ್ರಸಾದ್ ಅವರು 10-8-97 ರಂದು ಬೆಂಗಳೂರಿನಲ್ಲಿ ಉದ್ಘಾಟಿಸಿದರು.

ಪ್ರಾಚೀನ ಕಾವ್ಯದ ಬಗೆಗೆ ಜನರಲ್ಲಿ ಆಸಕ್ತಿ ಮೂಡಿಸಲು ಸಹಾಯಕವಾಗಿರುವ ಈ ಗಮಕ ಕಲೆಯೂ ಪ್ರಾಚೀನ ಕಲೆಯೇ ಆಗಿದೆ. ಇದನ್ನು ಇಂದಿನ ಪೀಳಿಗೆಯವರಲ್ಲೂ ಉಳಿಸಿ ಬೆಳೆಸುವಲ್ಲಿ ಈ ಬಗೆಯ ಜನಪ್ರಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪರಿಷತ್ತನ್ನು ಮುನ್ನಡೆಸುತ್ತಿರುವವರು ಅಧ್ಯಕ್ಷರಾದ ಶ್ರೀ ಜಿ. ನಾರಾಯಣ, ಉಪಾಧ್ಯಕ್ಷರಾದ ಶ್ರೀ ನೀಲತ್ತಳ್ಳಿ ಕಸ್ತೂರಿ ಮತ್ತಿತರರು.

5) ಓಲೆಗರಿಯಲ್ಲಿ ಲಗ್ನಪತ್ರಿಕೆ! ಇತ್ತೀಚಿಗೆ ಪ್ರಜಾವಾಣಿ ದಿನ ಪತ್ರಿಕೆಯಲ್ಲಿ ಒಂದು ಸ್ವಾರಸ್ಯಕರ ಸುದ್ದಿ ಪ್ರಕಟವಾಗಿದೆ. ಓಲೆಗರಿಯನ್ನು ಆಧುನಿಕ ಉದ್ದೇಶಕ್ಕೂ ಬಳಸಿ ಅದರಲ್ಲಿ ಲಗ್ನಪತ್ರಿಕೆಯನ್ನು ಮುದ್ರಿಸಿ ಹಂಚಿರುವ ಫೋಟೋ ಇದೆ. ಕಾಗದದ ಬಳಕೆಯ ಉಳಿತಾಯಕ್ಕಾಗಿ ಹೀಗೆ ಮಾಡಲಾಗಿದೆ ಎಂದು ಹೇಳಲಾಗಿದೆ. ಇಂಥ ಪ್ರವೃತ್ತಿಯನ್ನು ನಮ್ಮ ಜನ ಬೆಳೆಸಿಕೊಂಡಲ್ಲಿ ಹಳ್ಳಿಗಳಲ್ಲಿ ಕೆಲವರಿಗಾದರೂ ಉದ್ಯೋಗವೇ ದೊರೆತೀತು. ಅಷ್ಟೇ ಏಕೆ ಜನರಲ್ಲಿ ಇದರ ಬಗ್ಗೆ ಜಾಗೃತಿ ಮೂಡಿ ಮೂಲೆಯಲ್ಲಿ ಕೊಳೆಯುತ್ತಿರುವ ಹಳೆಯ ಓಲೆಗರಿ ಗ್ರಂಥಗಳಾದರೂ ಹೊರ ಬಂದಾವು.

ಪ್ರತಿಷ್ಠಾನ ವಾರ್ತೆ

---

1. ದತ್ತಿ ಉಪನ್ಯಾಸಗಳು

ಚಂದ್ರಶೇಖರ ಶರ್ಮಾದತ್ತಿ ಅಂಗವಾಗಿ ಶ್ರೀ ಕೆ. ಎಂ. ಸೀತಾರಾಮಯ್ಯನವರು 24-7-97 ರಂದು "ಗ್ರೀಕ್‌ಮಿಥಕಗಳು" ವಿಷಯ ಕುರಿತು ಉಪನ್ಯಾಸ ನೀಡಿದರು. ದಾತೃಗಳಾದ ಡಾ|| ರಾಮಚಂದ್ರಶರ್ಮಾ ಅವರು ಉಪಸ್ಥಿತರಿದ್ದರು. 22-11-97 ರಂದು ಎಂ. ಜಿ. ನಂಜುಂಡಾರಾಧ್ಯ ಸ್ಮಾರಕ ದತ್ತಿ ಉಪನ್ಯಾಸವನ್ನು ಶ್ರೀ ಎಸ್. ವಿದ್ಯಾಶಂಕರ ಅವರು ವಿದ್ವಾನ್ ಬಿ ಕೆ. ಶಿವಯ್ಯ ಅವರ ಅಧ್ಯಕ್ಷತೆಯಲ್ಲಿ ನೀಡಿದರು. ಶ್ರೀ ಎನ್. ಬಸವಾರಾಧ್ಯ ಅವರ ಅಧ್ಯಕ್ಷತೆಯಲ್ಲಿ ಹಳದೀಪುರ ವಾಸುದೇವರಾವ್ ಅವರು 24-11-97 ರಂದು ಬೇಟೆರಾಯ ದೀಕ್ಷಿತ ಸ್ಮಾರಕ ರಾಮಾಯಣ ದತ್ತಿ ಉಪನ್ಯಾಸವನ್ನು "ರಾಮಾಯಾಣ-ಹೊಸ ದೃಷ್ಟಿ" ಎಂಬ ವಿಚಾರವಾಗಿ ಮಂಡಿಸಿದರು. ಇದೇ ಸಂದರ್ಭದಲ್ಲಿ ಡಾ|| ಡಿ. ವಿ. ಪರಮಶಿವಮೂರ್ತಿ ಅವರ ಸಂವಹನ ಕನ್ನಡ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಈ ಕಾರ್ಯಕ್ರಮ ಗುಣನಿಧಿ ಪ್ರಕಾಶನದ ಸಹಯೋಗದೊಂದಿಗೆ ನಡೆಯಿತು.

ಟಿ. ಎಸ್. ವೆಂಕಣ್ಣಯ್ಯ ದತ್ತಿ ಕಾರ್ಯಕ್ರಮವು ದಾತೃಗಳ ಉದ್ದೇಶದಂತೆ ಚಳ್ಳಕೆರೆಯಲ್ಲಿ 24-8-97 ರಂದು ಅಲ್ಲಿಯ ಕರುನಾಡು ಕಲಾ ಸಾಹಿತ್ಯ ವೇದಿಕೆಯ ಸಹಕಾರದೊಂದಿಗೆ ನಡೆಯಿತು. ಪ್ರೊ|| ಎಲ್. ಎಸ್. ಶೇಷಗಿರಿರಾವ್ ಅವರ ಅಧ್ಯಕ್ಷತೆಯಲ್ಲಿ ಪ್ರೊ|| ಎಂ. ಎಚ್. ಕೃಷ್ಣಯ್ಯ ಮತ್ತು ಪ್ರೊ|| ಜಿ. ಅಶ್ವತ್ಥ ನಾರಾಯಣ ಅವರು ಉಪನ್ಯಾಸಗಳನ್ನು ನೀಡಿದರು.

11-8-97 ರಂದು ಎಂ. ವಿ. ಸೀ. ಕನ್ನಡದತ್ತಿ ಅಂಗವಾಗಿ ಕನ್ನಡ ಶಕ್ತಿ ಕೇಂದ್ರದೊಂದಿಗೆ ಸೇರಿ ಬೆಂಗಳೂರಿನ ಸೌಂದರ್ಯೀಕರಣವನ್ನು ಕುರಿತು ಒಂದು ಚಿಂತನ ಗೋಷ್ಠಿಯನ್ನು ನಡೆಸಲಾಯಿತು. ಸೌಂದರ್ಯೀಕರಣದ ನೆಪದಲ್ಲಿ ಅನ್ಯ ಭಾಷೆ, ಸಂಸ್ಕೃತಿಗೆ ಬಲಿಯಾಗುತ್ತಿರುವ ವಾತಾವರಣವನ್ನು ತಪ್ಪಿಸಿ ಕನ್ನಡೀಕರಣವೂ ಆಗ ಬೇಕೆಂದು ಸಾಹಿತಿ-ಕಲಾವಿದರು ಅಭಿಪ್ರಾಯಪಟ್ಟರು ಸಭೆಯಲ್ಲಿ ಸಿದ್ಧಪಡಿಸಿದ

ನಿರ್ಣಯವನ್ನು ನಗರಸಭೆಗೆ ಕಳುಹಿಸಿ ಅದರ ಅನುಷ್ಠಾನಕ್ಕೆ ಸಾಹಿತಿ-ಕಲಾವಿದರ ನ್ನೊಳಗೊಂಡ ಒಂದು ಸಮಿತಿಯನ್ನು ಸರ್ಕಾರ ರಚಿಸಬೇಕೆಂದು ಸಭೆಯಲ್ಲಿ ಒತ್ತಾಯಿಸ ಲಾಯಿತು. ಮೇಯರ್ ಪದ್ಮಾವತಿ ಗಂಗಾಧರಗೌಡ ಅವರಿಂದ ಉದ್ಘಾಟನೆಯಾದ ಈ ಕಾರ್ಯಕ್ರಮ ಕಲಾವಿದ ಆರ್. ಎಂ. ಹಡಪದ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಅನೇಕ ಜನ ಪ್ರಮುಖ ಕಲಾವಿದರು-ಸಾಹಿತಿಗಳು ಭಾಗವಹಿಸಿದ್ದರು.

2. ಸ್ಮರಣೆಗಳು

11-7-97 ರಂದು ಬಾ. ರಾ. ಗೋಪಾಲ್, ಚಿ. ನ. ಮಂಗಳ ಸಂತಾಪ ಸೂಚಕ ಸಭೆಯನ್ನು ನಡೆಸಲಾಯಿತು. ಡಾ|| ಚಿದಾನಂದ ಮೂರ್ತಿ ಅವರ ಅಧ್ಯಕ್ಷತೆ ಯಲ್ಲಿ ಡಾ|| ಆರ್. ಶೇಷಶಾಸ್ತ್ರಿ ಮತ್ತು ಡಾ|| ಕೆ. ಆರ್. ಗಣೇಶ್ ಅವರು ಡಾ|| ಬಾ. ರಾ. ಗೋಪಾಲ್ ಅವರನ್ನು ಕುರಿತು ಶ್ರೀಮತಿ ಎಚ್. ಎಸ್. ಪಾರ್ವತಿ ಮತ್ತು ಡಾ|| ಎಚ್. ಎಂ. ಮರುಳ ಸಿದ್ದಯ್ಯ ಅವರು ಶಿಕ್ಷಣ ತಜ್ಞೆ ಮತ್ತು ಸಾಹಿತಿ ಪ್ರೊ|| ಚಿ. ನ. ಮಂಗಳ ಅವರನ್ನು ಕುರಿತು ಮಾತನಾಡಿದರು.

25-12-97 ರಂದು ಡಾ|| ಶಿವರಾಮಕಾರಂತರ ಶ್ರದ್ಧಾಂಜಲಿ ಸಭೆಯನ್ನು ನಡೆಸಲಾಯಿತು. ನಿಟ್ಟೂರು ಶ್ರೀನಿವಾಸರಾವ್ ಅವರ ಅಧ್ಯಕ್ಷತೆಯಲ್ಲಿ ಪ್ರೊ|| ಜಿ. ಕೆ. ಗೋವಿಂದರಾವ್, ಪ್ರೊ|| ಎಂ. ಎಚ್. ಕೃಷ್ಣಯ್ಯ ಅವರು ಕಾರಂತರ ವಿವಿಧ ಮುಖಗಳನ್ನು ಕುರಿತು ಮಾತನಾಡಿದರು.

3. ಪುಸ್ತಕ ಬಿಡುಗಡೆ

ದಿನಾಂಕ 17-೯-97 ರಂದು ಎಂ. ವಿ. ಸೀ. ಸಮಗ್ರ ಸಾಹಿತ್ಯ ಸಂಪುಟ, ಶ್ರೀ ಕೃಷ್ಣ ಬಾಲಲೀಲೆ ಭಾಗ - ೨ ಅನ್ನು ಬಿಡುಗಡೆ ಮಾಡುವುದರ ಜೊತೆಗೆ ಸಾವಿತ್ರಮ್ಮ ದತ್ತಿ ಸಾಹಿತ್ಯ ಪ್ರಶಸ್ತಿಯನ್ನು ಹಸ್ತ ಪ್ರತಿಶಾಸ್ತ್ರ ತರಗತಿ ಅರ್ಹತಾ ಪತ್ರವನ್ನು ವಿತರಣೆ ಮಾಡಲಾಯಿತು. ವಿದ್ವಾನ್ ಎನ್. ರಂಗನಾಥಶರ್ಮಾ ಅವರು ಎಂ.ವಿ ಸೀ. ಸಮಗ್ರ ಸಾಹಿತ್ಯ ಮಾಲೆಯಲ್ಲಿ 4ನೇ ಸಂಪುಟವಾಗಿ ಹೊರತಂದಿರುವ ಶ್ರೀ ಕೃಷ್ಣ ಬಾಲಲೀಲೆ ಭಾಗ - ೨ ಅನ್ನು ಬಿಡುಗಡೆ ಮಾಡಿದ್ದರು. ಡಾ|| ಎಚ್. ಎಲ್. ನಾಗೇಗೌಡ ಅವರು ಪ್ರಶಸ್ತಿ ಮತ್ತು ಅರ್ಹತಾ ಪತ್ರಗಳನ್ನು ವಿತರಿಸಿದರು.

ನಿಟ್ಟೂರು ಶ್ರೀನಿವಾಸರಾವ್ ಅವರು ಅಧ್ಯಕ್ಷತೆ ವಹಿಸಿದ್ದರು. ಪ್ರೊ|| ಡಿ. ಲಿಂಗಯ್ಯ ಮತ್ತು ಶ್ರೀಮತಿ ವತ್ಸಲಾದೇವಿ ಅವರು ಪ್ರಶಸ್ತಿ ಗ್ರಂಥಗಳನ್ನು ಕುರಿತು ಮಾತ ನಾಡಿದರು.

30-9-97 ರಂದು ಕುಮಾರ ವ್ಯಾಸ ಭಾರತದ 6ನೇ ಕ್ಯಾಸೆಟ್ ಅನ್ನು ಬಿಡುಗಡೆ ಮಾಡಲಾಯಿತು. ಶ್ರೀಮತಿ ನಾಗವಲ್ಲಿ ನಾಗರಾಜ್ ಅವರ ಕಾವ್ಯವಾಚನ ಮತ್ತು ಪ್ರೊ|| ಅ. ರಾ. ಮಿತ್ರ ಅವರ ವ್ಯಾಖ್ಯಾನವಿರುವ ಈ ಕ್ಯಾಸೆಟ್ ಅನ್ನು ಶ್ರೀ ಹಾರ್ನಳ್ಳಿ ರಾಮಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಬಿಡುಗಡೆ ಮಾಡಲಾಯಿತು. ಆನಂತರ ನಾಗವಲ್ಲಿ ಅವರ ಕಾವ್ಯವಾಚನ ಮತ್ತು ಶತಾವಧಾನಿ ಆರ್. ಗಣೇಶ ಅವರ ವ್ಯಾಖ್ಯಾನ ಇತ್ತು. ಲೈವ್ ಕ್ಯಾಸೆಟ್ ಅವರ ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯಿತು.

4. 'ಶ್ರೀ ಭವನ'ದ ಶಂಕುಸ್ಥಾಪನಾ ಸಮಾರಂಭ

ದಿನಾಂಕ 24-10-97 ರಂದು ನಗರದ ನರಸಿಂಹರಾಜ ಕಾಲೋನಿಯ ಸರ್ಕಾರ ನೀಡಿರುವ ನಿವೇಶನದಲ್ಲಿ ಪ್ರತಿಷ್ಠಾನ ನಿರ್ಮಿಸಲು ಉದ್ದೇಶಿಸಿರುವ ಶ್ರೀ ಭವನದ ಶಂಕು ಸ್ಥಾಪನೆ ಸಮಾರಂಭದ ಉದ್ಘಾಟನೆಯನ್ನು ಶ್ರೀ ಕ್ಷೇತ್ರ ಆದಿ ಚುಂಚನಗಿರಿ ಮಹಾ ಸಂಸ್ಥಾನಮಠದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರು ನೆರವೇರಿಸಿದರು. ಅಧ್ಯಕ್ಷತೆಯನ್ನು ನ್ಯಾಯ ಮೂರ್ತಿ ಶ್ರೀ ನಿಟ್ಟೂರು ಶ್ರೀನಿವಾಸ ರಾವ್ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಾಜಿ ಮುಖ್ಯ ಮಂತ್ರಿಗಳಾದ ಶ್ರೀ ಎಂ. ವೀರಪ್ಪ ಮೊಯ್ಲಿ, ಲೋಕಸಭಾ ಸದಸ್ಯರಾದ ಶ್ರೀ ಅನಂತ ಕುಮಾರ್, ವಿಧಾನ ಸಭಾ ಸದಸ್ಯರಾದ ಶ್ರೀ ಎಚ್. ಎನ್. ನಂಜೇಗೌಡ, ಪ್ರಸಿದ್ಧ ಸಾಹಿತಿ ಗಳೂ ಕಾರ್ಯಸಮಿತಿ ಸದಸ್ಯರೂ ಆದ ಪ್ರೊ|| ಎಲ್. ಎಸ್. ಶೇಷಗಿರಿರಾವ್, ಎನ್. ಎಂ. ಕೆ. ಆರ್. ವಿ. ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರೂ, ಶ್ರೀ ಭವನ ಸಂಪನ್ಮೂಲ ಸಮಿತಿ ಸದಸ್ಯರೂ ಆದ ಶ್ರೀ ಎಂ. ಕೆ. ಪಾಂಡುರಂಗಶೆಟ್ಟಿ, ಬೆಳ್ಳೂರಿನ ಬಿ. ಎಂ. ಶ್ರೀ. ಭವನದ ಉಪಾಧ್ಯಕ್ಷರಾದ ಶ್ರೀ ಜಿ. ನಾರಾಯಣ, ಸುಪ್ರಸಿದ್ಧ ಸಾಹಿತಿ ಪ್ರೊ|| ಜಿ. ಎಸ್. ಶಿವರುದ್ರಪ್ಪ, ನಗರ ಪಾಲಿಕೆ ಸದಸ್ಯರಾದ ಶ್ರೀ ಸತ್ಯನಾರಾಯಣ ಅವರುಗಳು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಚಂದಗಾಣಿಸಿದರು.

ನಿವೇಶದಲ್ಲಿ ವೇದಿಕೆ ನಿರ್ಮಿಸಿ ನಡೆಸಿದ ಈ ವಿಶೇಷ ಕಾರ್ಯಕ್ರಮ ಪ್ರತಿಷ್ಠಾನದ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಸಂಸ್ಥಾಪಕ ಎಂ. ವಿ. ಸೀತಾರಾಮಯ್ಯನವರ ಕನಸು ನೆನಸಾಗುತ್ತಿರುವ ಸುಸಂದರ್ಭ. ಸಮಾರಂಭದಲ್ಲೇ ಶುಭ ಸೂಚನೆಯಂತೆ ಸುಮಾರು 3.5 ಲಕ್ಷ ರೂ.ಗಳ ಕೊಡುಗೆಯ ವಾಗ್ದಾನದ ಸುರಿಮಳೆ. ಅನಂತ ಕುಮಾರ್ ಅವರು ಎಂ. ಪಿ. ಫಂಡ್‌ನಿಂದ ಮೂರು ಲಕ್ಷ ರೂ.ಗಳನ್ನು ಕೊಡಿಸುವುದಾಗಿ ಭರವಸೆ. ನಂಜೇಗೌಡರು 20 ಸಾವಿರ ರೂ. ಗಳನ್ನು, ಪಾಂಡುರಂಗ ಶೆಟ್ಟಿ ಅವರು 10 ಸಾವಿರ ರೂ. ಗಳನ್ನೂ, ಸತ್ಯನಾರಾಯಣ ಅವರು ಕಟ್ಟೆ ಬಳಗದಿಂದ 5 ಸಾವಿರ ರೂ.ಗಳನ್ನೂ, ಸ್ಥಳೀಯ ಇಂಜನಿಯರ್ ಎಸ್. ರಾಮಚಂದ್ರ ಅವರು 5 ಸಾವಿರ ರೂ.ಗಳನ್ನೂ, ಇನ್ನೂ ಅನೇಕರು 2 ಸಾವಿರ, 1 ಸಾವಿರ, 500 ರೂ.ಗಳ ವಾಗ್ದಾನಗಳನ್ನು ಮಾಡಿ, ಚೆಕ್ಕುಗಳನ್ನು ನೀಡಿ ಬಿ. ಎಂ. ಶ್ರೀಕಂಠಯ್ಯನವರ ಮತ್ತು ಎಂ. ವಿ. ಸೀತಾರಾಮಯ್ಯನವರ ಬಗೆಗಿನ ಅಭಿಮಾನದ ಮಹಾಪೂರವನ್ನೇ ಸೃಷ್ಟಿಸಿದರು. ಕಟ್ಟಡ ನಿರ್ಮಾಣಕ್ಕೆ ಸಕಲಸಿದ್ಧತೆಯೂ ನಡೆದಿದ್ದು ಆದಷ್ಟು ಶೀಘ್ರವಾಗಿ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದೆಂದೂ ಮುಂದಿನ ವರ್ಷದ ಈ ದಿನದ ವೇಳೆಗೆ 'ಶ್ರೀ ಭವನ' ಸಿದ್ಧವಾಗುವುದೆಂದು ಶ್ರೀ ಶ್ರೀಗಳವರು ಆಶೀರ್ವಚನ ನೀಡಿದರು.

5. ಬಿ. ಎಂ. ಶ್ರೀ. ಪ್ರತಿಷ್ಠಾನದ ಬೆಳ್ಳೂರು ಶಾಖೆಯ ಕಾರ್ಯಕ್ರಮಗಳು.

9-7-97 ರಂದು ಸರ್ವಜ್ಞನನ್ನು ಕುರಿತು ಉಪನ್ಯಾಸವನ್ನು ಮಾಯಸಂದ್ರದ ನೆಹರೂ ವಿದ್ಯಾಶಾಲೆಯ ಪ್ರಾಂಶುಪಾಲರಾದ ಕೆ. ಬೈರಪ್ಪನವರು ನಡೆಸಿಕೊಟ್ಟರು. ಬೆಂಗಳೂರಿನ ಅನಸೂಯ ನಾಗರಾಜ್ ಕೀರ್ತನ, ವಚನಗಾಯನ ಮಾಡಿದರು. ಆದಿ ಚುಂಚನಗಿರಿ ಆಸ್ಪತ್ರೆಯ ಮುಖ್ಯಸ್ಥರಾದ ಡಾ|| ಟಿ. ಆರ್. ನಾಗರಾಜ್ ಅಧ್ಯಕ್ಷತೆ ವಹಿಸಿದ್ದರು.

29-8-97 ರಂದು ಸುವರ್ಣಸ್ವಾತಂತ್ರ್ಯೋತ್ಸವದ ಅಂಗವಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಬೆಳ್ಳೂರು ಘಟಕ, ಮಂಡ್ಯದ ನೆಹರು ಯುವಕ ಕೇಂದ್ರ ಮತ್ತು ಕನ್ನಡ-ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಲಾಯಿತು. ವಿದ್ವಾನ್ ಬೇಲೂರು ನಾಗರಾಜ್ ಅವರಿಂದ ಕಾವ್ಯವಾಚನವೂ ಬಸವರಾಜು ಹೆಮ್ಮಿಗೆ ಅವರಿಂದ ಜನಪದಗೀತೆಗಳ ಕಾರ್ಯಕ್ರಮವೂ ನಡೆಯಿತು.

9-9-97 ರಂದು ಸಂಗೀತ ರಸ ಕಾರಂಜಿ ಕಾರ್ಯಕ್ರಮವನ್ನೂ 15-8-97 ರಂದು ಬೆಳ್ಳೂರಿನ ಪತ್ರಕರ ಸಂಘ ಮತ್ತು ಪರಿಷತ್ ಘಟಕದ ಸಹಯೋಗದಲ್ಲಿ ಸುವರ್ಣ ಸ್ವಾತಂತ್ರ್ಯೋತ್ಸವ ಸಮಾರಂಭವನ್ನು ನಡೆಸಿ ಸಮೂಹ ನೃತ್ಯ, ದೇಶ ಭಕ್ತಿ ಗೀತೆ, ದೇಶ ಭಕ್ತರ ವೇಷಧಾರಿಗಳ ಸ್ಪರ್ಧೆ, ಏಕ ಪಾತ್ರಾಭಿನಯ ಸ್ಪರ್ಧೆಗಳನ್ನು ನಡೆಸಿ, ಸ್ವಾತಂತ್ರ್ಯ ಹೋರಾಟಗಾರರನ್ನು ಸನ್ಮಾನಿಸಲಾಯಿತು. ಎಚ್. ಕೆ. ಸುರೇಶ್, ಬಿ. ಮಹೇಶ್ ಅವರು, ಎಸ್. ಕೃಷ್ಣಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯೋತ್ಸವದ ಇಣಕು ನೋಟ ಎಂಬ ವಿಷಯ ಕುರಿತು ಮಾತನಾಡಿದರು.

28-11-97 ರಂದು ಬೆಳ್ಳೂರಿನ ಪರಿಷತ್ ಘಟಕದೊಂದಿಗೆ ರಾಜ್ಯೋತ್ಸವ ಕಾರ್ಯಕ್ರಮವನ್ನು ನಡೆಸಲಾಯಿತು. ಎಂ. ಎಸ್. ಜಗನ್ನಾಥ್‌ರವರು ಕನ್ನಡನಾಡು ನುಡಿ ಕುರಿತ ಉಪನ್ಯಾಸವನ್ನು ನೀಡಿದರು. ಮಂಡ್ಯದ ಕನ್ನಡ ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಶ್ರೀ ದಾಸೇಗೌಡರು ಮುಖ್ಯ ಅತಿಥಿಗಳಾಗಿದ್ದರು. ಎನ್. ಆರ್. ಶ್ರೀನಿವಾಸನ್ ಅವರು ಅಧ್ಯಕ್ಷತೆ ವಹಿಸಿದ್ದರು. ಮಂಡ್ಯದ ವಿದ್ಯಾಶಂಕರ್ ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮವೂ ನಡೆಯಿತು.

6. ದಾನಗಳು

ಈ ಸಂಚಿಕೆಯ ಅವಧಿಯಲ್ಲಿ ಪ್ರತಿಷ್ಠಾನಕ್ಕೆ ವಿವಿಧ ಮೂಲಗಳಿಂದ 725 ರೂ. ಗಳು ದಾನವಾಗಿ ಬಂದಿದೆ. ಪ್ರೊ|| ಗರ್ಗೇಶ್ವರಿವೆಂಕಟ ಸುಬ್ಬಯ್ಯನವರು ಆಸಕ್ತಿ ವಹಿಸಿ ಸೋಸಲೆ ಅಯ್ಯಾಶಾಸ್ತ್ರಿ ದತ್ತಿನಿಧಿಗಾಗಿ ಈ ಮೊದಲೆ ಕೂಡಿಸಿದ್ದ 2,000 ರೂ.ಗಳ ಜೊತೆಗೆ ಈ ಕೆಳಕಂಡವರಿಂದ ಒಟ್ಟು 11,500 ರೂ.ಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ.

ಎಂ. ಜಾನಕಿ	2,000	ಅನಸೂಯ ಶಾಸ್ತ್ರಿ	1,000
ಎಸ್. ರಾಮಚಂದ್ರ	1,000	ರುಕ್ಮಿಣಿಯಮ್ಮ	1,000
ವಿಶಾಲುವಾಸುದೇವ್	1,000	ವಿಶಾಲಾಕ್ಷಮ್ಮರಾಮಸ್ವಾಮಿ	500
ಟಿ. ಎನ್. ಶಾಮರಾವ್	1,000	ಎಲ್. ಜಯಲಕ್ಷ್ಮಮ್ಮ	1,000
ಎಸ್. ಕೆ. ದ್ವಾರಕಮ್ಮ	1,000	ಎಂ. ಎಸ್. ಶೈಲ	1,000
ಯೋಗಾನರಸಿಂಹ	1,000		

ಕಟ್ಟಡ ನಿಧಿಗೆ ಶಂಕುಸ್ಥಾಪನಾ ಸಮಾರಂಭದಲ್ಲಿ ವಾಗ್ದಾನ ಮಾಡಿದವರು ಮತ್ತು ಇತರ ಅಭಿಮಾನಿಗಳಿಂದ ಒಟ್ಟು 38,006 ರೂ.ಗಳು ಸಂಗ್ರಹವಾಗಿದೆ.

ಡಾ|| ಶೇಷಶಾಸ್ತ್ರಿ, ಅನಂತಪುರ	301	ಬಿ. ಎನ್. ಶಾಮರಾವ್	25,000
ಎಸ್. ಆರ್. ಆರ್. ಕೆ. ಶರ್ಮ	1,001	ಅನ್ನಪೂರ್ಣ ವಿ.	501
ಸಿ. ಮಹದೇವಪ್ಪ	1,000	ಕೆ. ವಿ. ವೆಂಕಟರಾಮಯ್ಯ	1,000
ಪೂಜಾರ್ ಗುರುರಾಜಾಚಾರ್, ಮಂತ್ರಾಲಯ	200		
ಜಿ. ನಾರಾಯಣ	1,000	ಕೆ. ವಿ. ಚಂದ್ರಶೇಖರ್	1,001
ಎಸ್. ರಾಮಚಂದ್ರ	5,001	ಎಸ್. ನಾಗೇಶರಾವ್	1,000
ಎಸ್. ರಮಾದೇವಮ್ಮ	1,001		

ಮಂತ್ರಾಲಯದ ಶ್ರೀ ರಾಘವೇಂದ್ರ ದೇವಾಲಯದ ಪೂಜಾರ್ ಅವರು ಮತ್ತು ಈ ಮೊದಲೇ ಮೈಸೂರಿನ ಶ್ರೀ ಎಚ್. ರಾಮಣ್ಣ ಅವರು ತಮ್ಮ ನಿವೃತ್ತಿ ವೇತನದಿಂದ ಉಳಿಸಿ ಎರಡು ತಿಂಗಳು ತಲಾ 250 ರಂತೆ ನೀಡಿರುವ ದಾನಗಳು ವಿಶೇಷವಾದವುಗಳಾಗಿವೆ. ಇಂತಹ ಮಹನೀಯರ ಅಭಿಮಾನವನ್ನು ಪ್ರತಿಷ್ಠಾನ ಅತ್ಯಂತ ಕೃತಜ್ಞತೆಯಿಂದ ಸ್ವೀಕರಿಸಿದೆ.

ಅಭಿನಂದನೆ

ಕು. ಶಿ. ಜಾನಪದ ಪ್ರಶಸ್ತಿ

ದಾವಣಗೆರೆಯ ಡಿ.ಆರ್.ಎಂ. ವಿಜ್ಞಾನ ಕಾಲೇಜಿನ ಕನ್ನಡ ಉಪನ್ಯಾಸಕ ಡಾ|| ಎಂ. ಜಿ. ಈಶ್ವರಪ್ಪ–ಅವರಿಗೆ ೧೯೯೬ನೆಯ ವರ್ಷದ ಕು. ಶಿ. ಜಾನಪದ ಪ್ರಶಸ್ತಿ ದೊರಕಿದೆ, ಅವರ "ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ" ಎಂಬ ಕೃತಿಗಾಗಿ. ಪ್ರಶಸ್ತಿಯ ಮೊತ್ತ ಎರಡು ಸಾವಿರ ರೂ. ಗಳು.

ಅರಸು ಪ್ರಶಸ್ತಿ

ದೇವರಾಜ ಅರಸು ಸಂಶೋಧನ ಸಂಸ್ಥೆ ಪ್ರತಿ ವರ್ಷ ನೀಡತಕ್ಕ ಅರಸು ಪ್ರಶಸ್ತಿಯನ್ನು ೧೯೯೭ ಆಗಸ್ಟ್ ೨೦ ರಂದು ಅರಸು ಅವರ ಲಿನೆಯ ಹುಟ್ಟುಹಬ್ಬದ ದಿನ ಪ್ರೊ|| ಸುಜನ–ಅವರಿಗೆ ನೀಡಲಾಗಿದೆ. ಪ್ರೊ|| ಸುಜನ–ಅವರು ಮೈಸೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿ, ಲೇಖಕರಾಗಿ, ಕವಿಯಾಗಿ ಸೇವೆ ಸಲ್ಲಿಸಿದ್ದಾರೆ. ದೇವರಾಜ ಅರಸು ಅವರಿಗೆ ಆತ್ಮೀಯರಾಗಿ ಇದ್ದವರು. ಈ ಪ್ರಶಸ್ತಿ ಒಂದು ಲಕ್ಷ ರೂಪಾಯಿ ಮೌಲ್ಯವುಳ್ಳದು.

ಗೊರೂರು ಪ್ರಶಸ್ತಿ

ಕನ್ನಡದ ಖ್ಯಾತ ಲೇಖಕರಾದ ಶ್ರೀ ಎನ್. ಕೆ. ಕುಲಕರ್ಣಿ (ಎನ್ಕೆ) ಅವರಿಗೆ ೧೯೯೭ನೆಯ ವರ್ಷದ "ಗೊರೂರು ಪ್ರಶಸ್ತಿ"ಯನ್ನು ೭-೧೦-೯೭ ರಂದು ನೀಡಲಾಗಿದೆ. ೧೯೭೫ರಲ್ಲಿ ಕೇಂದ್ರ ಸರಕಾರದ ಮತ್ತು ರಾಜ್ಯ ಸರಕಾರದ ಪ್ರಶಸ್ತಿ ಪಡೆದಿರುವ ಎನ್ಕೆಯವರು ೧೯೭೬ರಲ್ಲಿ ಪ್ರಥಮ ರಾಷ್ಟ್ರೀಯ ಆಕಾಶವಾಣಿ ಪ್ರಶಸ್ತಿಯನ್ನು ಪಡೆದಿರುತ್ತಾರೆ. ಇವರು ೮೩ ವರ್ಷದ ಹಿರಿಯ ಕನ್ನಡ ಲೇಖಕರು.

ವಿದ್ಯಾರಣ್ಯ ಪ್ರಶಸ್ತಿ

ಖ್ಯಾತ ಕನ್ನಡ ಸಾಹಿತಿ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಮಾಜಿ ಕುಲಪತಿ ಡಾ|| ದೇ. ಜವರೇಗೌಡರಿಗೆ, "ದೆಹಲಿ ಕನ್ನಡಿಗ" ಪತ್ರಿಕೆ ನೀಡುತ್ತಿರುವ ವಿದ್ಯಾರಣ್ಯ ಪ್ರಶಸ್ತಿಯನ್ನು ನೀಡಲಾಗಿದೆ. ಕನ್ನಡ ಸಾಹಿತ್ಯ – ಸಂಸ್ಕೃತಿಗಳಿಗಾಗಿ ಅಮೋಘ ಸೇವೆ ಸಲ್ಲಿಸಿರುವ ಜ್ಞಾಪಕಾರ್ಥವಾಗಿ ಈ ಪ್ರಶಸ್ತಿ ಸಂದಿರುತ್ತದೆ.

ಅತ್ತಿಮಬ್ಬೆ ಪ್ರಶಸ್ತಿ

ಕನ್ನಡ ನವೋದಯ ಸಾಹಿತ್ಯ ಪರಂಪರೆಯ ಹಿರಿಯ ಲೇಖಕಿ ಶ್ರೀಮತಿ ಶಾಂತಾ ದೇವಿ ಮಾಳವಾಡ – ಅವರಿಗೆ ಪ್ರತಿಷ್ಠಿತ "ದಾನ ಚಿಂತಾಮಣಿ ಅತ್ತಿಮಬ್ಬೆ" ಪ್ರಶಸ್ತಿಯನ್ನು ೨೩–೯–೯೭ ರಂದು ಧಾರವಾಡದಲ್ಲಿ ವಿತರಿಸಲಾಯಿತು.

ಕನಕ ಪುರಂದರ, ಗುಬ್ಬಿವೀರಣ್ಣ, ಶಿಶುನಾಳ ಶರೀಫ್ ಪ್ರಶಸ್ತಿಗಳು

೧೯೯೭ನೆಯ ವರ್ಷದ ಕನಕ-ಪುರಂದರ ಪ್ರಶಸ್ತಿಯನ್ನು ಸಂಗೀತ ವಿದ್ವಾನ್ ಆರ್. ಕೆ. ಶ್ರೀಕಂಠನ್ ಅವರಿಗೆ ೮–೮–೧೯೯೭ ರಂದು ನೀಡಲಾಗಿದೆ. ಹಿಂದಿನ ವರ್ಷ ಇದೇ ಪ್ರಶಸ್ತಿಯನ್ನು ಗಮಕರತ್ನಾಕರ, ಕವಿ ಗಮಕಿ ಶ್ರೀ ಎಂ. ರಾಘವೇಂದ್ರರಾಯರಿಗೆ ಕೊಡಲಾಗಿದ್ದಿತು. ಈ ಬಾರಿ ಇದರೊಂದಿಗೆ ಶ್ರೀ ಗಿರೀಶ ಕಾರ್ನಾಡ ಅವರಿಗೆ ಗುಬ್ಬಿ ವೀರಣ್ಣ ಪ್ರಶಸ್ತಿಯನ್ನು, ಹಿರಿಯ ಸುಗಮ ಸಂಗೀತಗಾರರಾದ ಶ್ರೀ ಸಿ. ಅಶ್ವತ್ಥ್– ಅವರಿಗೆ ಶಿಶುನಾಳ ಷರೀಫ್ ಪ್ರಶಸ್ತಿಯನ್ನು ನೀಡಲಾಯಿತು. ಈ ಮೂರೂ ಪ್ರಶಸ್ತಿಗಳು ಒಂದೊಂದು ಲಕ್ಷ ರೂಪಾಯಿ ಮೊತ್ತದವಾಗಿರುತ್ತವೆ.

ಸಾಹಿತ್ಯ ಕ್ಷೇತ್ರದಲ್ಲಿ 'ಪಂಪ ಪ್ರಶಸ್ತಿ' ನೀಡುವಂತೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಈ ಪ್ರಶಸ್ತಿಗಳನ್ನೂ ಕರ್ನಾಟಕ ಸರ್ಕಾರ ನೀಡುತ್ತಿದೆ.

ಚಾವುಂಡರಾಯ ಪ್ರಶಸ್ತಿ

ಶ್ರವಣಬೆಳ್ಗೊಳದ ದಿಗಂಬರ ಜೈನ ಮುಜರಾಯಿ ಸಂಸ್ಥೆಗಳ ಆಡಳಿತದ ಅಧ್ಯಕ್ಷರಾದ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸ್ಥಾಪಿಸಿರುವ ಎರಡು ಲಕ್ಷ ರೂ.ಗಳ ದತ್ತಿನಿಧಿಯಿಂದ ಪ್ರತಿವರ್ಷವೂ ೨೦ ಸಾವಿರ ರೂ ಗಳ ಚಾವುಂಡರಾಯ ಪ್ರಶಸ್ತಿಯನ್ನು ಅತ್ಯುನ್ನತ ಸಾಹಿತ್ಯ ಸೇವೆಗಾಗಿ ನೀಡಲಾಗುತ್ತಿದೆ ೧೯೯೭ನೆಯ ವರ್ಷದ ಈ ಪ್ರಶಸ್ತಿಯನ್ನು ಪ್ರೊ|| ಎಸ್. ವಿ. ಪರಮೇಶ್ವರ ಭಟ್ಟರಿಗೆ ನೀಡಲಾಗಿದೆ.

ತಿರುಮಲಾಂಬಾ ಪ್ರಶಸ್ತಿ

ಬೆಂಗಳೂರಿನ ಎನ್. ಎಂ. ಕೆ. ಆರ್. ವಿ. ಕಾಲೇಜು ಪ್ರತಿ ವರ್ಷ ನೀಡುವ ರಾಷ್ಟ್ರ ಮಟ್ಟದ ಈ ಪ್ರಶಸ್ತಿಯು 1997ನೇ ಸಾಲಿಗೆ ಖ್ಯಾತ ತೆಲುಗು ಕಾದಂಬರಿಕಾರ್ತಿ ಶ್ರೀಮತಿ ಕೆ. ರಾಮಲಕ್ಷ್ಮಿ – ಅವರಿಗೆ ಲಭಿಸಿದೆ. ಇದರ ಮೊತ್ತ ಇಪ್ಪತ್ತು ಸಾವಿರ ರೂಪಾಯಿ ಇದರೊಂದಿಗೆ ಡಾ|| ನಿರುಪಮಾ, ಬಿ. ಎಸ್. ಚಂದ್ರಕಲಾ — ಇವರಿಗೆ ಸದೋದಿತ ಸಾಹಿತ್ಯ ಪ್ರಶಸ್ತಿ ಹತ್ತು ಸಾವಿರ ರೂಪಾಯಿ, ಶ್ರೀಮತಿ ಪದ್ಮಾವತಿ ವಿಠಲರಾವ್–ಅವರಿಗೆ ಕರ್ನಾಟಕ ಪಲ್ಲವಿ ಪ್ರಶಸ್ತಿ ಐದುಸಾವಿರ ರೂಪಾಯಿ. ಡಾ|| ಸ್ಯಮಂತಕಮಣಿ ನರೇಂದ್ರನ್–ಅವರಿಗೆ ಗಾರ್ಗಿ ಪ್ರಶಸ್ತಿ ಐದುಸಾವಿರ ರೂಪಾಯಿ ಪ್ರದಾನ ಮಾಡಿ ಗೌರವಿಸಿದರು. ಪ್ರಶಸ್ತಿ ವಿಜೇತರನ್ನು ಶ್ರೀ ಎಂ. ಕೆ. ಪಾಂಡುರಂಗ ಶೆಟ್ಟಿ – ಅವರು ಅಭಿನಂದಿಸಿದರು.

ರಾಜ್ಯೋತ್ಸವ ಪ್ರಶಸ್ತಿ

ದಿನಾಂಕ ೧–೧೧–೧೯೯೭ ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ೫೧ ಮಂದಿಗೆ ೧೯೯೭ನೆಯ ವರ್ಷದ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಲಾಯಿತು. ಸಾಹಿತ್ಯ ಪ್ರಶಸ್ತಿ ವಿಜೇತರಿವರು–ಪ್ರತಿಷ್ಠಾನದ ಗೌರವಾಧ್ಯಕ್ಷರಾದ ನಿಟ್ಟೂರು ಶ್ರೀನಿವಾಸರಾವ್, ಅಧ್ಯಕ್ಷರಾದ ಎನ್. ಬಸವಾರಾಧ್ಯ ಮತ್ತು ಡಾ|| ಕಮಲಾ ಹಂಪನಾ, ಎನ್. ನರಸಿಂಹಯ್ಯ, ಪಂಚಾಕ್ಷರಿ ಹಿರೇಮಠ, ಯಶವಂತ ಚಿತ್ತಾಲ, ಡಾ|| ಬಿ. ಸಿ. ರಾಮಚಂದ್ರ ಶರ್ಮಾ ಇನ್ನೂ ಮುಂತಾದ ಗಣ್ಯರು ಈ ಪ್ರಶಸ್ತಿ ವಿಜೇತರಲ್ಲಿದ್ದಾರೆ.

ಪಂಪ ಪ್ರಶಸ್ತಿ

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಶ್ರೇಷ್ಠ ಸಂಶೋಧಕರಾದ ಡಾ|| ಎಂ. ಎಂ. ಕಲಬುರ್ಗಿ ಅವರನ್ನು ೧೯೯೭ನೆಯ ವರ್ಷದ ಪಂಪ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಇವರು ಹಲವಾರು ಸಂಶೋಧನ ಕೃತಿಗಳನ್ನು ಬರೆದು ಪ್ರಕಟಿಸಿದ್ದಾರೆ. ಈ ಪ್ರಶಸ್ತಿ ಒಂದು ಲಕ್ಷ ರೂಪಾಯಿ, ಕಂಚಿನ ವಿಗ್ರಹ ಮತ್ತು ತಾಮ್ರ ಪಟವನ್ನೊಳಗೊಂಡಿದೆ.

ವರ್ಧಮಾನ ಪ್ರಶಸ್ತಿ

ಕನ್ನಡದಲ್ಲಿ ಶ್ರೇಷ್ಠ ವಿಮರ್ಶಕರಾದ ಬಪ್ಪನಾಡು ಪ್ರೊ|| ದಾಮೋದರ ರಾವ್ ಅವರಿಗೆ ೧೯೯೬–೯೭ನೆಯ ವರ್ಷದ ವರ್ಧಮಾನ ಸಾಹಿತ್ಯ ಪ್ರಶಸ್ತಿಯೂ ಹೊಸ ಪೀಳಿಗೆಯ ಕತೆಗಾರ ಶ್ರೀ ಮೊಗಳ್ಳಿ ಗಣೇಶ – ಅವರಿಗೆ ವರ್ಧಮಾನ ಉದಯೋನ್ಮುಖ ಪ್ರಶಸ್ತಿಯೂ ೨-೧೨-೯೭ ರಂದು ಘೋಷಿತವಾಗಿದೆ. ದಾಮೋದರರಾಯರ ‘ಆಯಾಮಗಳು’ ಎಂಬ ವಿಮರ್ಶ ಕೃತಿ ಮತ್ತು ಮೊಗಳ್ಳಿಯರ “ಬುಗುರಿ” ಎಂಬ ಕಥಾ ಸಂಕಲನವೂ ಪ್ರಶಸ್ತಿ ಪಾತ್ರ ಕೃತಿಗಳು. ವರ್ಧಮಾನ ಸಾಹಿತ್ಯ ಪ್ರಶಸ್ತಿ ಆರು ಸಾವಿರ ರೂ. ಮತ್ತು ತಾಮ್ರ ಪತ್ರವುಳ್ಳದು.

ಸಾವಿತ್ರಮ್ಮ ದೇ ಜ ಗೌ ಪ್ರಶಸ್ತಿ

ಖ್ಯಾತ ಮುಸ್ಲಿಂ ಮಹಿಳಾ ಲೇಖಕಿ ಸಾ ರಾ ಅಬೂಬಕರ್ – ಅವರಿಗೆ ಸಾವಿತ್ರಮ್ಮ ದೇ ಜ ಗೌ ಪ್ರಶಸ್ತಿಯನ್ನು ಮೈಸೂರಿನಲ್ಲಿ ಇತ್ತೀಚೆಗೆ ವಿತರಿಸಲಾಯಿತು.

ವಿಜಯಶ್ರೀ ಪ್ರಶಸ್ತಿ

ನವದೆಹಲಿಯ ಇಂಡಿಯ ಇಂಟರ್‌ನೇಶನಲ್ ಫ್ರೆಂಡ್‌ಶಿಪ್ ಸೊಸೈಟಿ ಹಲವು ವರ್ಷಗಳಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ, ಸಾಹಿತ್ಯ, ಸಮಾಜ ಸೇವೆಗಳಲ್ಲಿ ವಿಶಿಷ್ಟ ಸೇವೆ ಸಲ್ಲಿಸುತ್ತಿರುವವರಿಗೆ ‘ವಿಜಯಶ್ರೀ’ ಪ್ರಶಸ್ತಿಯನ್ನು ನೀಡುತ್ತಿದೆ. ೧೯೯೭ನೆಯ ವರ್ಷದ ಪ್ರಶಸ್ತಿಗಾಗಿ ಕರ್ನಾಟಕ ದಿಂದ ಆಯ್ಕೆಯಾದವರು ಏಳು ಮಂದಿ — (೧) ಸು. ರಂಗಸ್ವಾಮಿ ಎಂ. ಎ. (ಲೇಖಕರು, ಪ್ರಕಾಶಕರು, ಪ್ರಕಾಶಕರ ಪರಿಷತ್ತಿನ ಅಧ್ಯಕ್ಷರು, ಗೊರೂರು ಪ್ರತಿಷ್ಠಾನ–ಅತ್ತಿಮಬ್ಬೆ ಪ್ರತಿಷ್ಠಾನಗಳ ಕಾರ್ಯದರ್ಶಿ), (೨) ಮನೋಹರಿ ಪಾರ್ಥಸಾರಥಿ (ಅತ್ತಿಮಬ್ಬೆ ಪ್ರತಿಷ್ಠಾನದ ನಿರ್ದೇಶಕಿ, ಕನ್ನಡ ಎಂ.ಎ. ಪದವೀಧರೆ), (೩) ವಸಂತೀಚಂದ್ರಶೇಖರ್ ಎಂ.ಎ. (ಸಾಹಿತಿ, ಕವಯಿತ್ರಿ, ಕಾದಂಬರಿಕಾರ್ತಿ, ಶಿಕ್ಷಕಿ), (೪) ಲಲಿತಾಂಬಾ ಚಂದ್ರಶೇಖರ್ ಎಂ.ಎ.ಎಂ.ಎಸ್ಸಿ. (ಶೈಕ್ಷಣಿಕ ಸೇವೆ, ಹತ್ತಕ್ಕು ಮಿಕ್ಕು ಪುಸ್ತಕ ಪ್ರಕಟಣೆ ಮಾಡಿದವರು, ಪ್ರವಾಸಾನುಭವಿ, ಹಲವು ಪ್ರಶಸ್ತಿ ಪಡೆದವರು), (೫)

ಎಸ್. ಲಲಿತಾ ('ವಾರ್ತಾ ಸಂಚಿಕೆ'ಯ ಸಂಪಾದಕಿ, ಶಿಕ್ಷಕಿ, ಲೇಖಕಿ, ಹತ್ತು ಪುಸ್ತಕಗಳ ಪ್ರಕಟಣೆ ಮಾಡಿದವರು, ಬಿ.ಎ.ಬಿ.ಎಡ್ ಪದವೀಧರೆ). (೬) ಕೆ. ಎಸ್. ಪ್ರಮೀಳಾ ಫಾಲನೇತ್ರ, ಎಂ.ಎ.,ಬಿ.ಎಡ್. (ಕನ್ನಡ ಲೇಖಕಿಯರ ಪರಿಷತ್ತಿನ ಕಾರ್ಯದರ್ಶಿ, ಕವನಗಾರ್ತಿ, ಲೇಖಕಿ, ಸಮಾಜ ಸೇವಾ ನಿರತೆ), (೭) ಎಸ್. ವಿ. ಶ್ರೀನಿವಾಸರಾವ್, (ಖ್ಯಾತ ಲೇಖಕರು, ಕರ್ನಾಟಕ ಪ್ರಕಾಶಕರ ಸಂಘದ ಕಾರ್ಯದರ್ಶಿ ಮತ್ತು ಖಜಾಂಚಿ, ೬೦ ಕ್ಕೂ ಮಿಕ್ಕಿ ಕೃತಿಗಳನ್ನು ಪ್ರಕಟಿಸಿದವರು, ಕ. ಸಾ. ಪ. ಮಾಜಿ ಗೌರವ ಕೋಶಾಧಿಕಾರಿ ಇವರಿಗೆ ನೀಡಲಾಗಿದೆ.

ಪರಮಾನಂದ ಪ್ರಶಸ್ತಿ

1997ನೇ ಸಾಲಿಗೆ ಈ ಪ್ರಶಸ್ತಿಯನ್ನು ಹಾಸ್ಯ ಲೇಖಕಿಯರಾದ ಭುವನೇಶ್ವರಿ ಹೆಗಡೆ ಅವರಿಗೆ 'ನಕ್ಕು ಹಗುರಾಗಿರಿ' ಎಂಬ ಪುಸ್ತಕಕ್ಕೆ ನೀಡಲಾಗಿದೆ.

ಮೇಲೆ ಕಾಣಿಸಿದ ವಿದ್ವಾಂಸರಿಗೆ ಬಿ. ಎಂ. ಶ್ರೀ. ಪ್ರತಿಷ್ಠಾನದ ಹೃತ್ಪೂರ್ವಕ ಅಭಿನಂದನೆಗಳು.

ಶ್ರದ್ಧಾಂಜಲಿ

ಡಾ|| ಕೆ. ಕೃಷ್ಣಮೂರ್ತಿ

ಕನ್ನಡ ಸಂಸ್ಕೃತ, ಇಂಗ್ಲಿಷ್ ಭಾಷೆಗಳಲ್ಲಿ ವಿಶೇಷ ಪಾಂಡಿತ್ಯವನ್ನು ತಾಳಿದ್ದ ಹಾಗೂ ವಿದ್ವತ್ ಪ್ರಪಂಚವನ್ನೇ ಶ್ರೀಮಂತಗೊಳಿಸಿದ್ದ ವಿದ್ಯಾಸಾಗರ ಡಾ|| ಕೆ. ಕೃಷ್ಣ ಮೂರ್ತಿಯವರು ದಿನಾಂಕ ೮-೭-೧೯೯೭ ರಂದು ಮೈಸೂರಿನಲ್ಲಿ ತಮ್ಮ ೭೫ನೆಯ ವರ್ಷದಲ್ಲಿ ಸ್ವರ್ಗಸ್ಥರಾದರು. ಹಾಸನಜಿಲ್ಲೆಯ ಕೇರಳಾಪುರದಲ್ಲಿ ಜನಿಸಿದ ಅವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ವಿಭಾಗದ ಮುಖ್ಯಸ್ಥರಾಗಿದ್ದರು. ನಿವೃತ್ತರಾದನಂತರ ಮೈಸೂರಿನಲ್ಲಿ ನೆಲಸಿದ್ದರು. ಅವರು ಸಂಸ್ಕೃತದ ಅಲಂಕಾರ ಶಾಸ್ತ್ರಗಳನ್ನೆಲ್ಲ ಕನ್ನಡಕ್ಕೆ ಅನುವಾದಿಸಿದ್ದಾರೆ. ಮೂವತ್ತು ಜನರ ಸಂಶೋಧನೆ ಗಳಿಗೆ ಮಾರ್ಗದರ್ಶಕರಾಗಿ ಅವರಿಗೆ ಡಾಕ್ಟರೇಟ್ ಪದವಿ ಕೊಡಿಸಿದ್ದಾರೆ. ಅನೇಕ ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಅಭಿಜ್ಞಾನ ಮತ್ತು ಆನಂದ ಭಾರತಿ, ಇವು ಅವರ ಅಭಿಮಾನಿಗಳು ಮತ್ತು ಶಿಷ್ಯರು ಎರಡು ವರ್ಷಗಳ ಹಿಂದೆ ಅರ್ಪಿಸಿದ ಅಭಿನಂದನ ಗ್ರಂಥಗಳು. ಪ್ರತಿಷ್ಠಾನದ ಹಿತೈಷಿಗಳೂ ಸದಸ್ಯರೂ ಆಗಿದ್ದ ದಿವಂಗತರು 'ಸೃಜನ ಶೀಲತೆ ಮತ್ತು ಪಾಂಡಿತ್ಯ' ಪುಸ್ತಕವನ್ನೂ ಪ್ರತಿಷ್ಠಾನಕ್ಕಾಗಿ ಬರೆದುಕೊಟ್ಟಿದ್ದರು.

ಎಚ್. ಎಂ. ಶಂಕರನಾರಾಯಣರಾವ್

ಖ್ಯಾತ ಲೇಖಕರೂ ಮೈಸೂರು ಶಾರದಾಮಂದಿರ ಪ್ರಕಾಶಕರೂ ಆದ ಪ್ರೊ|| ಎಚ್. ಎಂ ಶಂಕರನಾರಾಯಣ ರಾಯರು ೧೭-೯-೧೯೯೭ ಬುಧವಾರ, ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ತಮ್ಮ ನಿವಾಸದಲ್ಲಿ ಕಾಲವಶರಾದರು. ಅವರಿಗೆ ೮೪ ವರ್ಷ ವಯಸ್ಸಾಗಿತ್ತು. ಚಿತ್ರದುರ್ಗ ಜಿಲ್ಲೆಯ ಹರಿಹರದಲ್ಲಿ ಜನನ, ಶಾರದಾವಿಲಾಸ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದರು. ಮೈ.ವಿ.ವಿ. ಖಾಸಗಿ ಕಾಲೇಜು ಅಧ್ಯಾಪಕರ ಸಂಘದ ಅಧ್ಯಕ್ಷರಾಗಿದ್ದರು, ಮೈ.ವಿ.ವಿ. ಸಿಂಡಿಕೇಟ್ ಸದಸ್ಯರೂ ಆಗಿದ್ದರು. ಗ್ರಂಥ ಸಂಪಾದನೆ, ವಿಮರ್ಶೆ, ಸಂಶೋಧನೆ ಗಳನ್ನು ಮಾಡಿರುವ ಅವರು ಮೂವತ್ತಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ೧೯೭೮ರಲ್ಲಿ ಅವರಿಗೆ ರಾಜ್ಯಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ಅರವತ್ತು ತುಂಬಿ

ದಾಗ 'ಸ್ನೇಹಾಂಜಲಿ' ಎಂಬ ಅಭಿನಂದನೆ ಗ್ರಂಥವನ್ನು ಅರ್ಪಿಸಲಾಗಿದ್ದಿತು. ಪ್ರತಿಷ್ಠಾನದ ಮೇಲೆ ಅಭಿಮಾನವಿಟ್ಟ ತಮ್ಮ ಬಳಿಇದ್ದ ಬಿ.ಎಂ.ಶ್ರೀ., ಟಿ. ಎಸ್. ವೆಂಕಟಯ್ಯ ಮುಂತಾದವರು ಪರಿಶೀಲಿಸಿದ್ದ ಕುಮಾರ ವ್ಯಾಸ ಭಾರತ ಸಂಗ್ರಹಣದ ಹಸ್ತ ಅಮೂಲ್ಯ ಪ್ರತಿಯನ್ನು ಪ್ರತಿಷ್ಠಾನಕ್ಕೆ ನೀಡಿದ ಮಹನೀಯರು.

ಚಂದ್ರಶೇಖರ ಶಾಸ್ತ್ರಿ

ಸಂಸ್ಕೃತ ವಿದ್ವಾಂಸರಾದ ಶತಾಯುಷಿ (೧೦೫ ವರ್ಷ ಬದುಕಿದವರು) ೨೪-೧೦-೧೯೯೭ ಶುಕ್ರವಾರ ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನ ಮಾಗಳದಲ್ಲಿ ನಿಧನ ಗೊಂಡರು. ಅವರಿಗೆ 'ವ್ಯಾಕರಣತೀರ್ಥ' ಎಂಬ ಬಿರುದಿದ್ದಿತು. ಅವರು ೧೯೪೦ ರಲ್ಲಿ ಧಾರವಾಡದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯದ ೨೫ನೆಯ ಸಮ್ಮೇಳನಾ ಧ್ಯಕ್ಷರಾಗಿದ್ದರು. ೧೯೬೬ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ೧೯೪೫ರಲ್ಲಿ ರಾಜ್ಯ ಪ್ರಶಸ್ತಿ ಅವರಿಗೆ ಲಭಿಸಿವೆ. ಹೈದರಾಬಾದು ಕರ್ನಾಟಕ ಪ್ರದೇಶದಲ್ಲಿ ಕನ್ನಡದ ಏಳಿಗೆಗಾಗಿ ಶ್ರಮಿಸಿದವರು. ಅವರು ಯಾದಗಿರಿ ಸಂಸ್ಕೃತ ಕಾಲೇಜಿನಲ್ಲಿ (೧೯೨೪-೫೧), ಹುಬ್ಬಳ್ಳಿಯ ಜಗದ್ಗುರು ಗಂಗಾಧರ ಕಾಲೇಜಿನಲ್ಲಿ (೧೯೫೧-೫೪) ಪ್ರಾಂಶುಪಾಲರಾಗಿದ್ದರು.

ಡಾ|| ಶಿವರಾಮ ಕಾರಂತ (೧೯೦೨-೧೯೯೭)

ದಿಟ್ಟನಡೆ, ನೇರನುಡಿಗೆ ಹೆಸರಾದ, ಭಾರತೀಯ ಜ್ಞಾನಪೀಠ ಪ್ರಶಸ್ತಿ ಪಡೆದ ಡಾ|| ಕೋಟ ಶಿವರಾಮಕಾರಂತರು ದಿನಾಂಕ: ೯-೧೨-೧೯೯೭ರಂದು ನಮ್ಮನ್ನಗಲಿ ದರು. ಶಿವರಾಮಕಾರಂತರ ಅಂತ್ಯ ಸಂಸ್ಕಾರವನ್ನು ಸಕಲ ಸರ್ಕಾರಿ ಮರ್ಯಾದೆ ಗಳೊಡನೆ ನಡೆಸಲಾಯಿತು. ಸರಕಾರ ರಾಜ್ಯಾದ್ಯಂತ ಎರಡು ದಿನಗಳ ಶೋಕಾ ಚರಣೆಯನ್ನು ಘೋಷಿಸಿತ್ತು. ಮಂಗಳೂರಿನಲ್ಲಿ ದಿನಾಂಕ 11 ರಿಂದ ಪ್ರಾರಂಭವಾದ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪದಲ್ಲಿ ಭಾಗವಹಿಸ ಬೇಕಾಗಿದ್ದ ಕಾರಂತರ ಬೃಹತ್ ತೈಲಚಿತ್ರವನ್ನು ಸಕಲಜನರ ಶ್ರದ್ಧಾಂಜಲಿ ಪೂರ್ವಕ ಮೆರವಣಿಗೆಯಲ್ಲಿ ಕೊಂಡಯ್ಯ ಬೇಕಾಯಿತು.

ಅರ್ಥಪೂರ್ಣವಾಗಿ ಬದುಕನ್ನು ನಡೆಯಿಸಿದ ಕಾರಂತರು ನಾಡು-ನುಡಿಗಳಿಗೆ ಸಲ್ಲಿಸಿದ ಸೇವೆ ಅಪಾರ. ಅವರು ಅನುಸರಿಸಿದ ಗಾಂಧಿವಾದ, ಪರಿಸರಪ್ರೇಮ, ದೇಶ ಪ್ರೇಮ, ನೇರನಡೆ, ವೈಚಾರಿಕತೆ, ಸಾಹಸೀಜೀವನ, ದಿಟ್ಟನಿಲುವು ಇವುಗಳೆಲ್ಲಾ ಅನು ಕರಣೀಯವಾದವುಗಳು. ಬಾಲ ಸಾಹಿತ್ಯ, ಕತೆ, ಕಾದಬಂರಿ ವಿಜ್ಞಾನಕೃತಿಗಳು, ಶಬ್ದಕೋಶ, ವಿಶ್ವಕೋಶಗಳು ವಿಮರ್ಶೆ ಯಕ್ಷಗಾನಕಲೆ, ಸಂಸ್ಕೃತ ಮುಂತಾದ

ಬಹುಮುಖ ಸೇವೆಗಳಿಂದ ಹೆಸರಾಂತು ೯೫ ವರ್ಷ ಬಾಳಿ ಜೀವನ ಸಾರ್ಥಕ್ಯವನ್ನು ತಾಳಿದ ಕಾರಂತರನ್ನು ಕಳೆದುಕೊಂಡು ಕನ್ನಡನಾಡೇ ಕಣ್ಣೀರಿಟ್ಟಿದೆ.

ಬಿ. ಎಂ. ಶ್ರೀ ಪ್ರತಿಷ್ಠಾನದ ಹಿತೈಷಿಗಳೂ, ಅಭಿಮಾನಿಗಳೂ ಆಗಿದ್ದ ಕಾರಂತರು ಕಳೆದ ವರ್ಷವಷ್ಟೇ 'ಶ್ರೀಭವನ' ಕಟ್ಟಡ ನಿರ್ಮಾಣಕ್ಕೆ 20,000ರೂ. ಗಳ ಉದಾರ ಕೊಡುಗೆಯನ್ನು ನೀಡಿದ್ದರಲ್ಲದೆ ಪ್ರತಿಷ್ಠಾನ ನಡೆಸಿದ್ದ ಪ್ರತಿಷ್ಠಿತ ಕಾರ್ಯಕ್ರಮವಾದ '**ಈ** ಶತಮಾನದ ಹಿರಿಯರು ಒಂದು ಸಂವಾದ'ದಲ್ಲಿ ಭಾಗವಹಿಸಿ ಅತ್ಯಂತ ಲವಲವಿಕೆಯಿಂದ ಸಂವಾದದಲ್ಲಿ ತೊಡಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿಕೊಟ್ಟಿದ್ದರು. ಪ್ರತಿಷ್ಠಾನದ ಪ್ರಾರಂಭದಿಂದಲೂ ಶ್ರೀಯುತರನ್ನು ಗೌರವಸದಸ್ಯರನ್ನಾಗಿ ಸ್ವೀಕರಿಸುವ ನಮ್ಮ ಮನವಿಯನ್ನು ನಿರಾಕರಿಸುತ್ತಲೆ ಬಂದವರು ಕಾರಂತರು. 'ನಾನು ದೂರ ದೂರಿನಲ್ಲಿದ್ದು ಏನನ್ನೂ ಮಾಡಲಾಗದಿರುವಾಗ ಸದಸ್ಯತ್ವ ಪಡೆಯಲಾಗದು' ಎಂದು ಪ್ರತಿಪಾದಿಸಿದ ಮಾರ್ಗದರ್ಶಕರು. ಇಂತಹ ನೇರ ನಡೆಯ, ಸರಳ ಸ್ವಭಾವದ ಬದುಕಿನ ಹಲವು ಶ್ರೇಷ್ಠ ಮೌಲ್ಯಗಳ ಪ್ರತಿಪಾದಕರಾಗಿದ್ದ ಕಾರಂತರ ಅಗಲಿಕೆಯಿಂದ ಮಾನವಲೋಕದ ಉತ್ಕೃಷ್ಟ ಮಾದರಿ ವ್ಯಕ್ತಿತ್ವವೊಂದು ಕಣ್ಮರೆಯಾದಂತಾಗಿದೆ.

ಕೆ. ವೆಂಕಟಕೃಷ್ಣಯ್ಯ

ಗಡಿನಾಡ ಕನ್ನಡಿಗರ ಹೋರಾಟಗಾರ, ಯಕ್ಷಗಾನ ಬೊಂಬೆಯಾಟದ ಸ್ಥಾಪಕ, ಯಕ್ಷಗಾನ ಕವಿ ಪಾರ್ತಿಸುಬ್ಬನ ಕುಟುಂಬದಲ್ಲಿ ಜನಿಸಿದವರಾದ ಕಾಸರಗೋಡಿನ 'ಸಿರಿಗನ್ನಡ ಪ್ರೆಸ್' ಮಾಲಿಕ ಕೆ. ವೆಂಕಟಕೃಷ್ಣಯ್ಯನವರು ತಮ್ಮ ಎಪ್ಪತ್ತನೆಯ ವಯಸ್ಸಿನಲ್ಲಿ ದಿನಾಂಕ ೧೫–೧೨–೧೯೯೭ರಂದು ನಿಧನಗೊಂಡರು. ನಲ್ವತ್ತು ವರ್ಷಗಳ ಹಿಂದೆ ಇವರು 'ಗೀತಾಪ್ರಕಾಶನ'ವನ್ನು ಪ್ರಾರಂಭಿಸಿ ಅನೇಕ ಹಿರಿಯ ಕಿರಿಯ ಕವಿಗಳ ಕನ್ನಡ ಪುಸ್ತಕಗಳನ್ನು ಮುದ್ರಿಸಿ ಕಾಸರಗೋಡಿಗೆ ಕೀರ್ತಿ ತಂದಿದ್ದಾರೆ. ಕಾಸರಗೋಡಿನ ಚರಿತ್ರೆಯ ವಿಶ್ವಕೋಶವೆನಿಸಿದ 'ಮಧುಪುರ' (೧೯೯೦) ಎಂಬ ಪುಸ್ತಕವನ್ನು ಸಂಪಾದಿಸಿದ್ದಾರೆ. 'ಮಧುರಸ್ಮೃತಿ' ಎಂಬುದೂ ಇವರ ಸಂಪಾದನೆ ಮತ್ತು ಪ್ರಕಟಣೆ, ಪಾರ್ತಿಸುಬ್ಬನ ಕೃತಿಗಳನ್ನು ಸಂಪಾದಿಸಿ ವಿಶ್ವಕನ್ನಡ ಸಮ್ಮೇಳನದಲ್ಲಿ ಬಿಡುಗಡೆಗೊಳಿಸದ್ದಾರೆ. 'ಕಾಸರಗೋಡು ಮಿತ್ರ' ಎಂಬ ಕನ್ನಡ ಸಾಪ್ತಾಹಿಕವನ್ನು ಪ್ರಾರಂಭಿಸಿದ್ದರು.

ನಮ್ಮನ್ನಗಲಿದ ಈ ವಿದ್ವಾಂಸರಿಗೆಲ್ಲ ಬಿ. ಎಂ. ಶ್ರೀ. ಪ್ರತಿಷ್ಠಾನ ಬಳಗದವರು ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾರೆ.

ಈ ಸಂಚಿಕೆಯ ಲೇಖಕರು

1. ವಿದ್ವಾನ್ ಎನ್. ರಂಗನಾಥ ಶರ್ಮ
ಜಾನಕಿ ಕೃಪ, 83, 4ನೇ ಮೈನ್,
ವಿಜಯನಗರ, ಬೆಂಗಳೂರು-40.

2. ಬಿ. ಎಸ್. ಸಣ್ಣಯ್ಯ
33/1, 8ನೇ ಅಡ್ಡರಸ್ತೆ,
ಜಯಲಕ್ಷ್ಮೀಪುರ, ಮೈಸೂರು-12

3. ಟಿ. ಕೇಶವಭಟ್ಟ
754, ಶ್ರೀ ವರ್ಧನ, 15 ನೇ ಮುಖ್ಯರಸ್ತೆ,
ಬನಶಂಕರಿ 2ನೇ ಹಂತ,
ಬೆಂಗಳೂರು-70

4. ಮಾ. ನಂ. ಶ್ರೀನಾಥ
7/7 ಎ, ಗೋಕುಲ, 9ನೇ ಅಡ್ಡರಸ್ತೆ,
3ನೇ ಮುಖ್ಯ ರಸ್ತೆ, ಚಾಮರಾಜ ಪೇಟೆ,
ಬೆಂಗಳೂರು-16

5. ಎಸ್. ಎನ್. ಸಿಂಹ
ಉಪ್ಪುನೀರು ಬಾವಿ ಬೀದಿ,
ಮೇಲುಕೋಟೆ-571 431

6. ಕೆ. ಪಿ. ರಾಜಗೋಪಾಲ್
754, ಶ್ರೀ ವರ್ಧನ, 15ನೇ ಮುಖ್ಯರಸ್ತೆ,
ಬನಶಂಕರಿ 2ನೇ ಹಂತ,
ಬೆಂಗಳೂರು-70

7. ವಿದ್ವಾನ್ ತಲಂಗಳ ರಾಮಕೃಷ್ಣ ಭಟ್ಟ
ಅಂಚೆ ಬಾಯರ್, ಪೈವಳಿಕೆ,
ತಲಂಗಳ ಹೌಸ್,
ಕಾಸರಗೋಡು-671348

8. ವಿದ್ವಾನ್ ತಾಳ್ತಜೆ ಕೃಷ್ಣಭಟ್ಟ
ಪಂಜಳ ಮನೆ, ಅಂಚೆ ಉಪ್ಪಿನಂಗಡಿ,
574 241-ದಕ್ಷಿಣ ಕನ್ನಡ ಜಿಲ್ಲೆ.

9. ಜಿ. ಎನ್. ಉಪಾಧ್ಯ
ಉಪನ್ಯಾಸಕ, ಕನ್ನಡ ವಿಭಾಗ,
ಮುಂಬಯಿ ವಿಶ್ವವಿದ್ಯಾಲಯ,
ವಿದ್ಯಾನಗರಿ, ಮುಂಬಯಿ-400 098.

10. ಡಾ. ಕೆಳದಿ ವೆಂಕಟೇಶ ಜೋಯಿಸ್
ಕ್ಯೂರೇಟರ್, ಕೆಳದಿ ವಸ್ತು ಸಂಗ್ರಹಾಲಯ
ಮತ್ತು ಸಂಶೋಧನ ಕೇಂದ್ರ, ಕೆಳದಿ.

11. ನಾ. ಗೀತಾಚಾರ್ಯ
ಕನ್ನಡ ರೀಡರ್, ಶೇಷಾದ್ರಿಪುರಂ ಕಾಲೇಜು,
ಸ್ನಾತಕೋತ್ತರ ಕೇಂದ್ರ,
ಬೆಂಗಳೂರು

12. ಎಸ್. ಶಿವಣ್ಣ
ಸಂಪಾದಕರು, ಕನ್ನಡ ಅಧ್ಯಯನ ಕೇಂದ್ರ.
ಬೆಂಗಳೂರು ವಿಶ್ವ ವಿದ್ಯಾಲಯ-560 050

13. ಡಾ. ಎಂ. ಜಿ. ನಾರಿ
ಬಾಣದಾರ ಓಣಿ, ಬಾದಾಮಿ-587 101

14. ಎಸ್. ವಿ. ಪ್ರಭಾವತಿ
ಭಾರತೀಯ ಸಂಸ್ಕೃತಿ ವಿದ್ಯಾಪೀಠ,
ವಿಜಯನಗರ, ಬೆಂಗಳೂರು-40.

ಪ್ರತಿಷ್ಠಾನದ ಗೌರವ ಸದಸ್ಯರು

1) ಪ್ರೊ|| ಎ. ಎನ್. ಮೂರ್ತಿರಾವ್. 2) ಡಾ|| ಪು.ತಿ.ನ. 3) ಪ್ರೊ|| ಎಸ್. ವಿ. ಪರಮೇಶ್ವರಭಟ್ಟ. 4) ಪ್ರೊ|| ತ. ಸು. ಶಾಮರಾವ್ 5) ಡಾ|| ಜಿ. ಎಸ್. ದೀಕ್ಷಿತ್ 6) ವಿದ್ವಾನ್ ಎನ್. ರಂಗನಾಥ ಶರ್ಮ 7) ಪ್ರೊ|| ಗರ್ಗೇಶ್ವರಿ ವೆಂಕಟ ಸುಬ್ಬಯ್ಯ 8) ಡಾ|| ಆರ್. ಸಿ. ಹಿರೇಮಠ್.

ವಿಮರ್ಶೆಗಾಗಿ ಗ್ರಂಥಗಳ ಎರಡು ಪ್ರತಿಗಳನ್ನು ಕಳಿಸಬೇಕು

ಸೃಜನಾತ್ಮಕ ಗ್ರಂಥಗಳನ್ನು ಸಾಧಾರಣವಾಗಿ ವಿಮರ್ಶೆ ಮಾಡಲಾಗುವುದಿಲ್ಲ. ಆದರೆ, ಕಳಿಸಿದರೆ ವೈಶಿಷ್ಟ್ಯವುಳ್ಳ ಅಂಥ ಗ್ರಂಥಗಳನ್ನು ಸಾಧ್ಯವಾದರೆ ಅವಲೋಕನ ಮಾಡಿಸಲಾಗುವುದು.

ವಿನಿಮಯ ಪತ್ರಿಕೆಗಳು

1) ಪ್ರಬುದ್ಧ ಕರ್ನಾಟಕ, ಮಾನವಿಕ ಕರ್ನಾಟಕ, ವಿಜ್ಞಾನ ಕರ್ನಾಟಕ, ಮೈಸೂರು 2) ಸಾಧನೆ, ಬೆಂಗಳೂರು 3) ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಬೆಂಗಳೂರು. 4) ಮಿಥಿಕ್ ಸೊಸೈಟಿ ಜರ್ನಲ್, 5) ಬಸವ ಪಥ, ಬೆಂಗಳೂರು. 6) ಶಂಕರ ಭಾಸ್ಕರ, ಬೆಂಗಳೂರು. 7) ಧರ್ಮಪ್ರಭ, ಬೆಂಗಳೂರು 8) ಜಾನಪದ ಜಗತ್ತು, ಬೆಂಗಳೂರು. 9) ಅನ್ವೇಷಣೆ, ಬೆಂಗಳೂರು. 10) ಅಪರಂಜಿ, ಬೆಂಗಳೂರು 11) ಕರ್ನಾಟಕ ಭಾರತಿ, ಧಾರವಾಡ. 12) ಸುಗುಣಮಾಲಾ, ಉಡುಪಿ. 13) ಸತ್ಯಶುದ್ಧ ಕಾಯಕ, ಚಿತ್ರದುರ್ಗ. 14) ತರಳಬಾಳು, ಸಿರಿಗೆರೆ. 15) ಅಭಿಮತ, ದೆಹಲಿ.

ಕರ್ನಾಟಕ ಲೋಚನ ಚಂದಾ ವಿವರ

ವಾರ್ಷಿಕ ಚಂದಾ	:	ವ್ಯಕ್ತಿಗಳಿಗೆ ರೂ. 15-00 ಗ್ರಂಥಾಲಯ, ಸಂಘ ಸಂಸ್ಥೆಗಳಿಗೆ ರೂ. 25-00
ಆಜೀವ	:	ರೂ. 150-00 ಪ್ರತಿಷ್ಠಾನದ ಸದಸ್ಯರಿಗೆ ಲೋಚನ ಉಚಿತ. ಬಿಡಿ ಪ್ರತಿ ರೂ. 10.00
ಪ್ರತಿಷ್ಠಾನದ ಸದಸ್ಯತ್ವ		ವಾರ್ಷಿಕ ರೂ. 25-00 ಆಜೀವ ರೂ. 250-00

KARNATAKA LOCHANA Half Yearly Journal, Published by B. M. Sri. Smaraka Prathishthana, Gokhale Institute of Public Affairs Premises, Basavanagudi Road, Bangalore 560019
Printed by : Prabhu Mudrana, Shakambari Nagar, Sarakki, Bangalore-560 078. Phone : 6640976

Reg. No. 03260/23/2/ALTC/88 KARNATAKA LOCHANA

ಪ್ರತಿಷ್ಠಾನದ ಈಚಿನ ಪ್ರಕಟಣೆಗಳು

		ಉತ್ತಮ	ಸಾದಾ
1.	ಸಂಗಮರ ಕಾಲದ ವಿಜಯನಗರ		75-00
2.	ಕುಮಾರವ್ಯಾಸ ಭಾರತ ಸಂಗ್ರಹ	75-00	40-00
3.	ಶಂಬಾ ಕೃತಿ ಸಮೀಕ್ಷೆ		35-00
4.	ಎಂ. ವಿ. ಸೀ. ಸಂಸ್ಮರಣೆ		25-00
5.	ವೈಚಾರಿಕ ಜಾಗೃತಿ		15-00
6.	ಹಸ್ತಪ್ರತಿಶಾಸ್ತ್ರ ಪರಿಚಯ		20-00
7.	ಸಂವಿಧಾನ ಮತ್ತು ಕಾನೂನು		25-00
8.	ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಜೀವನ ಚರಿತ್ರೆ)		15-00
9.	ಬಸವಪ್ಪ ಶಾಸ್ತ್ರಿಗಳು		25-00
10.	ನವ್ಯಸ್ಫೂರ್ತಿ (ಗೋಕಾಕ್ ಸಾಹಿತ್ಯ ಸಮೀಕ್ಷೆ)		35-00
11.	ಕದಂಬ (ಎಂ.ವಿ.ಸೀ. ಸಮಗ್ರ ಸಾಹಿತ್ಯ-1. ಸಮಗ್ರ ಸಂಶೋಧನ ಲೇಖನಗಳು)	100-00	80-00
12.	ಕವಿರಾಜಮಾರ್ಗ (ಎಂ.ವಿ.ಸೀ. ಸಮಗ್ರ ಸಾಹಿತ್ಯ-2)	100-00	80-00
13.	ಕವಿರಾಜಮಾರ್ಗ ವಿಮರ್ಶೆ (ಸಮಗ್ರ ಸಾಹಿತ್ಯ- 3 ಕವಿರಾಜಮಾರ್ಗವನ್ನು ಕುರಿತ ಲೇಖನಗಳು)	100-00	
14.	ಶ್ರೀ ಕೃಷ್ಣ ಬಾಲಲೀಲೆ,ಭಾಗ-2(ಸಮಗ್ರ ಸಾಹಿತ್ಯ-4)		200-00
15.	ಪದ್ಮಿನಿ ಕಲ್ಯಾಣ		15-00
16.	ಬೇಟೆರಾಯ ದೀಕ್ಷಿತರ ದೇವರನಾಮಗಳು ಮತ್ತು ಸಂಪ್ರದಾಯದ ಹಾಡುಗಳು		25-00

ಸಿದ್ಧತೆಯಲ್ಲಿ

1. ತೌಲನಿಕ ಸಾಹಿತ್ಯ (ಅಚ್ಚಿನಲ್ಲಿ)
2. ತಿರುಕ್ಕುರಳ್ (ಕನ್ನಡಾನುವಾದ)